ಬೆಂಗಳೂರು
ಮಂಗಳವಾರ, 9 ಜೂನ್ 2026
ಸಂಪುಟ 33, ಸಂಚಿಕೆ 219, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ತಿಂಡಿ ಪೊಟ್ಟಣಕ್ಕೆ ಸುದ್ದಿ ಪತ್ರಿಕೆ ಬಳಸುವಂತಿಲ್ಲ | ೧೦
ಪಿಒಕೆ ಸಂಘರ್ಷದಲ್ಲಿ 11 ಸಾವು | ೧೦
ಆಫ್ಘನ್ ವಿರುದ್ಧ ಭಾರತಕ್ಕೆ ಬೃಹತ್ ಗೆಲುವು | ೧೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ನೀವು ಸುಖ ಪಡುವುದು ನಿಮ್ಮ ಅರಿವಿನಿಂದ, ಉಳಿದವರನ್ನೂ ಸುಖ ಪಡುವಂತೆ ಮಾಡುವುದು ನಿಮ್ಮ ಸದ್ಗುಣಗಳಿಂದ.
▲ ನಾಣ್ನುಡಿ

ಬಕ್ರೀದ್ ಮತ್ತು ವಿವಿಧ ರಾಜ್ಯಗಳ ಗೋಹತ್ಯಾ ನಿಷೇಧ ಕಾನೂನುಗಳು

ಧರಣಿ ಮಂಡಲ

• ಕೆ.ಎಸ್.ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಸಿನಿ ತಾರೆಯರಿಂದ ಮಾಹಿತಿ ಸಂಗ್ರಹಿಸಲು ಸಿಐಡಿ ನಿರ್ಧಾರ

ಶಿವಂ ಅಸೋಸಿಯೇಟ್ ಬಹುಕೋಟಿ ವಂಚನೆ ಪ್ರಕರಣ

• **ಬೆಳಗಾವಿ:** ಶಿವಂ ಅಸೋಸಿಯೇಟ್ಸ್ ಬಹುಕೋಟಿ ರೂಪಾಯಿ ಠೇವಣಿ ವಂಚನೆ ಪ್ರಕರಣದ ತನಿಖೆಯನ್ನು ಸಿಐಡಿ ಚುರುಕುಗೊಳಿಸಿದೆ. ಪ್ರಕರಣದ ವಿವಿಧ ಆಯಾಮಗಳ ಕುರಿತು ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು, ಹಣದ ಹರಿವು ಹಾಗೂ ಹೂಡಿಕೆದಾರರ ಹಣದ ಬಳಕೆಯ ಕುರಿತ ಮಾಹಿತಿ ಸಂಗ್ರಹಿಸಲಾಗುತ್ತಿದೆ.ಕಳೆದ ಡಿಸೆಂಬರ್ 27ರಂದು ಬೆಳಗಾವಿಯಲ್ಲಿ ನಡೆದಿದ್ದ ಕನ್ನಡ ಉತ್ಸವ ಕಾರ್ಯಕ್ರಮವೂ ತನಿಖೆಯ ವ್ಯಾಪ್ತಿಗೆ ಬಂದಿದ್ದು, ಈ ಕಾರ್ಯಕ್ರಮಕ್ಕೆ ವೆಚ್ಚವಾದ ಹಣದ ಮೂಲದ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ➡ಪುಟ 9

ಕಾದ ಕಬ್ಬಿಣ ಸೋರಿ ಒಂಬತ್ತು ಜನ ಸಾವು

• **ವಿಶಾಖಪಟ್ಟಣಂ:** ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿರುವ ರಾಷ್ಟ್ರೀಯ ಇಸ್ಪಾತ್ ನಿಗಮ್ ಲಿಮಿಟೆಡ್ (ವಿಜಾಗ್ ಸ್ಟೀಲ್ ಪ್ಲಾಂಟ್)ನಲ್ಲಿ, ಸೋಮವಾರ ಸಂಭವಿಸಿದ ಭೀಕರ ಕೈಗಾರಿಕಾ ದುರಂತದಲ್ಲಿ ಕನಿಷ್ಠ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಫಿಲಿಪ್ಪೀನ್ಸ್‌ನಲ್ಲಿ ಪ್ರಬಲ ಕಂಪನಕ್ಕೆ 32 ಮಂದಿ ಸಾವು

• ಪುಟ ೧೦

ನೇಪಾಳ ಗಡಿಯ ಬಳಿ ಅಭಿಷೇಕ್ ಆಪ್ತನ ಸೆರೆ

• ಪುಟ ೧೦

24 ಭಾರತೀಯ ನಾವಿಕರಿದ್ದ ತೈಲ ಹಡಗಿನಲ್ಲಿ ಅಗ್ನಿ ಅವಘಡ

• ಪುಟ ೧೦



ಸವಾಲು ಎದುರಿಸಲು ಭಾರತ ಸಮಗ್ರ ಸಿದ್ಧ

• ಪುಟ ೧೦

ಸುದ್ದಿ ಸಮಗ್ರ

ಮೋದಿ ಪ್ರಧಾನಿಯಾಗಿ ಜೂನ್ 10ಕ್ಕೆ ಹೊಸ ದಾಖಲೆ

ಬಡವರ ಕಲ್ಯಾಣ, ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ



ಸವಾಲುಗಳ ನಡುವೆಯೂ ಜಗದ ಮನ್ನಣೆ ಪಡೆದ ಭಾರತ

ಹಿಂದೆಲ್ಲ ಬಡವರ ಉದ್ಧಾರ ಎಂಬುದು ಘೋಷಣೆಯಾಗಿ ಉಳಿದು ಯೋಜನೆಗಳು ಅವರಿಗೆ ತಲುಪದೇ ಇದ್ದರೆ, ಈಗ ಅವನ್ನು ಪರಿಣಾಮಕಾರಿಯಾಗಿ ತಲುಪಿಸಲು ತಂತ್ರಜ್ಞಾನದ ಮೂಲಕವೇ ಸಾಧ್ಯವಾಗಿರುವುದು ಗಮನಾರ್ಹ. 2014ರ ಮೇ 26ರಂದು ಭಾರತದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನರೇಂದ್ರ ಮೋದಿಯವರು 2019ರ ಮೇ 30ರಂದು 2ನೇ ಅವಧಿಗೆ ಅಧಿಕಾರಕ್ಕೆ ಬಂದರು. ➡ಪುಟ 9

ನಮೋ ನೇತೃತ್ವದ ಹೊಸ ಭಾರತ



• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಜೂ.10ಕ್ಕೆ ಹೊಸ ದಾಖಲೆ ಬರೆಯುವ ಹಿನ್ನೆಲೆಯಲ್ಲಿ ಬಡವರ ಕಲ್ಯಾಣ, ಯುವ, ಮಹಿಳೆಯರಿಗೆ ಉಜ್ವಲ ಅವಕಾಶ ನೀಡಿಕೆ, ವಿಶ್ವದರ್ಜೆಯ ಮೂಲಸೌಕರ್ಯಗಳ ಅಭಿವೃದ್ಧಿ, ಭಾರತೀಯರ ಜೀವನಮಟ್ಟ ಸುಧಾರಣೆ ಸೇರಿದಂತೆ ಭಾರತದ ಸಮಗ್ರ ಅಭಿವೃದ್ಧಿಗೆ ಅವರ ಸರಕಾರ ಆದ್ಯತೆ ನೀಡಿರುವುದನ್ನು ಇಡಿ ವಿಶ್ವವೇ ಗುರುತಿಸುವಂತೆ ಮಾಡಿದೆ.

ಬ್ಯಾಂಕಿಂಗ್ ವ್ಯವಹಾರವನ್ನೇ ಕಾಣದೆ ಖಾಸಗಿ ವಲಯದ ಸಾಲ, ಬಡ್ಡಿಯ ಹೊರೆಗಳಿಂದ ನಲುಗಿಹೋಗಿದ್ದ ದೇಶದ 45 ಕೋಟಿಗೂ ಅಧಿಕ ಬಡವರಿಗೆ ಜನಧನ್ ಯೋಜನೆಯ ಮೂಲಕ ಬ್ಯಾಂಕಿಂಗ್ ಕ್ಷೇತ್ರಕ್ಕೆ ಪ್ರವೇಶ ಕಲ್ಪಿಸಿ, ನೇರ ಲಾಭ ವರ್ಗಾವಣೆ(ಡಿಬಿಟಿ) ಯೋಜನೆಯ ಮೂಲಕ ಒಂದು ರೂಪಾಯಿ ಲಂಚವಿಲ್ಲದೆ ತಮ್ಮ ಖಾತೆಗಳಿಗೇ ನೇರವಾಗಿ ಸರಕಾರದ ಯೋಜನೆಗಳ ಲಾಭ ಪಡೆಯುವಂತೆ ಮಾಡಿರುವುದು, ಸ್ವಚ್ಛ ಭಾರತ್, ಪಿಎಂ ಆವಾಜ್, ಜಲ್‌ಜೀವನ್ ಮಿಷನ್, ಆಯುಷ್ಮಾನ್ ಭಾರತ್, ದೇಶದಲ್ಲಿ ಕೋಟ್ಯಂತರ ಶೌಚಾಲಯಗಳ ನಿರ್ಮಾಣ ಮೂಲಕ ಮಹಿಳೆಯರು, ಬಡವರಿಗೆ ಘನತೆಯ ಬದುಕು ಕಲ್ಪಿಸಿಕೊಡುವ ಜೊತೆಗೆ ವೈಜ್ಞಾನಿಕ, ತಂತ್ರಜ್ಞಾನ ಕ್ಷೇತ್ರಗಳಲ್ಲೂ ಅಭೂತಪೂರ್ವ ಪ್ರಗತಿ ಸಾಧಿಸುವ ಮೂಲಕ ಯುವಜನತೆಗೆ ವಿಪುಲ ಅವಕಾಶಗಳನ್ನು ಕಲ್ಪಿಸಿಕೊಡುವ ಮೂಲಕ ಜನತೆಯ ಜೀವನಮಟ್ಟ ಸುಧಾರಣೆಗೈದ ಹಿರಿಮೆ ಮೋದಿ ಸರಕಾರದ್ದಾಗಿದೆ. ➡ಪುಟ 9

ನೆಹರು ದಾಖಲೆ ಮುರಿಯಲಿರುವ ಮೋದಿ

4,399 ದಿನಗಳ ಆಡಳಿತದ ಐತಿಹಾಸಿಕ ಮೈಲುಗಲ್ಲು

ಇದೇ ಜೂನ್ 10ರಂದು ಮೋದಿ ಅವರು ಪ್ರಧಾನಿಯಾಗಿ ನಿರಂತರವಾಗಿ 4,399 ದಿನಗಳ ಸೇವೆ ಸಲ್ಲಿಸಿ, ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮುರಿದ ಅತ್ಯಂತ ದೀರ್ಘಾವಧಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಹೊರಹೊಮ್ಮಲಿದ್ದಾರೆ. ಮೈಲುಗಲ್ಲುಗಳು ಸಾಮಾನ್ಯವಾಗಿ ಸಾಂಕೇತಿಕ ಮಹತ್ವ ಹೊಂದಿದ್ದರೂ, ಒಂದು ಸರ್ಕಾರದ ನಿಜವಾದ ಮೌಲ್ಯಮಾಪನ ಅದು ದೇಶವನ್ನು ಎಷ್ಟರಮಟ್ಟಿಗೆ ಬದಲಾಯಿಸಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದರೆ, ಮೋದಿ ಯುಗವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಅತ್ಯಂತ ಪರಿಣಾಮಕಾರಿ ಹಾಗೂ ನಿರ್ಣಾಯಕ ಅವಧಿಗಳಲ್ಲೊಂದಾಗಿ ಗುರುತಿಸಿಕೊಂಡಿದೆ. ಕಳೆದ 12 ವರ್ಷಗಳಲ್ಲಿ ಭಾರತವು ಜಾಗತಿಕ ವೇದಿಕೆಯಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿದ್ದು, ದೇಶದ ಆಡಳಿತ ವ್ಯವಸ್ಥೆಯಲ್ಲಿಯೂ ಮಹತ್ವದ ಪರಿವರ್ತನೆಗಳು ನಡೆದಿವೆ. ➡ಪುಟ 9

ವಯಸ್ಸಿನ ದಾಖಲೆ ನೀಡಿದರೆ ಅವಕಾಶ

ಐಡಿ ಇದ್ದರಷ್ಟೆ ಪಬ್ ಪ್ರವೇಶ: ಗೃಹ ಸಚಿವ



• **ಬೆಂಗಳೂರು:** ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೂವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸೋಮವಾರ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಈ ಸೂಚನೆ ನೀಡಿದ ಅವರು, ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು. ಒಂದು ವೇಳೆ, ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆಯ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ➡ಪುಟ 9

ನಿರ್ಧಾರಕ್ಕೆ ಕಾರಣ

ಬೆಂಗಳೂರಿನಲ್ಲಿ ಹದಿಹರೆಯದವರು ಮತ್ತು ಯುವಜನರಲ್ಲಿ ಹೆಚ್ಚುತ್ತಿರುವ ಮದ್ಯಪಾನ ಹಾಗೂ ಮಾದಕ ದ್ರವ್ಯಗಳ ಬಳಕೆಯ ಬಗೆಗಿನ ಆತಂಕದ ಹಿನ್ನೆಲೆಯಲ್ಲಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಕ್ರೈಸ್ಟ್ ವಿಶ್ವವಿದ್ಯಾಲಯ ಮತ್ತು ಮಣಿಪಾಲದ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಸಂಶೋಧಕರು ನಡೆಸಿದ ಸಂಶೋಧನೆಯಲ್ಲಿ ನಗರದ ಪ್ರತಿ ಮೂವರು ಹದಿಹರೆಯದವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಬಳಕೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಅಪಾಯದಲ್ಲಿದ್ದಾರೆ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಸಚಿವರು ಈ ನಿರ್ಧಾರ ಕೈಗೊಂಡಿದ್ದಾರೆ.

ಮದ್ಯ ಪೂರೈಕೆಗೂ ನಿರ್ಬಂಧ



ಪ್ರಮುಖ ನಿರ್ದೇಶನಗಳು

1. ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೂವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು.
2. ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು.
3. ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ➡ಪುಟ 9

ಕೈನಿಂದ ಖರ್ಗೆ, ಖೇರಾ, ಮನ್ಸೂರ್, ಬಿಜೆಪಿಯಿಂದ ನಾಗರಾಜ್

ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ?

ಜೂ.11ಕ್ಕೆ ಫಲಿತಾಂಶ ಪ್ರಕಟ

• **ಬೆಂಗಳೂರು:** ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಯ 4 ಸದಸ್ಯ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರಾ ಹಾಗೂ ಮನ್ಸೂರ್ ಅಲಿ ಖಾನ್ ಹಾಗೂ ಬಿಜೆಪಿ ಅಭ್ಯರ್ಥಿ ಪ್ರೊ. ಎಂ.ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿ ರಾಜ್ಯಸಭೆ ಪ್ರವೇಶಿಸಲಿದ್ದಾರೆ. ವಿಧಾನಸಭೆಯಲ್ಲಿ ಶಾಸಕರ ಸಂಖ್ಯಾಬಲದಲ್ಲಿ ಕಾಂಗ್ರೆಸ್ ಪಕ್ಷದ ಮೂವರು ಅಭ್ಯರ್ಥಿಗಳು ಗೆಲ್ಲಲು ಸಾಧ್ಯವಿದೆ. ಬಿಜೆಪಿಯ ಒಬ್ಬ ಅಭ್ಯರ್ಥಿ ಗೆಲ್ಲಬಹುದಾಗಿದೆ. ಈ ಹಿನ್ನೆಲೆಯಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಗೆಲ್ಲಲು ಸಾಧ್ಯವಾಗುವಷ್ಟು ಶಾಸಕರ ಸಂಖ್ಯಾಬಲ ಇಲ್ಲದಿರುವ ಹಿನ್ನೆಲೆ ಜೆಡಿಎಸ್ ಈ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ➡ಪುಟ 9



ರಾಜ್ಯಸಭೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ. ನಾಗರಾಜ್ ಸೋಮವಾರ ನಾಮಪತ್ರ ಸಲ್ಲಿಸಿದರು. ಬಿ.ಎಸ್. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಇದ್ದರು.

5 ಸ್ಥಾನ ಗೆಲ್ಲಲು ಕೈ ರಣತಂತ್ರ • ಪುಟ 9

ಲೋಕಸಭಾ ಸ್ಪೀಕರ್‌ಗೆ ಬೆಂಬಲ ಪತ್ರ: ಸಂಸದೆ ಕಾಕೋಲಿ

20 ಟಿಎಂಸಿ ಸಂಸದರು ಎನ್‌ಡಿಎಗೆ?

• **ಹೊಸದಿಲ್ಲಿ:** ಟಿಎಂಸಿ ವರಿಷ್ಠರಾದ ಮಮತಾ ಬ್ಯಾನರ್ಜಿ ಅವರು ಇಂಡಿ ಕೂಟದ ಸಭೆಗೆ ಹಾಜರಾಗಿ ಮತ್ತೆ ಕೂಟದ ಜತೆ ಕೈಜೋಡಿಸಲು ಯತ್ನಿಸುತ್ತಿರುವಾಗಲೇ, ಇತ್ತ ಪಶ್ಚಿಮ ಬಂಗಾಳದ 20 ಸಂಸದರು ಎನ್‌ಡಿಎ ಸೇರಲು ಬಯಸಿದ್ದು, ಈ ಬಗ್ಗೆ ಲೋಕಸಭಾಧ್ಯಕ್ಷರಿಗೆ ಪತ್ರವನ್ನೂ ಬರೆದಿರುವುದಾಗಿ ಟಿಎಂಸಿ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಸೋಮವಾರ ಹೇಳಿದ್ದಾರೆ.



ಕಾಕೋಲಿದಾಸ್ ಅವರನ್ನು ಇತ್ತೀಚೆಗೆ ಟಿಎಂಸಿ ಸಚೇತಕ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಟಿಎಂಸಿ ಸಂಸದರು ಮಮತಾ ಬ್ಯಾನರ್ಜಿ ಅವರ ಅಳಿಯ ಅಭಿಷೇಕ್ ಭಟ್ಟಾಚಾರ್ಯ ಅವರ ವಿರುದ್ಧ 60ಕ್ಕೂ ಅಧಿಕ ಟಿಎಂಸಿ ಶಾಸಕರು ತಿರುಗಿಬಿದ್ದ ಬಳಿಕ, ಮಮತಾ ಬ್ಯಾನರ್ಜಿ ಅವರು ಅಭಿಷೇಕ್ ಭಟ್ಟಾಚಾರ್ಯ ಅವರ ಅನಿಯಂತ್ರಿತ ಅಧಿಕಾರಕ್ಕೆ ಒಂದಷ್ಟು ಕತ್ತರಿ ಹಾಕಿದ್ದರು. ಆದರೆ ಅನಂತರವೂ ಭಟ್ಟಾಚಾರ್ಯ ಅವರ ನಿಕಟವರ್ತಿ ಡೆರೆಕ್ ಒಬ್ರೇನ್ ಮತ್ತು ಡೋಲಾ ಸೆನ್ ಅವರನ್ನೇ ಜಂಟಿ ಕಾರ್ಯದರ್ಶಿಗಳನ್ನಾಗಿದ್ದರು. ಇದೀಗ ಟಿಎಂಸಿ ಸಂಸದರೂ ತಿರುಗಿಬಿದ್ದಿರುವುದು ಟಿಎಂಸಿಗೆ ತೀವ್ರ ಆಘಾತವುಂಟು ಮಾಡಿದೆ.

ಸುಮಾರು 20 ತೃಣಮೂಲ ಕಾಂಗ್ರೆಸ್ ಸಂಸದರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಔಪಚಾರಿಕವಾಗಿ ಪತ್ರ ಬರೆದು ನಾವು ಎನ್‌ಡಿಎಯ ಭಾಗವಾಗಿರಲು ಬಯಸುವುದಾಗಿ ತಿಳಿಸಿದ್ದಾರೆಂದು ಕಾಕೋಲಿದಾಸ್ ಘೋಷ್ ಸುದ್ದಿಗಾರರಿಗೆ ತಿಳಿಸಿದರು. ಇನ್ನೊಬ್ಬ ಟಿಎಂಸಿ ಸಂಸದೆ ಶರ್ಮಿಳಾ ಸರ್ಕಾರ್ ಸುದ್ದಿವಾಹಿನಿಯೊಂದರ ಜತೆ ಮಾತನಾಡಿ, ನಾವು 20 ಮಂದಿ ಟಿಎಂಸಿ ಸಂಸದರು ಪ್ರತ್ಯೇಕ ಗುಂಪನ್ನು ರಚಿಸಿಕೊಂಡಿದ್ದು, ಎನ್‌ಡಿಎಗೆ ಬೆಂಬಲ ನೀಡಲಿದ್ದೇವೆ. ಕಾಕೋಲಿ ಘೋಷ್ ಅವರು ನಮ್ಮ ಮುಖ್ಯ ಸಚೇತಕರಾಗಿದ್ದು, ಶತಾಬ್ದಿ ರಾಯ್ ನಮ್ಮ ಉಪನಾಯಕ ಎಂದರು. ➡ಪುಟ 9

ಮಧ್ಯಪ್ರಾಚ್ಯ: ಮತ್ತೆ ಸಂಘರ್ಷ

ಇಸ್ರೇಲ್-ಇರಾನ್ ದಾಳಿ-ಪ್ರತಿದಾಳಿ, ಪ್ರಾದೇಶಿಕ ಕದನ ವಿರಾಮ ಭೀತಿ

• **ದುಬೈ:** ಪೂರ್ಣ ಪ್ರಮಾಣದ ಪ್ರಾದೇಶಿಕ ಯುದ್ಧದ ಬೆದರಿಕೆಯೊಡ್ಡಿದ ಇಸ್ರೇಲ್ ಜತೆಗಿನ ದಾಳಿ ಪ್ರತಿದಾಳಿಯ ನಂತರ ಇರಾನಿನ ಮಿಲಿಟರಿ ಜಂಟಿ ಕಮಾಂಡ್ ಸೋಮವಾರ ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದೆ.

ಅಮೆರಿಕ ಎರಡು ತಿಂಗಳ ಹಿಂದೆ ಟೆಹ್ರಾನ್‌ನೊಂದಿಗೆ ಕದನ ವಿರಾಮ ಏರ್ಪಡಿಸಿದ ನಂತರ ಉಭಯ ದೇಶಗಳ ನಡುವೆ ನಡೆದ ಮೊದಲ ನೇರ ದಾಳಿ ಇದಾಗಿದೆ. ಫೆ.28ರಂದು ಇರಾನ್ ಮೇಲಿನ ದಾಳಿಯೊಂದಿಗೆ ಅಮೆರಿಕ ಮತ್ತು ಇಸ್ರೇಲ್ ಪ್ರಾರಂಭಿಸಿದ ಈ ಯುದ್ಧ, ಜಾಗತಿಕ ಇಂಧನ ಮತ್ತು ಆಹಾರದ ಬೆಲೆಗಳನ್ನು ಹೆಚ್ಚಿಸುವ ಮೂಲಕ ಜಾಗತಿಕ ಆರ್ಥಿಕತೆಯನ್ನು ಅಲುಗಾಡಿಸಿದೆ. ಏಪ್ರಿಲ್ ತಿಂಗಳ ಕದನ ವಿರಾಮವನ್ನು ಕಾಯಂ ಶಾಂತಿ ಒಪ್ಪಂದವಾಗಿ ಪರಿವರ್ತಿಸಲು ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ. ➡ಪುಟ 9

ದೆಹಲಿ ಬಿಸಿಲಿಗೆ ಜಿರಳೆಗಳು ಒಣಗಿದವೇ?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಾಕ್ರೋಚ್ ಜನತಾ ಪಾರ್ಟಿಯವರು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಸಲು ಕರೆಕೊಟ್ಟಿದ್ದ ಜನಾಂದೋಲನ ಕೊನೆಗೂ ಯಶಸ್ವಿಯಾಗಿ ನಡೆದಿದೆ. ಈ ಪ್ರದರ್ಶನ ಹಿಂಸಾಚಾರ ಗಲಭೆ ಇತ್ಯಾದಿಗಳಿಲ್ಲದೆ ಶಾಂತಿಯುತವಾಗಿಯೇ ನಡೆಯಲಿದೆ ಎಂದು ಪಕ್ಷದ ಅಧ್ಯಕ್ಷ ಸೇರಿದಂತೆ ಹಲವಾರು ಪದಾಧಿಕಾರಿಗಳು ಕೊಟ್ಟ ಹೇಳಿಕೆಯಂತೆಯೇ, ಯಾವುದೇ ಅಹಿತಕರ ಘಟನೆಗಳಿಲ್ಲದೇ ಅತ್ಯಂತ ಶಾಂತಿಪೂರ್ವಕವಾಗಿ ನಡೆಯಿತು ಎಂಬುದು ಸಂತೋಷದ ವಿಷಯವೇ ಹೌದು. ಮಾತ್ರವಲ್ಲದೇ, ಈ ಆಂದೋಲನದ ದಿನ ದೇಶದ ಜನತೆಗೆ ಸಿಕ್ಕ ನಗೆಬುಗ್ಗೆಗಳು ಜನರ ಆರೋಗ್ಯವನ್ನು ಇನ್ನೂ ಹೆಚ್ಚಿಸಿವೆ ಎಂಬುದೇ ನನ್ನ ಅಭಿಪ್ರಾಯ. ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು, ಶಿಕ್ಷಣಮಂತ್ರಿಯ ರಾಜೀನಾಮೆ ಪಡೆಯುವ ಉದ್ದೇಶದಿಂದ ಪ್ರಾರಂಭವಾದ ಈ ಆಂದೋಲನ ಮತ್ತು ಪ್ರತಿಭಟನೆ ನಿಜಕ್ಕೂ ನಡೆಯಬೇಕಾದದ್ದೇ. ಆದರೆ ಇವರುಗಳು ಪ್ರತಿಭಟನೆಯ ಹೆಸರಿನಲ್ಲಿ ನಡೆಸಿದ ರಾಜಕೀಯ, ಅವರುಗಳ ಅನನುಭವ ಮತ್ತು ಉದ್ವೇಗದಲ್ಲಿ ಬಹುಶಃ ಸ್ವಲ್ಪ ಹೆಚ್ಚೇ ಆಯಿತು. ಇದೇ ಕಾರಣಕ್ಕೆ ಇವರುಗಳ ಮೊನ್ನೆಯ ಪ್ರತಿಭಟನೆ ಮುಚ್ಚಳ ತೆರೆದ ಎರಡೇ ಸೆಕೆಂಡಿಗೆ ಮಾಯವಾಗುವ ಗೋಲಿಸೋಡಾದ ಗುಳ್ಳೆಗಳಂತೆ ಹೇಳಹೆಸರಿಲ್ಲದಂತೆ ಕಾಣೆಯಾಯಿತು. ಮಾತ್ರವಲ್ಲ, ನೀಟ್ ಪರೀಕ್ಷೆಯ ವಿಷಯವೊಂದನ್ನು ಬಿಟ್ಟು, ನಿರುದ್ಯೋಗ, ಎಲ್ಲಿಬಿಟಿಕ್ಯೂ, ರೈತರ ಹೋರಾಟ, ಗ್ಲೋಬಲ್ ವಾರ್ಮಿಂಗ್, ಇವಿಎಂ, ಹಿಂದೂ ಮುಸ್ಲಿಂ, ಬಾಬ್ರಿ ಮಸೀದಿ, ಕಾಶ್ಮೀರ, ಅಝಾದಿ ಸೇರಿದಂತೆ ಬೇರೆಲ್ಲಾ ವಿಷಯಗಳೂ ಚರ್ಚೆಯಾದವು. ಅಷ್ಟೆಲ್ಲಾ ಚರ್ಚೆ ಹುಟ್ಟುಹಾಕಿ, ಕೊನೆಗೂ ಇವರುಗಳು ಸಾಧಿಸಿದ್ದು ಪೂರ್ತಿ ಶೂನ್ಯವಷ್ಟೇ. ಆದರೆ ಮುಖವುಳಿಸಿಕೊಳ್ಳಲಿಕ್ಕೆ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಏಳುದಿನಗಳ ಗಡುವು ಕೊಟ್ಟು, ಜಿರಳೆಗಳು ತಮ್ಮ ಬಿಲ ಸೇರಿಕೊಂಡವು. ದೆಹಲಿಯ ಪೊಲೀಸರು ಈ ಸಂಭಾವ್ಯ ಗಲಭೆಯನ್ನು ಪಳಗಿಸಿದ ರೀತಿ ನಿಜಕ್ಕೂ ಒಂದು ಹಂತದ ಮಟ್ಟಿಗೆ ರಾಜಕೀಯದ ಮಾಸ್ಟರ್ ಕ್ಲಾಸ್ ಎನ್ನಬಹುದು. ಪ್ರತಿಭಟನೆಗೆ ಅನುಮತಿಯನ್ನೇ ಕೋರದೆ, ಲಕ್ಷಾಂತರ ಜನರನ್ನು ಸೇರಿಸಿ ಬಿಡುತ್ತೇವೆ ಎಂದು ಹೇಳಿ ಪ್ರಚಾರ ನಡೆಸಿ, ಅನುಮತಿ ಕೊಟ್ಟರೆ ಗಲಭೆ ನಡೆಸುವ, ಅನುಮತಿ ಕೊಡದಿದ್ದರೂ ಗಲಭೆ ನಡೆಸುವಂತ ಮಾಸ್ಟರ್ ಪ್ಲಾನ್ ಹಾಕಿಕೊಂಡು ಸಿಜೆಪಿಯ ಸದಸ್ಯರು ಕುಳಿತಿದ್ದರು. ಅವರ ಪ್ರಕಾರ, ಪ್ರಜಾಪ್ರಭುತ್ವದಲ್ಲಿ ಹೀಗೆಲ್ಲಾ ಅನುಮತಿ ಕೋರಬೇಕಾಗಿರುವುದೇ ದೊಡ್ಡ ದುರಂತ ಹಾಗು ತಪ್ಪಂತೆ! ಕೋರಿದರೂ, ಹತ್ತು ದಿನದ ಮುಂಚೆಯಲ್ಲ, ಕೇಳಿದ ಕೂಡಲೇ ಅನುಮತಿ ಕೊಡಬೇಕಂತೆ! ➡ಪುಟ ೬



ಇಂದಿನಿಂದ ಖಾಸಗಿ ಸರ್ವೀಸ್ ಬಸ್‌ಗಳ ಪ್ರಯಾಣ ದುಬಾರಿ!

• **ಉಡುಪಿ:** ನಿರಂತರ ಡೀಸೆಲ್ ದರ ಏರಿಕೆ ಹಾಗೂ ವಾಹನ ನಿರ್ವಹಣಾ ವೆಚ್ಚಗಳು ಹೆಚ್ಚಾಗಿರುವುದರಿಂದ ರಾಜ್ಯಾದ್ಯಂತ ಚಾಲನೆಯಲ್ಲಿರುವ ಎಲ್ಲಾ ಖಾಸಗಿ ಬಸ್ ಸರ್ವೀಸ್ (ಮಜಲು ವಾಹನ) ಬಸ್‌ಗಳ ಪ್ರಯಾಣ ದರವನ್ನು ಪರಿಷ್ಕರಿಸಲಾಗಿದ್ದು, ಜೂನ್ 9ರಿಂದ (ಇಂದಿನಿಂದ) ಹೊಸ ದರ ಜಾರಿಗೆ ಬರಲಿದೆ ಎಂದು ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ತಿಳಿಸಿದ್ದಾರೆ.

ಉಡುಪಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ ಸುಮಾರು 5,300 ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ. ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ಒಮ್ಮೆ ಡೀಸೆಲ್ ದರವನ್ನು 3 ರೂ. ಹೆಚ್ಚಿಸಿದ್ದರೆ, ಕೇಂದ್ರ ಸರ್ಕಾರ ನಾಲ್ಕು ಬಾರಿ ಒಟ್ಟು 8.17 ರೂಪಾಯಿಯಷ್ಟು ಇಂಧನ ದರ ಏರಿಕೆ ಮಾಡಿದೆ. ಇದರೊಂದಿಗೆ ಬಸ್ ಬಿಡಿಭಾಗಗಳು, ಟೈರ್ ಹಾಗೂ ರಿಸೋಲಿಂಗ್ ವೆಚ್ಚ, ಟೋಲ್ ಶುಲ್ಕ, ನೌಕರರ ಸಂಬಳ ಮತ್ತು ಸರ್ಕಾರದ ತೆರಿಗೆ ಸೇರಿದಂತೆ ದೈನಂದಿನ ನಿರ್ವಹಣಾ ವೆಚ್ಚಗಳು ಗಣನೀಯವಾಗಿ ಏರಿಕೆಯಾಗಿವೆ.

ಈ ನಷ್ಟವನ್ನು ಸರಿದೂಗಿಸಲು ಬಸ್ ಟಿಕೆಟ್ ದರವನ್ನು ಶೇ. 5 ರಿಂದ 8 ರವರೆಗೆ ಹೆಚ್ಚಿಸುವುದು ಅನಿವಾರ್ಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

> ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದಾಗಿ ಕರ್ನಾಟಕ ರಾಜ್ಯ ಬಸ್ ಮಾಲೀಕರ ಒಕ್ಕೂಟವು ಈಗಾಗಲೇ ಶೇ.20ರಷ್ಟು ಪ್ರಯಾಣ ದರ ಏರಿಕೆ ಮಾಡಿದೆ. ಹಾಗಾಗಿ ನಮ್ಮ ಸಂಘದಿಂದ ಬಸ್ ದರ ಏರಿಕೆ ಮಾಡುತ್ತಿಲ್ಲ.
> ■ **ನಟರಾಜ ಶರ್ಮ,** ಕರ್ನಾಟಕ ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ

ರಾಮ ಬಾಣ



20 ಟಿಎಂಸಿ ಸಂಸದರು ಎನ್‌ಡಿಎಗೆ?

ಪುಟ ೧➡ ಪಕ್ಷಾಧ್ಯಕ್ಷರು ನಮ್ಮ ಮೇಲೆ ಏಕಪಕ್ಷೀಯವಾಗಿ ಸರ್ವಾಧಿಕಾರಿ ವರ್ತನೆ ತೋರಿದ್ದಾಗಿ ಅವರು ಆರೋಪಿಸಿದರು. ಈ ಹಿಂದೆ ಉಚ್ಚಾಟಿತ ಟಿಎಂಸಿ ಶಾಸಕ ರಿತಬ್ರತ ಬ್ಯಾನರ್ಜಿ ಅವರ ನೇತೃತ್ವದಲ್ಲಿ 58 ಟಿಎಂಸಿ ಶಾಸಕರು ಪ್ರತ್ಯೇಕ ಗುಂಪು ರಚಿಸಿಕೊಂಡಿದ್ದು, ತಮ್ಮದೇ ನಿಜವಾದ ತೃಣಮೂಲ ಕಾಂಗ್ರೆಸ್ ಎಂದು ಹೇಳಿದ್ದರು. ಅವರು ವಿಧಾನಸಭೆಯಲ್ಲಿ ಶೋಭನ್‌ದೇವ್ ಚಟರ್ಜಿ ಅವರನ್ನು ವಿಪಕ್ಷ ನಾಯಕನಾಗಿ ಆಯ್ಕೆ ಮಾಡಿಕೊಂಡಿದ್ದರು. ಮೂರನೇ ಎರಡಕ್ಕಿಂತ ಹೆಚ್ಚಿನ ಶಾಸಕರ ನಿಲುವನ್ನು ಒಪ್ಪಬೇಕಾಗಿ ಬಂದಿದ್ದ ವಿಧಾನಸಭಾಧ್ಯಕ್ಷರು ಈ ಗುಂಪಿಗೆ ಮನ್ನಣೆ ನೀಡಿದ್ದರು. ಚುನಾವಣಾ ಪೂರ್ವದಲ್ಲಿ ವಿವಾದಾತ್ಮಕ ಐ-ಪಿಎಸಿ ರಾಜಕೀಯ ಸಲಹಾ ಸಂಸ್ಥೆಯನ್ನು ಟಿಎಂಸಿ ಆಯ್ಕೆ ಮಾಡಿಕೊಂಡಲ್ಲಿಂದಲೇ ಪಕ್ಷದಲ್ಲಿ ಅಸಮಾಧಾನ ಉಂಟಾಗಿದ್ದು, ಪಕ್ಷದ ಸಂಸದರು ಈ ಬಗ್ಗೆ ಆಕ್ಷೇಪಿಸಿದ್ದರು. ಇದಕ್ಕೂ ಮುನ್ನ ಅವರು ಬಿಜೆಪಿ ನಾಯಕ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ತಮ್ಮ ಬಣದ ನಿರ್ಧಾರವನ್ನು ಅವರಿಗೆ ತಿಳಿಸಿದ್ದರು. ನಾವು ಪಕ್ಷದ ಸಂಸದರು ಸುದೀರ್ಘ ಸಮಾಲೋಚನೆಯ ಬಳಿಕ ಎನ್‌ಡಿಎ ಬೆಂಬಲಿಸುವ ತೀರ್ಮಾನಕ್ಕೆ ಬಂದಿರುವುದಾಗಿ ಅವರು ಹೇಳಿದರು. ಪಶ್ಚಿಮ ಬಂಗಾಳದಲ್ಲಿ ಪಕ್ಷದ ಉನ್ನತ ನಾಯಕರು, ಸಂಸದರು ಹಾಗೂ ಶಾಸಕರಲ್ಲದೆ ಇದೀಗ 2ನೇ ಹಂತದ ನಾಯಕರು ಹಾಗೂ ಸುಮಾರು 100 ಕೌನ್ಸಿಲರ್‌ಗಳು ಕೂಡ ಟಿಎಂಸಿಗೆ ರಾಜೀನಾಮೆ ನೀಡಿದ್ದಾರೆ.

ನೀರಿನಲ್ಲಿ ಕೊಚ್ಚಿ ಹೋದ ಬೈಕ್‌ಗಳು

• **ಬೆಳಗಾವಿ:** ಜಿಲ್ಲೆಯ ಬೈಲಹೊಂಗಲ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಮೇಘ ಸ್ಫೋಟದಂತೆಯೇ ಸುರಿದ ಭಾರೀ ಮಳೆಯಿಂದ ನಗರದಲ್ಲಿನ ರಸ್ತೆಗಳು ನದಿಗಳಂತೆ ಹರಿದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ನಿರಂತರ ಮಳೆಯ ಪರಿಣಾಮ ಬಸ್ ನಿಲ್ದಾಣದ ಸುತ್ತಮುತ್ತಲೂ ಹಾಗೂ ಪ್ರಮುಖ ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ಹರಿದಿದ್ದು, ನಿಲ್ಲಿಸಿದ್ದ ಕೆಲವು ಬೈಕ್‌ಗಳು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿವೆ. ವಾಹನ ಸವಾರರು ತಮ್ಮ ವಾಹನಗಳನ್ನು ರಕ್ಷಿಸಲು ಪರದಾಡಿದ ಘಟನೆಗಳು ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿರುವ ದೃಶ್ಯಗಳು ಭಯ ಹುಟ್ಟಿಸುತ್ತಿವೆ ಎಂದು ಜನತೆಯು ಮಾತನಾಡಿಕೊಳ್ಳುತ್ತಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಮ್ಮ ಆಚಾರ ವಿಚಾರಗಳನ್ನು ತಿಳಿಸುವ,ನಾವು ಬಳಸುವ ವಸ್ತುಗಳನ್ನು ಹೇಳಲು, ನಿಮ್ಮ ಭಾವನೆಗಳನ್ನು ತಿಳಿಸಲು ಭಾರತೀಯ ಭಾಷೆಗಳೇ ಬೇಕು - ಕಲ್ಲಡ್ಕ ಪ್ರಭಾಕರ ಭಟ್
- ಮೊದಲು ನಮ್ಮ ಭಾವನೆಗಳನ್ನೇ ಬದಲಾಯಿಸಬೇಕಾಗಿದೆ ಅಂತ ಅನಿಸುತ್ತಿದೆ.ನಮ್ಮ ದೇಶದ ಉಡುಗೆ ತೊಡುಗೆ, ಆಚಾರ ವಿಚಾರಗಳೆಲ್ಲವೂ ತೀರಾ ಕನಿಷ್ಠ, ಪರದೇಶದ ವಿಚಾರಗಳೆಲ್ಲವೂ ಭಾರೀ ಶ್ರೇಷ್ಠ ಎಂಬ ಮೂರ್ಖತನವನ್ನೇ ಆಧುನಿಕತೆ ಅಂತ ಮೆರೆಯುತ್ತಾ ನಮ್ಮದನ್ನು ಮರೆಯುತ್ತಿದ್ದೇವೆ!

ದಿನ ಭವಿಷ್ಯ

ಮೇಷ ಉತ್ಸಾಹ ನಾಶ. ಪ್ರತಿ ಹೆಜ್ಜೆ ಎಚ್ಚರದಿಂದ ಇಡಿ. ಕ್ಲಿಷ್ಟಕರ ಪರಿಸ್ಥಿತಿ ಎದುರಿಸುವಿರಿ. ಮನೆಯ ಬಗ್ಗು ಪರಿಸ್ಥಿತಿ ತಿಳಿಗೊಳಿಸಿ. ವೆಚ್ಚ ಅಧಿಕದ ಚಿಂತೆ.

ವೃಷಭ ಹಣದ ವಿಚಾರ ಸದ್ಯಕ್ಕೆ ಬಿಡಿ, ದೈನಂದಿನ ಬದುಕಲ್ಲಿ ಉತ್ಸಾಹ ತುಂಬುವ ವಿಷಯಕ್ಕೆ ಪ್ರಾಮುಖ್ಯತೆ ಕೊಡಿ. ಸಂಘರ್ಷ ತಪ್ಪಿಸಿರಿ.

ಮಿಥುನ ವಿಶೇಷ ಘಟಿಸದ ಸಾಮಾನ್ಯ ದಿನ. ವೃತ್ತಿ ಸಂಬಂಧ ಪ್ರಯಾಣ ಸಾಧ್ಯತೆ. ಕೌಟುಂಬಿಕ ಸಮಸ್ಯೆ ಪರಿಹಾರ ಕಾಣದೆ ಚಿಂತೆ ಉಳಿದೀತು.

ಕಟಕ ಒತ್ತಡದ ಬದುಕಿಂದ ತುಸು ಹೊರಬಂದು ಜೀವನ ಆನಂದಿಸಲು ಗಮನ ಕೊಡಿ. ಆತ್ಮೀಯರ ಸಂಗದಲ್ಲಿ ಕಾಲ ಕಳೆಯಿರಿ. ಖರ್ಚು ಕಡಿಮೆ ಮಾಡಿ.

ಸಿಂಹ ನಿಮ್ಮ ಕೆಲಸದಲ್ಲಿ ಬದಲಾವಣೆ ಬಂದೀತು ನಿರೀಕ್ಷೆಗಿಂತ ಅಧಿಕ ಕಾರ್ಯ. ಒತ್ತಡ ಅಧಿಕ. ಆದರೂ ದಿನಾಂತ್ಯಕ್ಕೆ ಸಮಾಧಾನ ಪಡುವಿರಿ.

ಕನ್ಯಾ ಬಳಲಿಕೆ, ಒತ್ತಡ ಇಂದು ಕಾಡಬಹುದು. ವೃತ್ತಿಯಲ್ಲೂ, ಖಾಸಗಿ ಬದುಕಲ್ಲೂ ಅನುಚಿತ ಬೆಳವಣಿಗೆ ಕಾಣುವಿರಿ.

ತುಲಾ ಗಾಬರಿ ಪಡಿಸುವ ಪ್ರಸಂಗ ಉಂಟಾದೀತು. ವಸ್ತು ಕಳವಿನ ಸಾಧ್ಯತೆ ಇದೆ. ಅಜೀರ್ಣ ಸಂಬಂಧಿ ಹೊಟ್ಟೆ ಸಮಸ್ಯೆ. ಸಮಚಿತ್ತದಿಂದ ವ್ಯವಹರಿಸಿ.

ವೃಶ್ಚಿಕ ನಿಮ್ಮ ಅಂಜಿಕೆ, ಚಿಂತೆಗಳ ಬಗ್ಗೆ ಮುಕ್ತ ವಿಮರ್ಶೆ ನಡೆಸಿ. ಅದರ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿರಿ. ಪಲಾಯನ ಮಾಡದಿರಿ.

ಧನು ಕಾರ್ಯ ಅಪೂರ್ಣ. ಪ್ರಮುಖ ಕಾರ್ಯ ಕೈಗೆತ್ತಿಕೊಳ್ಳದಿರಿ. ಆಪ್ತ ಸಂಬಂಧದಲ್ಲಿ ಒಡಕು. ಸಮಾಧಾನದ ನಡೆ ಅತ್ಯವಶ್ಯ.

ಮಕರ ವಿವಾದ ಸೃಷ್ಟಿಸುವ ವಿಷಯದಿಂದ ದೂರವಿರಿ. ಪ್ರಮುಖ ಸಭೆ ಮುಂದೂಡಿ. ವ್ಯಕ್ತಿ ಸಂಬಂಧಿತ ವ್ಯವಹಾರ ಕಷ್ಟಕ್ಕೆ ಸಿಲುಕಬಹುದು.

ಕುಂಭ ಫಲಪ್ರದ ದಿನವಲ್ಲ, ಎಲ್ಲರ ಜತೆ ಬೆರೆಯದೆ ಏಕಾಂಗಿಯಾಗಿರಲು ಬಯಸುವಿರಿ. ಆತ್ಮೀಯರ ಸಂಗದ ಕಾಲ ಕಳೆಯಿರಿ. ಹುರುಪು ತುಂಬಿಕೊಳ್ಳಿ.

ಮೀನ ನಿಮ್ಮ ಸಮಸ್ಯೆ ಮುಗಿಯುತ್ತಿಲ್ಲ ಎಂಬ ಚಿಂತೆ ಕಾಡುವುದು. ಸ್ವಲ್ಪ ದಿನ ಕಾಯಿರಿ, ಬಳಿಕ ಎಲ್ಲ ಸರಿಯಾಗಲಿದೆ.

ರಾಹುಕಾಲ: 3.00 - 4.30
ಗುಳಿಕಕಾಲ: 12.00 - 1.30
ಅದೃಷ್ಟ ಸಂಖ್ಯೆ: 5,0,3,9

ಐದು ಸ್ಥಾನ ಗೆಲ್ಲಲು ಕೈ ರಣತಂತ್ರ | ಚುನಾವಣೆ ಪೈಪೋಟಿ ಖಾತ್ರಿ

ಮೇಲ್ಮನೆ ಕದನ ಕುತೂಹಲ



• **ಬೆಂಗಳೂರು:** ವಿಧಾನ ಪರಿಷತ್‌ಗೆ ಕಾಂಗ್ರೆಸ್ ನಿಂದ ವಿನಯ್ ಕಾರ್ತಿಕ್ ಐದನೇ ಅಭ್ಯರ್ಥಿ ಕಣಕ್ಕೆ ಇಳಿದಿರುವುದರಿಂದ ಚುನಾವಣೆ ತುರುಸಿನ ಪೈಪೋಟಿಯಾಗುವುದು ಖಾತ್ರಿಯಾಗಿದೆ.

ಶಾಸಕರ ಸಂಖ್ಯಾಬಲದ ಆಧಾರದ ಮೇಲೆ ಕಾಂಗ್ರೆಸ್ ನಾಲ್ಕು ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಅನಾಯಸವಾಗಿ ಗೆಲ್ಲಬಹುದಾಗಿದೆ. ಇನ್ನೊಂದು ಸ್ಥಾನಕ್ಕೆ ಎನ್‌ಡಿಎ ಮೈತ್ರಿ ಕೂಟದಿಂದ ಗೋವಿಂದಾ ರಾಜು ಅವರು ನಾಮಪತ್ರ ಸಲ್ಲಿಸಿದ್ದು, ಹೆಚ್ಚುವರಿ ಮತಗಳನ್ನು ಸೆಳೆಯಲು ಕಾಂಗ್ರೆಸ್ ತಂತ್ರ ರೂಪಿಸಿದೆ. ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣ ಕಮಕನೂರ, ಪಿ.ವಿ. ಮೋಹನ್, ಶಿವಣ್ಣ ಮಳವಳ್ಳಿ ಮತ್ತು ವಿನಯ್ ಕಾರ್ತಿಕ್ ಸ್ಪರ್ಧಿಸಿದ್ದು, ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ ಕಣದಲ್ಲಿದ್ದಾರೆ. ಗೋವಿಂದರಾಜು ಮೈತ್ರಿ ಕೂಟದ ಅಭ್ಯರ್ಥಿಯಾಗಿದ್ದಾರೆ.ಮಂಗಳವಾರನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರಗಳು ಸೂಕ್ತವಾಗಿದ್ದಲ್ಲಿ ಚುನಾವಣೆ ಕಣ ರಂಗೇರಲಿದೆ.

62 ಸ್ಥಾನಗಳನ್ನು ಹೊಂದಿರುವ ಬಿಜೆಪಿಗೆ ಜನಾರ್ದನ್ ರೆಡ್ಡಿ ಅವರ ಬೆಂಬಲ ಸೇರಿ 63 ಆಗಲಿದೆ, ಯತ್ನಾಳ, ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರನ್ನು ಪಕ್ಷದದಿಂದ ಉಚ್ಚಾಟಿಸಲಾಗಿದ್ದು, ಎಲ್ಲಾ ಪಕ್ಷದಿಂದ ಇವರುಗಳ ಮತಗಳನ್ನು ಸೆಳೆಯುವ ಯತ್ನಗಳು ನಡೆದಿವೆ. 18 ಸ್ಥಾನಗಳನ್ನು ಹೊಂದಿರುವ ಜೆಡಿಎಸ್ ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆದರೂ ಗೆಲುವು ಕಷ್ಟವಾಗಿದ್ದು, ಜೆಡಿಎಸ್ ಕೂಡಾ ಬಿಜೆಪಿ ಉಚ್ಚಾಟಿತ ಮೂವರು ಶಾಸಕರ ಮತಗಳು ಅವಶ್ಯಕವಾಗಿದೆ.

ಕಾಂಗ್ರೆಸ್‌ನ 5ನೇ ಅಭ್ಯರ್ಥಿಯ ನಾಮಪತ್ರ ಸಲ್ಲಿಸಿದ್ದರಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯುವುದು ಪಕ್ಕಾ, ಜೂ.11ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಕಣದಲ್ಲಿರುವ ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆಯುವುದು ಬಹುತೇಕ ಅನುಮಾನವಾಗಿದ್ದು, ಚುನಾವಣಾ ಚಟುವಟಿಕೆಗಳು ಜೋರಾಗಲಿವೆ.

ಕಾಂಗ್ರೆಸ್‌ಗೆ ಗೆಲುವು?
ಒಂದು ಸ್ಥಾನಕ್ಕೆ 28 ಮತಗಳು ಬೇಕಿದ್ದು ಕಾಂಗ್ರೆಸ್‌ನ 134 ಸ್ಥಾನಗಳ ಪೈಕಿ, ಇಬ್ಬರು ಪಕ್ಷೇತರರ ಬೆಂಬಲ ಇದ್ದು, ಸ್ಪೀಕರ್ ಸೇರಿದಂತೆ ಎಸ್‌ಕೆಪಿ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಸೇರಿದರೆ ಒಟ್ಟು ಒಟ್ಟು 138 ಮತಗಳಾಗಲಿದ್ದು, ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಿವರಾಮ್ ಹೆಬ್ಬಾರ್ ಮತ್ತು ಎಸ್.ಟಿ ಸೋಮಶೇಖರ್ ಮತ ನೀಡಿದರೆ ಕಾಂಗ್ರೆಸ್ 5ನೇ ಅಭ್ಯರ್ಥಿ ಗೆಲುವು ಸುಲಭವಾಗಲಿದೆ. ಇದರ ಜತಗೆ ಜೆಡಿಎಸ್‌ನ ಕೆಲವು ಶಾಸಕರನ್ನು ಸಂಪರ್ಕ ಮಾಡಲಾಗಿದ್ದು, ಅಡ್ಡಮತದಾನ ಆದಲ್ಲಿ ಗೆಲುವು ಖಚಿತವಾಗಲಿದೆ.

ಪರಂಗೆ ಡಿಸಿಎಂ ಸ್ಥಾನ ಸಿಕ್ಕಿದ್ದು ತೃಪ್ತಿಯಿದೆ: ಜಾರಕಿಹೊಳಿ

ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ



• **ಬೆಳಗಾವಿ:** ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ, ಎಲ್ಲರಿಗೂ ಒಂದೇ ಬಾರಿಗೆ ಎಲ್ಲವೂ ಸಿಗಲು ಸಾಧ್ಯವಿಲ್ಲ, ಡಿಸಿಎಂ ಜಿ.ಪರಮೇಶ್ವರ ನಮ್ಮವರೇ. ಹೈಕಮಾಂಡ್ ಅವರಿಗೆ ಜವಾಬ್ದಾರಿ ನೀಡಿದೆ. ಅಷ್ಟಕ್ಕೇ ನಾವು ತೃಪ್ತಿಪಡಬೇಕು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸೋಮವಾರ ಬೆಳಗಾವಿ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಡಿಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷಸ್ಥಾನಕ್ಕೆ ತಪ್ಪಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಒಬ್ಬರಿಗೆ ಒಂದು ಸ್ಥಾನ ಎನ್ನುವ ಕಾರಣದಿಂದ ಅಧ್ಯಕ್ಷ ಸ್ಥಾನ ಸಿಗಲಿಲ್ಲ, ಈ ಹಿಂದೆ ಇಂತಹ ಪರಿಸ್ಥಿತಿ ಇರಲಿಲ್ಲ, ಆದರೆ, ಈಗ ಪಕ್ಷದ ಆದೇಶವನ್ನು ಪ್ರತಿಯೊಬ್ಬರೂ ಪಾಲಿಸಲೇಬೇಕು ಎಂದು ತಿಳಿಸಿದರು.

ಜಿ.ಪರಮೇಶ್ವರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ದೊರೆಯುವಲ್ಲಿ ಸಿದ್ದರಾಮಯ್ಯನವರಪ್ರಯತ್ನ ಮತ್ತು ಬೆಂಬಲ ಪ್ರಮುಖ ಕಾರಣ. ಸಿದ್ದರಾಮಯ್ಯನವರು ತಮ್ಮ ಒಡನಾಡಿಗಳು, ಪಕ್ಷದ ಹಿರಿಯ ನಾಯಕರಿಗೆ ಸೂಕ್ತ ಸ್ಥಾನಮಾನ ಕೊಡಿಸಲು ಸದಾಶ್ರಮಿಸಿದ್ದಾರೆ ಎಂಬುದನ್ನು ಒತ್ತಿ ಹೇಳಿದರು. ಸಿದ್ಧಾಂತದಲ್ಲಿ, ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ಮಾತ್ರ ಜನಸಾಮಾನ್ಯರ ಮನಸ್ಸಿನಲ್ಲಿ ಜನನಾಯಕರಾಗಿ ಬೆಳೆಯಲು ಸಾಧ್ಯ ಎಂದರು.

ಬೆಳಗಾವಿಗೆ ಇನ್ನೊಂದು ಸಚಿವ ಸ್ಥಾನ ಖಚಿತ

ಬೆಳಗಾವಿಗೆ ಮತ್ತೊಂದು ಸಚಿವ ಸ್ಥಾನ ಸಿಗುವ ಕುರಿತು ದೃಢ ವಿಶ್ವಾಸ ವ್ಯಕ್ತಪಡಿಸಿದರು. ಬೆಳಗಾವಿ ದೊಡ್ಡ ಜಿಲ್ಲೆಯಾಗಿದ್ದು, ಇಲ್ಲಿನ ರಾಜಕೀಯ ಪ್ರಾತಿನಿಧ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ನೀಡಬೇಕು ಎಂಬ ಬೇಡಿಕೆಯ ಕುರಿತು ನಾನು ಈಗಾಗಲೇ ಪಕ್ಷದ ವರಿಷ್ಠರೊಂದಿಗೆ ಮಾತನಾಡಿದ್ದೇನೆ. ಬೆಳಗಾವಿಗೆ ಮತ್ತೊಂದು ಸಚಿವ ಸ್ಥಾನ ಸಿಕ್ಕೆ ಸಿಗುತ್ತದೆ ಎಂಬ ಸಂಪೂರ್ಣ ಭರವಸೆ ನನಗಿದೆ ಎಂದರು.

ಬಡವರ ಕಲ್ಯಾಣ, ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ

ಪುಟ ೧➡ ಭಾರತ ಈ 12 ವರ್ಷಗಳಲ್ಲಿ ಒಂದು ಮಹತ್ವದ ಪರಿವರ್ತನೆ ಕಂಡಿದ್ದು, ಬಡವರು ಮತ್ತು ದುರ್ಬಲ ವರ್ಗದವರ ಕಲ್ಯಾಣವನ್ನು ಸರಕಾರದ ಪರಮಾದ್ಯತೆಯನ್ನಾಗಿ ಮಾಡಲಾಗಿದೆ. ಅಂತ್ಯೋದಯ ತತ್ತ್ವದ ಪ್ರೇರಣೆಯೊಂದಿಗೆ 80 ಕೋಟಿ ಬಡವರಿಗೆ ಉಚಿತ ಅಕ್ಕಿ ವಿತರಣೆಯ ಮೂಲಕ ದೇಶದಲ್ಲಿ ಹಸಿವೆಯಿಂದ ಜನರು ನರಳದಂತೆ ನೋಡಿಕೊಳ್ಳುವ ಜೊತೆಗೆ, ದಶಕಗಳಿಂದ ಹಿಂದೆ ಬಿದ್ದ ಜನರಿಗೂ ಅಭಿವೃದ್ಧಿ ಯೋಜನೆಗಳು ತಲುಪುವಂತೆ ಮಾಡಲು ಜನರ ಸಹಭಾಗಿತ್ವಕ್ಕೆ ಒತ್ತು ನೀಡಲಾಗಿದೆ ಎಂಬುದನ್ನು ಮೋದಿಯವರು ಬೊಟ್ಟು ಮಾಡಿದ್ದಾರೆ.

ಹಿಂದೆಲ್ಲ ತಂತ್ರಜ್ಞಾನ ಎಂದರೆ ಶ್ರೀಮಂತರಿಗೆ, ಬಡವರಿಗೇನು ಎಂಬ ಪ್ರಶ್ನೆಗಳಿದ್ದರೆ, ಇಂದು ಅದೇ ತಂತ್ರಜ್ಞಾನವನ್ನು ಬಡವರ ಜೀವನಮಟ್ಟ ಸುಧಾರಣೆಗೆ ಬಳಸಿ ಅವರಿಗೂ ಉತ್ತಮ ಗುಣಮಟ್ಟದ ಜೀವನ ನಡೆಸುವಂತೆ ಮಾಡಲು ಸರಕಾರ ಮುಂದಾಗಿರುವುದಕ್ಕೆ ನೇರ ಲಾಭ ವರ್ಗಾವಣೆ ಮತ್ತು ಡಿಜಿಟಲ್ ವೇದಿಕೆಗಳು ತಾಜಾ ನಿದರ್ಶನವಾಗಿದೆ.

ಇದರಿಂದ ಸರಕಾರದ ಯೋಜನೆಗಳು ಯಾವುದೇ ಲಂಚರುಷುವತ್ತುಗಳಿಲ್ಲದೆ ಪಾರದರ್ಶಕ ನೆಲೆಯಲ್ಲಿ ಜನರಿಗೆ ತಲುಪುವಂತೆ ಮಾಡಲಾಗಿದೆ. ಇದರಿಂದಾಗಿ ಸರಕಾರದ ಹಣ ಸೋರಿಕೆಯಾಗುವುದನ್ನು ತಡೆಗಟ್ಟಲು, ದಕ್ಷತೆ ಹೆಚ್ಚಿಸಲು ಮತ್ತು ಆಡಳಿತದ ಬಗ್ಗೆ ಜನತೆಯಲ್ಲಿ ವಿಶ್ವಾಸ, ನಂಬಿಕೆ ಬಲಗೊಳಿಸಲು ನೆರವಾಗಿದೆ ಎಂದು ಮೋದಿಯವರು ತಿಳಿಸಿದ್ದಾರೆ.

ಗರೀಬ್ ಕಲ್ಯಾಣ ಎಂಬುದು ಬರಿಯ ಘೋಷಣೆಯಾಗಿರದೆ ಇಂದು ಅದು ಮಾನವ ಸಬಲೀಕರಣದತ್ತ ಸಾಮೂಹಿಕ ಚಳವಳಿಯಾಗಿ ಮೂಡಿಬಂದಿದ್ದು, ಇದು ನಮ್ಮ ವಿಕಸಿತ ಭಾರತ್ ಕನಸನ್ನು ನನಸಾಗಿಸಲು ನೆರವಾಗಲಿದೆ ಎಂದಿದ್ದಾರೆ. ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ 12 ವರ್ಷಗಳು ಖಂಡಿತವಾಗಿಯೂ ಬಡವರ ಕಲ್ಯಾಣಕ್ಕೆ ಸಮರ್ಪಿತವಾಗಿದೆ ಎಂದು ಬಿಜೆಪಿ, ಎನ್‌ಡಿಎ ನಾಯಕರು ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಸರಕಾರದ ಸಾಧನೆಗಳ ಬಗ್ಗೆ ಚರ್ಚಿಸುವಾಗಲೆಲ್ಲ ಬಡವರ ಕಲ್ಯಾಣಕ್ಕೆ ಆದ್ಯತೆ ನೀಡುತ್ತಾ ಬರಲಾಗಿದೆ.

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರಕಾರವು, ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಮೂಲಕ ಬಡವರ ಅಭಿವೃದ್ಧಿಯನ್ನು ತನ್ನ ಪ್ರಾಥಮಿಕ ಆದ್ಯತೆಯಾಗಿ ಗುರುತಿಸಿ ಕೊಂಡಿತ್ತು. ಹಸಿವೆ ಮುಕ್ತ ಸಮಾಜ-ದೇಶ ನಿರ್ಮಾಣದಲ್ಲಿ ಘೋಷಣೆಗಳಿಂದಾಚೆಗೆ ನಿಜವಾಗಿಯೂ ಸಾಕಾರಗೊಳಿಸಿರುವುದು, ಸರಕಾರದ ಈ ನಿಟ್ಟಿನ ಹಲವು ಯೋಜನೆಗಳಿಂದ ಗ್ರಾಮೀಣ ಜನರ ಬದುಕಿನಲ್ಲಿ ಪರಿವರ್ತನೆಯೊಂದನ್ನು ತರಲು ಸಾಧ್ಯವಾಗಿರುವುದು ಗಮನಾರ್ಹವೆಂದು ಈ ಕುರಿತ ವಿಶ್ಲೇಷಣೆಯಲ್ಲಿ ವಿವರಿಸಲಾಗಿದೆ.

ನೆಹರು ದಾಖಲೆ ಮುರಿಯಲಿರುವ ಪ್ರಧಾನಿ ನರೇಂದ್ರ ಮೋದಿ

ಪುಟ ೧➡ ಹೀಗಾಗಿ ಮೋದಿ ಅವರ 4,399 ದಿನಗಳ ಆಡಳಿತವು ಕೇವಲ ಒಂದು ದಾಖಲೆಯಲ್ಲ, ಆಧುನಿಕ ಭಾರತದ ರೂಪಾಂತರದ ಪ್ರಮುಖ ಅಧ್ಯಾಯವಾಗಿಯೂ ಪರಿಗಣಿಸಲಾಗುತ್ತಿದೆ.

ಸವಾಲುಗಳ ನಡುವೆಯೂ ಜಗದ ಮನ್ನಣೆ ಪಡೆದ ಭಾರತ

ಪುಟ ೧➡ 2024ರ ಸಂಸದೀಯ ಚುನಾವಣೆಯಲ್ಲಿ 3ನೇ ಬಾರಿಗೆ ಅಧಿಕಾರಕ್ಕೆ ಬಂದ ಮೋದಿಯವರು ವಿಪಕ್ಷಗಳಿಂದ ಸತತ ಅಡ್ಡಿ, ಆತಂಕಗಳನ್ನು ಎದುರಿಸುವ ಜೊತೆಗೆ ಬಾಹ್ಯ ಪ್ರೇರಿತ ಸವಾಲುಗಳಿಗೆ ಎದೆಯೊಡ್ಡುತ್ತಲೇ ದೇಶವನ್ನು ಆತ್ಮನಿರ್ಭರತೆಯೆಡೆಗೆ ಒಯ್ಯಲು ನಿರಂತರ ಶ್ರಮಿಸುತ್ತಿದ್ದಾರೆ. ನರೇಂದ್ರ ಮೋದಿ ಸರಕಾರವನ್ನು ಅಸ್ಥಿರಗೊಳಿಸಲು ಆಂತರಿಕವಾಗಿ ಮತ್ತು ಬಾಹ್ಯ ನೆಲೆಗಳಿಂದ ನಡೆಯುತ್ತಿರುವ ಸತತ ಸಂಚು -ಪಿತೂರಿಗಳು ನಡೆಯುತ್ತಿರುವ ನಡುವೆಯೂ ದೇಶದ ಜನತೆ ಮೋದಿಯವರಲ್ಲಿ ವಿಶ್ವಾಸ ಇಟ್ಟಿದ್ದಾರೆ. ಹಾಗೆಯೇ ಚುನಾವಣಾ ಆಯೋಗದ ವಿಶ್ವಾಸಾರ್ಹತೆಗೇ ಧಕ್ಕೆ ಉಂಟು ಮಾಡುವ ಸತತ ಯತ್ನಗಳ ನಡುವೆಯೂ ದೇಶದಲ್ಲಿ ಮತಗಟ್ಟೆ ವಂಚನೆ, ಬೂತ್ ವಶೀಕರಣ, ಬೆದರಿಕೆ, ಹಿಂಸೆಗಳನ್ನು ತಡೆದು ನಿರ್ಭಯದಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಬಲಪಡಿಸುವ ಹೆಜ್ಜೆಗಳು, ವಿಶ್ವದೆಲ್ಲೆಡೆ ಭಾರತ-ಭಾರತೀಯರಿಗೆ ಮನ್ನಣೆ ಲಭಿಸುತ್ತಿರುವುದು ಗಮನ ಸೆಳೆಯುವ ಅಂಶವೆಂದು ವಿಶ್ಲೇಷಿಸಲಾಗಿದೆ.

ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ?

ಪುಟ ೧➡ ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಇರುವುದರಿಂದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನೇ ಬೆಂಬಲಿಸಲಿದೆ. ರಾಜ್ಯಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಕೊಡಗಿನ ಬೋಜಣ್ಣ ಸೋಮಯ್ಯ ಅವರು ಉಮೇದುವಾರಿಕೆ ಸಲ್ಲಿಸಿದ್ದಾರೆ. ಇವರ ನಾಮಪತ್ರಕ್ಕೆ ಸೂಚಕರ ಸಹಿ ಇಲ್ಲದಿರುವ ಹಿನ್ನೆಲೆಯಲ್ಲಿ ಬಹುತೇಕ ತಿರಸ್ಕೃತವಾಗಲಿದೆ. ಹೀಗಾಗಿ, ಅಂತಿಮವಾಗಿ ಚುನಾವಣಾ ಕಣದಲ್ಲಿ ಉಳಿಯುವ ಕಾಂಗ್ರೆಸ್‌ನ ಮೂವರು ಹಾಗೂ ಬಿಜೆಪಿಯ ಒಬ್ಬ ಅಭ್ಯರ್ಥಿ ಚುನಾಯಿತರಾಗಲಿದ್ದಾರೆ. ಮಂಗಳವಾರ ನಾಮಪತ್ರಗಳ ಪರಿಶೀಲನೆ ನಡೆದು ಸಿಂಧುವಾದ ನಾಮಪತ್ರಗಳನ್ನು ಪ್ರಕಟಿಸಲಾಗುತ್ತದೆ. ಉಮೇದುವಾರಿಕೆ ವಾಪಸ್ ಪಡೆಯಲು ಜೂ.11ರವರೆಗೆ ಅವಕಾಶವಿದೆ. ಅಂದು ಮಧ್ಯಾಹ್ನ 3 ಗಂಟೆಯ ನಂತರ ಅಂತಿಮವಾಗಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ. ಚುನಾವಣಾ ಕಣದಲ್ಲಿ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಒಬ್ಬ ಉಳಿಯುವುದರಿಂದ ಚುನಾವಣಾಧಿಕಾರಿ ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಪ್ರಕಟಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಈರಣ್ಣ ಕಡಾಡಿ, ನಾರಾಯಣ ಕೊರಗಪ್ಪ ಅವರು ರಾಜ್ಯಸಭೆ ಸದಸ್ಯ ಸ್ಥಾನದಿಂದ ಜೂ.25ರಂದು ನಿವೃತ್ತಿಯಾಗಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ರಾಜ್ಯಸಭಾ ಸದಸ್ಯ ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ನಡೆಯುತ್ತಿದೆ.



ಬಿಜೆಪಿ ಅಭ್ಯರ್ಥಿಗಳಿಂದ ನಾಮಪತ್ರ

• **ಬೆಂಗಳೂರು:** ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಸೋಮವಾರ ಬಿಜೆಪಿ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಸಭೆಯ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಜಿ. ಪಾಟೀಲ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಶುಭ ಹಾರೈಸಿದರು.

> ರಾಜಕಾರಣದಲ್ಲಿ ಚದುರಂಗದ ಆಟ ಆಡುವಾಗ ಯಾರಾದರೂ ಯಾವ ರೀತಿ ಕಾಯಿ ನಡೆಸುತ್ತಾರೆ ಎಂದು ಹೇಳುತ್ತಾರೆಯೇ? ಯಾರೂ ಹೇಳುವುದಿಲ್ಲ.
> ■ **ಡಿ.ಕೆ. ಶಿವಕುಮಾರ್,** ಸಿಎಂ

ಐಡಿ ಇದ್ದರಷ್ಟೆ ಪಬ್ ಪ್ರವೇಶ: ಗೃಹ ಸಚಿವ

ಪುಟ ೧➡ **ಅಪ್ರಾಪ್ತರಿಗೆ ಮದ್ಯ ಪೂರೈಸುವ ಸಂಸ್ಥೆಗೆ ನೋಟೀಸ್ ನೀಡಿ:** ಅಪ್ರಾಪ್ತ ವಯಸ್ಕರ ಪ್ರವೇಶವನ್ನು ಕಟ್ಟುನಿಟ್ಟಾಗಿ ತಡೆಯಲು ಮತ್ತು ಮದ್ಯ ಸರಬರಾಜು ಮಾಡುವುದನ್ನು ನಿಷೇಧಿಸಲು ಬೆಂಗಳೂರಿನ ಎಲ್ಲಾ ಪಬ್‌ಗಳು, ಬ್ರೂವರೀಸ್, ಬಾರ್‌ಗಳು, ಕ್ಲಬ್‌ಗಳು, ಲಾಂಜ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಮದ್ಯ ಸರಬರಾಜು ಮಾಡುವ ಇತರ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡುವಂತೆ ಸಚಿವ ಪ್ರಿಯಾಂಕ್ ಖರ್ಗೆ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಪ್ರವೇಶ ದ್ವಾರದಲ್ಲೇ ಐಡಿ ಕಾರ್ಡ್ ಪರಿಶೀಲಿಸಿ: ಮದ್ಯ ಸರಬರಾಜು ಮಾಡುವ ಎಲ್ಲಾ ಸಂಸ್ಥೆಗಳು ಪ್ರವೇಶ ದ್ವಾರದಲ್ಲಿ ಮತ್ತು ಮದ್ಯವನ್ನು ನೀಡುವ ಮೊದಲು ಕಟ್ಟುನಿಟ್ಟಾದ ವಯಸ್ಸಿನ ಪರಿಶೀಲನಾ ನಿಯಮಗಳನ್ನು ಜಾರಿಗೆ ತರಬೇಕು ಎಂದು ಆದೇಶಿಸಿದ್ದಾರೆ. ಅಲ್ಲದೆ, ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು, ಪರವಾನಿಗೆದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಪ್ರಮುಖ ನಿರ್ದೇಶನಗಳು

ಪುಟ ೧➡ 4. ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು, ಪರವಾನಗಿದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

5. ಪ್ರವೇಶ ದ್ವಾರದ ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು, ತನಿಖೆಯ ಸಮಯದಲ್ಲಿ ನಿಯಮ ಪಾಲನೆಯನ್ನು ಪರಿಶೀಲಿಸಲು ಸಿಸಿಟಿವಿ ದೃಶ್ಯಾವಳಿಗಳನ್ನು ನಿಗದಿತ ಅವಧಿಯವರೆಗೆ ಸುರಕ್ಷಿತವಾಗಿ ಸಂಗ್ರಹಿಸಿಡಬೇಕು.

6. ಅಪ್ರಾಪ್ತ ವಯಸ್ಕರು ಮದ್ಯ, ತಂಬಾಕು, ಮಾದಕ ದ್ರವ್ಯಗಳಿಗೆ ಬಲಿಯಾಗುವುದನ್ನು ತಡೆಯಲು ಪೊಲೀಸರು ಶಿಕ್ಷಣ ಸಂಸ್ಥೆಗಳು, ಪೋಷಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಾಗರಿಕ ಗುಂಪುಗಳೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.



> ಅಪ್ರಾಪ್ತ ವಯಸ್ಕರ ಮದ್ಯಪಾನಕ್ಕೆ ಪ್ರೋತ್ಸಾಹ ನೀಡುವ ಅಥವಾ ಆದಕ್ಕೆ ಕಾರಣವಾಗುವ ಸಂಸ್ಥೆಗಳ ವಿರುದ್ಧ ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ ಮತ್ತು ಶೂನ್ಯ ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಳ್ಳಲಿದೆ.
> ■ **ಪ್ರಿಯಾಂಕ್ ಖರ್ಗೆ,** ಗೃಹ ಸಚಿವ

ಸಿನಿ ತಾರೆಯರಿಂದ ಮಾಹಿತಿ ಸಂಗ್ರಹಿಸಲು ಸಿಐಡಿ ನಿರ್ಧಾರ

ಪುಟ ೧➡ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಹಲವು ನಟ-ನಟಿಯರು ಭಾಗವಹಿಸಿದ್ದರು. ಸಿಐಡಿ ತನಿಖೆಯ ಭಾಗವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆಲ ಕಲಾವಿದರಿಂದ ಮಾಹಿತಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಆದರೆ, ನಟ-ನಟಿಯರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ ಎಂಬುದಕ್ಕೆ ಅಧಿಕೃತ ದೃಢೀಕರಣ ಲಭ್ಯವಾಗಿಲ್ಲ. ಶಿವಂ ಅಸೋಸಿಯೇಟ್ಸ್ ವಿರುದ್ಧ ಸಾವಿರಾರು ಹೂಡಿಕೆದಾರರಿಂದ ಹಣ ಸಂಗ್ರಹಿಸಿ ವಂಚನೆ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ. ತನಿಖೆಯ ಪ್ರಗತಿಯೊಂದಿಗೆ ಇನ್ನಷ್ಟು ಮಾಹಿತಿ ಬಹಿರಂಗವಾಗುವ ಸಾಧ್ಯತೆಯಿದ್ದು, ಇನ್ನು ಈ ಪ್ರಕರಣದಲ್ಲಿ ಯಾರು, ಯಾರು ಭಾಗಿಯಾಗಿದ್ದಾರೆ ಎಂಬುದು ತನಿಖೆಯ ಬಳಿಕ ತಿಳಿದುಬರಲಿದೆ.

ಮಧ್ಯಪ್ರಾಚ್ಯ: ಮತ್ತೆ ಸಂಘರ್ಷ

ಪುಟ ೧➡ ಕದನ ವಿರಾಮದ ಅವಧಿಯಲ್ಲಿ ಇರಾನ್ ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ನಿಯಂತ್ರಣವನ್ನು ಮುಂದುವರಿಸಿದೆ. ಇಸ್ರೇಲ್ ಲೆಬನಾನ್‌ನಲ್ಲಿ ಇರಾನ್ ಮಿತ್ರಪಡೆಯಾದ ಹಿಜ್ಬುಲ್ಲಾ ಮೇಲೆ ದಾಳಿ ಮುಂದುವರಿಸಿದೆ. ಸೋಮವಾರ ಯೆಮೆನ್‌ನ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ಗುಂಡು ಹಾರಿಸುವ ಮೂಲಕ ಕೆಂಪು ಸಮುದ್ರದಲ್ಲಿ ಇಸ್ರೇಲ್‌ಗೆ ಸಂಬಂಧಿಸಿದ ಹಡಗುಗಳನ್ನು ಗುರಿಯಾಗಿಸುವುದಾಗಿ ಎಚ್ಚರಿಸಿದ್ದಾರೆ.

ಇರಾನ್ ವೈಮಾನಿಕ ವಲಯ ಬಂದ್: ಇರಾನ್ ಸೋಮವಾರ ಇಸ್ರೇಲ್‌ನ ಎರಡು ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದು, ಇಸ್ರೇಲ್ ಮತ್ತು ಜೋರ್ಡಾನ್‌ನಲ್ಲಿ ಸೈರನ್‌ಗಳು ಮೊಳಗಿವೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಮಧ್ಯ ಮತ್ತು ಪಶ್ಚಿಮ ಇರಾನ್ ಮೇಲೆ ದಾಳಿ ನಡೆಸಿ, ಕ್ಷಿಪಣಿ ಲಾಂಚರ್‌ಗಳು ಮತ್ತು ಮಹ್‌ಶಹರ್‌ನಲ್ಲಿರುವ ಪೆಟ್ರೋಕೆಮಿಕಲ್ ಕಾರ್ಖಾನೆಯನ್ನು ಧ್ವಂಸಗೊಳಿಸಿದೆ. ಈ ದಾಳಿಯ ಬೆನ್ನಲ್ಲೇ ಇರಾನ್ ಟೆಹ್ರಾನ್‌ನ ಇಮಾಮ್ ಖೊಮೇನಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ವೈಮಾನಿಕ ವಲಯವನ್ನು ಮುಚ್ಚಿದೆ.

ಟ್ರಂಪ್- ನೆತನ್ಯಾಹು ಭಿನ್ನಾಭಿಪ್ರಾಯ?: ಈ ಕದನ ವಿರಾಮವನ್ನು ಉಳಿಸಲು ಈಜಿಪ್ಟ್, ಸೌದಿ ಅರೇಬಿಯಾ, ಟರ್ಕಿ, ಪಾಕಿಸ್ತಾನ ಮತ್ತು ಕತಾರ್ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸುತ್ತಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಕ್ಷಣವೇ ದಾಳಿಗಳನ್ನು ನಿಲ್ಲಿಸುವಂತೆ ಕರೆನೀಡಿದ್ದು, ಮಾತುಕತೆಗಳು ಜಾರಿಯಲ್ಲಿವೆ ಎಂದು ಹೇಳಿದ್ದಾರೆ. ಸೋಮವಾರಕ್ಕೆ ಈ ಸಂಘರ್ಷ ನೂರು ದಿನಗಳನ್ನು ಪೂರೈಸಿದೆ. ಆದರೆ ವಿವಿಧ ಕಾರಣಗಳಿಂದ ಟ್ರಂಪ್ ಮತ್ತು ನೆತನ್ಯಾಹು ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿರುವುದು ಕಂಡುಬಂದಿದೆ.

ಉಕ್ರೇನ್ ಪರಮಾಣು ಶೇಖರಣಾ ಸ್ಥಾವರಕ್ಕೆ ರಷ್ಯಾ ದಾಳಿ

• **ಕೀವ್:** ಉಕ್ರೇನ್‌ನ ಚೋರ್ನೋಬಿಲ್ ವಿದ್ಯುತ್ ಸ್ಥಾವರದ ಬಳಿ ಪರಮಾಣು ಇಂಧನ ಶೇಖರಣಾ ಸ್ಥಾವರವನ್ನು ರಷ್ಯಾದ ಪಡೆಗಳು ಗುರಿಯಾಗಿಸಿ ದಾಳಿ ನಡೆಸಿವೆ ಎಂದು ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ. ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಪ್ರಕಾರ, ದಾಳಿಯು ದೊಡ್ಡ ಪ್ರಮಾಣದ ಪರಮಾಣು ವಸ್ತುಗಳನ್ನು ಸಂಗ್ರಹಿಸಲಾಗಿರುವ ಸ್ಥಳದಿಂದ ಮೀಟರ್‌ಗಳಷ್ಟು ದೂರದಲ್ಲಿರುವ ಇಂಧನ ಸ್ಥಾವರ ಕಟ್ಟಡವನ್ನು ಗಮನಾರ್ಹವಾಗಿ ಹಾನಿಗೊಳಿಸಿದೆ.

ತಕ್ಷಣ ಇರಾನ್ ಬಿಡಲು ಭಾರತೀಯರಿಗೆ ಸೂಚನೆ

• **ಹೊಸದಿಲ್ಲಿ:** ಪರಿಸ್ಥಿತಿ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಇರಾನ್ ತೊರೆಯುವಂತೆ ಭಾರತೀಯರಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಈ ಪ್ರದೇಶದ ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಈ ಸಲಹೆ ನೀಡಲಾಗಿದೆ. ತುರ್ತು ಸಲಹೆಯಲ್ಲಿ, ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಇರಾನ್‌ಗೆ ಪ್ರಯಾಣಿಸುವುದನ್ನು ತಪ್ಪಿಸಲು ಎಲ್ಲಾ ಭಾರತೀಯ ಪ್ರಜೆಗಳಿಗೆ ಮತ್ತೆ ತಿಳಿಸಿದೆ. ಅಂತೆಯೇ ಪ್ರಸ್ತುತ ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ಲಭ್ಯವಿರುವ ಸಾರಿಗೆ ವಿಧಾನಗಳ ಮೂಲಕ ದೇಶವನ್ನು ಕೂಡಲೇ ತೊರೆಯುವಂತೆ ಸೂಚಿಸಲಾಗಿದೆ.

ಮೂರು ಬಾರಿ ಸಿಎಂ ಸ್ಥಾನ ಕೈತಪ್ಪಿದಕ್ಕೆ ಡಿಸಿಎಂ ಭಾವುಕ



• **ತುಮಕೂರು:** ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾವುಕರಾಗಿ ಮಾತನಾಡಿದ್ದು, ಮುಖ್ಯಮಂತ್ರಿ ಸ್ಥಾನವು ಮೂರು ಬಾರಿ ಕೈತಪ್ಪಿದ ಕುರಿತು ನೋವು ತೋಡಿಕೊಂಡಿದ್ದಾರೆ. ಇದು ತಮ್ಮ ಬಹುಕಾಲದ ಕನಸಾಗಿದ್ದು, ರಾಜಕೀಯ ಸನ್ನಿವೇಶಗಳಿಂದಾಗಿ ಕೈಗೂಡಿಲ್ಲ ಎಂದು ಹೇಳಿದ್ದಾರೆ.

ಹಳೆ ನೆನಪುಗಳನ್ನು ಹಂಚಿಕೊಂಡ ಅವರು, 2013ರ ಚುನಾವಣೆಯಲ್ಲಿ ನಾನು ಸೋತಿದ್ದರಿಂದ ಮುಖ್ಯಮಂತ್ರಿ ಹುದ್ದೆ ಕೈತಪ್ಪಿತು. ಅಂದು ನಾನು ಗೆದ್ದಿದ್ದರೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗುತ್ತಿರಲಿಲ್ಲ ಎಂದು ಹೇಳಿದ್ದಾರೆ. ಮುಂದುವರಿದು, 2018ರಲ್ಲಿ ಕಾಂಗ್ರೆಸ್ 80 ಸ್ಥಾನಗಳನ್ನು ಗೆದ್ದಿದ್ದರೂ ಮೈತ್ರಿ ಸರ್ಕಾರದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದರು. ಅವತ್ತು ನನ್ನನ್ನೂ ಮುಖ್ಯಮಂತ್ರಿ ಮಾಡಬಹುದಿತ್ತು, ಆದರೆ ಆ ಅವಕಾಶ ಸಿಗಲಿಲ್ಲ ಎಂದು ಬೇಸರದಿಂದ ನುಡಿದಿದ್ದಾರೆ.

ಇನ್ನು 2026ರ ಪ್ರಸ್ತುತ ರಾಜಕೀಯ ವಿದ್ಯಮಾನಗಳಲ್ಲೂ ತಮಗೆ ಸಿಎಂ ಹುದ್ದೆಯ ನಿರೀಕ್ಷೆ ಇತ್ತು, ಆದರೆ ವಿವಿಧ ರಾಜಕೀಯ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ ಎಂದು ಪರಮೇಶ್ವರ್ ಹೇಳಿದ್ದಾರೆ. ಹೈಕಮಾಂಡ್ ಜತೆಗಿನ ಚರ್ಚೆಯನ್ನು ಸ್ಮರಿಸಿದ ಅವರು, ನನಗೆ ಸಂಸ್ಥೆಯ ಶ್ರೇಯೋಭಿವೃದ್ಧಿ ಮುಖ್ಯ. ಕೊಡಲು ಸಾಧ್ಯವಿಲ್ಲ ಅಂದರೆ ನೇರವಾಗಿ ಹೇಳಿ, ನನಗೆ ಬಹಳ ದೊಡ್ಡ ಕೆಲಸಗಳಿವೆ, ನಾನು ವಾಪಸ್ ಹೋಗ್ತೀನಿ ಎಂದು ಹೇಳಿದ್ದೆ. ಕೊನೆಗೆ ಪಕ್ಷ ನನಗೆ ಉಪಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿ ನೀಡಿದೆ ಎಂದರು. ಸದ್ಯ ತಮಗೆ ಸಿಕ್ಕಿರುವ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ನಿಭಾಯಿಸುವುದಾಗಿ ಹೇಳಿದ ಪರಮೇಶ್ವರ್, ಜನರು ನಮ್ಮನ್ನು ಸೂಕ್ಷ್ಮವಾಗಿ ನೋಡುತ್ತಾರೆ. ಆದ್ದರಿಂದ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು.



ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಸಿಎಂ ಸದಾನಂದಗೌಡ ಅವರ ನಿವಾಸಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಸಂಜೆ ಭೇಟಿ ನೀಡಿ ಆಶೀರ್ವಾದ ಪಡೆದರು. ಈ ವೇಳೆ ಪತ್ನಿ ಡಾಟಿ ಸದಾನಂದಗೌಡ ಹಾಗೂ ಕುಟುಂಬದ ಸದಸ್ಯರು ಇದ್ದರು

ಮತಪತ್ರ ತಿರುಚಿದ ಆರೋಪ: ಮಧ್ಯಂತರ ತಡೆ ವಿಸ್ತರಿಸಿದ ಹೈ



• **ಬೆಂಗಳೂರು:** ಬಿಜೆಪಿಯ ಶೃಂಗೇರಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಮತಪತ್ರ ತಿದ್ದಲು ಸಾಧ್ಯ? ಚುನಾವಣಾ ಆಯೋಗವು ಹಾಕಿದ್ದ ಬೀಗವನ್ನು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಅಂದರೆ ಚುನಾವಣಾ ಆಯೋಗದ ಭದ್ರತೆಯು ಉಪಯೋಗವಿಲ್ಲ ಎನ್ನುತ್ತೀರಾ ಎಂದು ಹೈಕೋರ್ಟ್ ದೂರುದಾರರನ್ನು ಮೌಖಿಕವಾಗಿ ಪ್ರಶ್ನಿಸಿತು.

ಅಂಚೆ ಮತಗಳ ಮರು ಎಣಿಕೆ ವೇಳೆ ಮತಪತ್ರಗಳನ್ನು ತಿರುಚಿದ ಆರೋಪ ಸಂಬಂಧ ಕಾಂಗ್ರೆಸ್ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರು ಆಧರಿಸಿ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್ಐಆರ್ ರದ್ದುಪಡಿಸಲು ಕೋರಿ ಡಿ.ಎನ್. ಜೀವರಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ಈ ವೇಳೆ ಅರ್ಜಿ ಪರಿಶೀಲಿಸಿದ ಪೀಠವು ಅರ್ಜಿದಾರರ ಮೇಲಿನ ಆರೋಪವೇನು? ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ದೂರುದಾರರ ಪರ ವಕೀಲರು, ಮತಪತ್ರಗಳನ್ನು ತಿರುಚಲಾಗಿದೆ ಎಂದರು. ಆಗ ಪೀಠವು ಮತದಾನದ ಬಳಿಕ ಮತಪತ್ರಗಳು ಯಾರ ವಶದಲ್ಲಿತ್ತು? ಕೇಳಿತು.

ದೂರುದಾರರ ಪರ ವಕೀಲರು ಚುನಾವಣಾ ಆಯೋಗದ ವಶದಲ್ಲಿ ಎಂದರು. ಅದಕ್ಕೆ ಪೀಠವು ಮತಪತ್ರ ಚುನಾವಣಾ ಆಯೋಗದ ವಶದಲ್ಲಿರಬೇಕಾದರೆ, ಅವುಗಳನ್ನ ಜೀವರಾಜ್ ಹೇಗೆ ತಿದ್ದಲು ಸಾಧ್ಯ? ಚುನಾವಣಾ ಆಯೋಗವು ಹಾಕಿದ್ದ ಬೀಗವನ್ನು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಅಂದರೆ ಚುನಾವಣಾ ಆಯೋಗದ ಭದ್ರತೆಯು ಉಪಯೋಗವಿಲ್ಲ ಎನ್ನುತ್ತೀರಾ? ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ನಂತರ ಅರ್ಜಿದಾರರ ವಿರುದ್ಧದ ಎಫ್ಐಆರ್‌ಗೆ ನೀಡಿರುವ ಮಧ್ಯಂತರ ತಡೆಯನ್ನು ಜು.3ರವರೆಗೆ ವಿಸ್ತರಿಸಿ ವಿಚಾರಣೆ ಮುಂದೂಡಿತು.

ಕಿರುಸುದ್ದಿ

ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ನಿಧನ

• **ಬೆಂಗಳೂರು:** ಎಐಸಿಸಿ ಕಾರ್ಯದರ್ಶಿ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರು ಭಾನುವಾರ ರಾತ್ರಿ ನಿಧನರಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ಅವರು ತೀವ್ರ ಹೃದಯ ಸ್ತಂಭನದಿಂದ ಬೆಂಗಳೂರಿನ ಎಂ.ಎಸ್ ರಾಮಯ್ಯ ಆಸ್ಪತ್ರೆಗೆ ದಾಖಲಾಗಿದ್ದರು. ಭಾನುವಾರ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಕಾಂಗ್ರೆಸ್‌ನಲ್ಲಿ ಹಲವು ಹುದ್ದೆಗಳನ್ನು ನಿರ್ವಹಿಸಿದ್ದ ಸೂರಜ್ ಹೆಗ್ಡೆ ಅವರ ಅಕಾಲಿಕ ನಿಧನಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಸೋಮವಾರ ಬೆಳಗ್ಗೆ ಸೂರಜ್ ಹೆಗ್ಡೆ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಸೂರಜ್ ಹೆಗ್ಡೆ ಅವರ ಎಂ.ಎಸ್ ರಾಮಯ್ಯ ಆಸ್ಪತ್ರೆ ಬಳಿಯ ನಿವಾಸಕ್ಕೆ ರಾತ್ರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತಿಮ ನಮನ ಸಲ್ಲಿಸಲಿದರು.

ಡಿಕೆಶಿ ಅಂತಿಮ ನಮನ: ಸೂರಜ್ ಹೆಗ್ಡೆ ಅವರ ಕುಟುಂಬದ ದುಃಖ ನೋಡಲು ಆಗುತ್ತಿಲ್ಲ, ಅವರ ತಂದೆ ಕೂಡ ಒಬ್ಬ ಹಿರಿಯ ದೊಡ್ಡ ರಾಜಕಾರಣಿ. ವೈಯಕ್ತಿಕವಾಗಿ ನಮ್ಮೆಲ್ಲರಿಗೂ ಕೂಡ ಬಹಳ ದುಃಖ ಉಂಟಾಗಿದೆ. ಪಕ್ಷದ ಹಾಗೂ ಸರ್ಕಾರದ ಪರವಾಗಿ ಗೌರವ ನಮನ ಸಲ್ಲಿಸುತ್ತೇನೆ. ಕರ್ನಾಟಕ ಸರ್ಕಾರ ಅವರಿಗೆ ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ ಸಲ್ಲಿಸಲಾಗುವುದು. ಅವರ ಕುಟುಂಬದವರು ಅಂತಿಮ ಕಾರ್ಯ ಯಾವಾಗ ತೀರ್ಮಾನ ಮಾಡುತ್ತಾರೋ ಆಗ ಗೌರವವನ್ನು ಕೊಡುತ್ತೇವೆ. ಈ ವಿಚಾರವಾಗಿ ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶ ತಿಳಿಸಿದ್ದೇನೆ. ಅವರ ಅಂತ್ಯಕ್ರಿಯೆಯಲ್ಲಿ ನಾನು ಕೂಡ ಭಾಗಿಯಾಗುತ್ತೇನೆ ಎಂದರು.

ಬಿಡದಿ ಟೌನ್‌ಶಿಪ್ ವಿಚಾರ ಸಿಎಂ ಸಮರ್ಪಕ ಉತ್ತರ ನೀಡಲಿ

• **ರಾಮನಗರ:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಈ ಭಾರಿ ಅಧಿವೇಶನದಲ್ಲಿ ಚರ್ಚಿಸಲಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಸರಿಯಾದ ಉತ್ತರ ಲಭಿಸದಿದ್ದರೇ, ಅಧಿವೇಶನದಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುತ್ತದೆ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು. ಬಿಡದಿ ಟೌನ್‌ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು. ಅಧಿವೇಶನದಲ್ಲಿ ನಡೆಸುವ ಪ್ರತಿಭಟನೆಗೆ ಬಿಡದಿ ರೈತರು ಸಹ ಸಹಕಾರ ನೀಡಬೇಕು. ಸಾವಿರಾರು ಮಂದಿ ಆಗಮಿಸಿ, ಸರ್ಕಾರದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ಅನುಮಾನಾಸ್ಪದ ವಸ್ತು ಸ್ಫೋಟ: ಮೂವರಿಗೆ ಗಾಯ

• **ವಿಜಯಪುರ:** ಅನುಮಾನಾಸ್ಪದ ವಸ್ತು ಸ್ಫೋಟಗೊಂಡು ಮೂವರಿಗೆ ಗಂಭೀರ ಗಾಯವಾಗಿರುವ ಘಟನೆ ಜಿಲ್ಲೆ ಬಬಲೇಶ್ವರ ತಾಲೂಕಿನ ಮಮದಾಪೂರ ಗ್ರಾಮದಲ್ಲಿ ನಡೆದಿದೆ. ಪಾನ್‌ಶಾಪ್ ಅಂಗಡಿಯಲ್ಲಿ ಅನುಮಾನಾಸ್ಪದ ವಸ್ತು ಸ್ಫೋಟಗೊಂಡಿದ್ದು, ಮೂವರು ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡವರ ಹೆಸರು ಹಾಗೂ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ, ಸ್ಥಳಕ್ಕೆ ಪೊಲೀಸರು ಹಾಗೂ ಅಗ್ನಿ ಶಾಮಕ ಸಿಬ್ಬಂದಿ ಭೇಟಿ ಪರಿಶೀಲನೆ ನಡೆಸಿದ್ದಾರೆ. ಬಬಲೇಶ್ವರ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ವರ್ಷಾಂತ್ಯದೊಳಗೆ ಪಂಚಾಯ್ತಿಗಳಿಗೆ ಚುನಾವಣೆ: ಸಚಿವ ಈಶ್ವರ ಖಂಡ್ರೆ

ಖಾಲಿ ಹುದ್ದೆಗಳ ಭರ್ತಿ

• **ಬೆಂಗಳೂರು:** ಅಧಿಕಾರ ವಿಕೇಂದ್ರೀಕರಣ ದಿ. ರಾಜೀವ್ ಗಾಂಧಿ ಅವರ ಕಲ್ಪನೆಯಾಗಿದ್ದು, ಈ ವರ್ಷಾಂತ್ಯದೊಳಗೆ ಎಲ್ಲ ಪಂಚಾಯ್ತಿಗಳಿಗೆ ಚುನಾವಣೆ ನಡೆಸಲು ಕ್ರಮವಹಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಸೋಮವಾರ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಮುಂದಿನ 8 ವಾರಗಳಲ್ಲಿ ಕ್ಷೇತ್ರ ಪುನರ್ವಿಂಗಡಣೆ ಕಾರ್ಯ ಹಾಗೂ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ನಂತರ ರಾಜ್ಯ ಚುನಾವಣೆ ಆಯೋಗ ಚುನಾವಣೆ ಪ್ರಕ್ರಿಯೆ ನಡೆಸಲಿದೆ ಎಂದರು.

ಇಲಾಖೆಯಲ್ಲಿ ಎ ವರ್ಗದ 268, ಬಿ ವರ್ಗದ 1079, ಸಿ ವರ್ಗದ 5294, ಡಿ ವರ್ಗದ 2129 ಹುದ್ದೆಗಳು ಖಾಲಿ ಇದ್ದು, ಈ ಪೈಕಿ ಎಲ್ಲ ವರ್ಗದ ಹುದ್ದೆಗಳ ಪೈಕಿ 4 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 25,540 ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ ಖಾಲಿ ಇರುವ 8,770 ಹುದ್ದೆ ಪೈಕಿ 4 ಸಾವಿರ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಖಂಡ್ರೆ ತಿಳಿಸಿದರು.

ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಈ ಎಲ್ಲ ಹುದ್ದೆಗಳನ್ನು ಪಾರದರ್ಶಕವಾಗಿ ಭರ್ತಿ ಮಾಡಲು ಸೂಚಿಸಲಾಗಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳ ಭರ್ತಿಗೂ ಕ್ರಮ ವಹಿಸುವಂತೆ ಸೂಚನೆ ನೀಡಿರುವುದಾಗಿ ಖಂಡ್ರೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಇಲಾಖೆಯ ಕಾರ್ಯದರ್ಶಿಗಳಾದ ಸಮೀರ್ ಶುಕ್ಲ, ರಂದೀಪ್ ಡಿ., ಪಂಚಾಯತ್ ರಾಜ್ ಆಯುಕ್ತೆ ಡಾ.ಕೆ. ಅರುಂಧತಿ, ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೌಡ, ಕುಡಿಯುವ ನೀರು ಪೂರೈಕೆ ವಿಭಾಗದ ಆಯುಕ್ತರಾದ ಫೌಜಿಯಾ ತರುನ್ನುಂ ಮತ್ತಿತರರು ಪಾಲ್ಗೊಂಡಿದ್ದರು.



ಕಲುಷಿತ ನೀರು ಸರಬರಾಜಾಗದಂತೆ ಕಟ್ಟೆಚ್ಚರ ವಹಿಸಿ

ಗ್ರಾಮೀಣ ಕರ್ನಾಟಕದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ಎಲ್ಲ ಪಂಚಾಯಿತಿಗಳ ಆದ್ಯ ಕರ್ತವ್ಯವಾಗಿದ್ದು, ಯಾವುದೇ ಕಾರಣಕ್ಕೂ ಕಲುಷಿತ ನೀರು ಸರಬರಾಜಾಗದಂತೆ ಎಚ್ಚರ ವಹಿಸಲು ಖಂಡ್ರೆ ಸೂಚಿಸಿದರು. ಕಲುಷಿತ ನೀರು ಸೇವನೆಯಿಂದ ಮುಗ್ಧ ಜನರು ಮೃತಪಟ್ಟ ಘಟನೆಗಳು ಹಲವೆಡೆ ನಡೆದಿವೆ. ಇಂತಹ ಘಟನೆ ಮರುಕಳಿಸದಂತೆ ನೀರಿನ ಪರೀಕ್ಷೆಯನ್ನು ಎನ್.ಎ.ಬಿ.ಎಲ್. ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ನಿಯಮಿತವಾಗಿ ಮಾಡಬೇಕು. ಪಂಚಾಯ್ತಿಗಳಿಂದ ಪೂರೈಕೆ ಮಾಡುವ ಕುಡಿಯುವ ನೀರಿನಲ್ಲಿ ಯಾವುದೇ ಲೋಪ ಆಗದಂತೆ ಬಹು ಹಂತದ ಪರಿಶೀಲನೆ ನಡೆಸಲು ಸೂಚಿಸಿರುವುದಾಗಿ ತಿಳಿಸಿದರು.

> ಮನ್‌ರೇಗಾ ಸಂಯೋಜನೆಯಲ್ಲಿ ಸಾಮಾಜಿಕ ಅರಣ್ಯಕ್ಕೆ ಆರ್ಥಿಕ ನೆರವು ಒದಗಿಸಲಾಗಿದ್ದು, ರಸ್ತೆ ಬದಿಯಲ್ಲಿ ಮತ್ತು ನೆಡುತೋಪುಗಳಲ್ಲಿ ಬೆಳೆಸಲಾಗಿರುವ ಸಸಿಗಳ ಜಿಯೋ ಟ್ಯಾಗ್ ಮಾಡಿ, ಆಡಿಟ್ ಮಾಡಲು ಸೂಚಿಸಿದ್ದೇನೆ.
> ■ **ಈಶ್ವರ ಖಂಡ್ರೆ**, ಸಚಿವ

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯ

ಸಮರ್ಥ ಅಭ್ಯರ್ಥಿಗಳ ಆಯ್ಕೆಯಿಂದ ಸಂತಸ



• **ಬೆಂಗಳೂರು:** ಪಕ್ಷದ ವರಿಷ್ಠರು ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಸಮರ್ಥ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿದ್ದಾರೆ. ಈ ಆಯ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಂತಸ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯ ಪಟ್ಟಿದ್ದಾರೆ.

ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ರಾಜ್ಯಸಭೆಗೆ ಪ್ರೊ.ಎಂ.ನಾಗರಾಜ್ ಅವರನ್ನು ಹಾಗೂ ವಿಧಾನ ಪರಿಷತ್‌ಗೆ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಅವರ ಹೆಸರನ್ನು ಘೋಷಣೆ ಮಾಡಲಾಗಿದೆ. ಈ ಎಲ್ಲಾ ಮುಖಂಡರು ಪಕ್ಷದ ಸಂಘಟನೆಗೆ ವಿವಿಧ ರೀತಿಯಲ್ಲಿ ತೊಡಗಿಸಿಕೊಂಡಿದ್ದವರು ಎಂದರು.

ಮುಂದೆ ಸುಮಲತಾಗೆ ಸೂಕ್ತ ಸ್ಥಾನ ಮಾನ: ರಾಜ್ಯಸಭೆಗೆ ಸುಮಲತಾ ಅಂಬರೀಷ್ ಅವರ ಹೆಸರು ಪ್ರಸ್ತಾಪವಾಗಿತ್ತು. ಈ ಹಿಂದೆ ಮಂಡ್ಯದಿಂದ ಅವರು ಸ್ವತಂತ್ರ ಸ್ಪರ್ಧೆ ಮಾಡಿದ್ದಾಗ ಬಿಜೆಪಿ ಬೆಂಬಲ ನೀಡಿತ್ತು. ಒಳ್ಳೆಯ ಅಂತರದಿಂದ ಗೆಲುವು ಸಾಧಿಸಿದ್ದರು ಎಂದು ಹೇಳಿದರು.

ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹೆಸರು ಪ್ರಸ್ತಾಪ ಕುರಿತ ಪ್ರಶ್ನೆಗೆ ಉತ್ತರಿಸಿ, ದೇವೇಗೌಡರು ಮೋದಿ ಅವರ ಕೈ ಬಲಪಡಿಸಿದ್ದಾರೆ. ಎನ್‌ಡಿಎಗೆ ಬೆಂಬಲ ನೀಡಿದ್ದಾರೆ. ಅವರ ಬಗ್ಗೆ ಪಕ್ಷಕ್ಕೆ ಅಪಾರ ಗೌರವವಿದೆ. ರಾಜ್ಯಸಭೆಗೆ ಅವರನ್ನು ಕಳುಹಿಸುವ ಬಗ್ಗೆ ರಾಜ್ಯ ಮಟ್ಟದಲ್ಲಿ ಯಾವುದೇ ರೀತಿಯ ಚರ್ಚೆ ನಡೆದಿರಲಿಲ್ಲ, ಇತ್ತೀಚಿನ ರಾಜಕೀಯ ಸ್ಥಿತಿಗತಿ ನೀಡಿ ಸೂಕ್ತ ಅಭ್ಯರ್ಥಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ಸವಾಲಾದ ಖಾತೆ ಹಂಚಿಕೆ

ಸಿಎಂ ಅವರಿಗೆ ಖಾತೆ ಹಂಚಿಕೆಯೇ ಸವಾಲಾಗಿದೆ. ಮೂರು ವರ್ಷ ಅಭಿವೃದ್ಧಿ ಏನೂ ಮಾಡಿಲ್ಲ, ಇನ್ನಾದರೂ ಖಾತೆಗಳಿಗೆ ಕ್ಯಾತೆ ಬಿಟ್ಟು ಕೆಲಸ ಮಾಡಲಿ. ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಆದರೆ, ಈ ಸರ್ಕಾರದಿಂದ ಅಭಿವೃದ್ಧಿ ನಿರೀಕ್ಷೆ ಮಾಡಲಾಗದು. ಸಾಲದ ಹೊರೆ ಹತ್ತು ಲಕ್ಷ ಕೋಟಿ ರೂ.ಗೆ ಬಂದಿದೆ. ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಿಲ್ಲ, ಜಿಲ್ಲಾ ಉಸ್ತುವಾರಿ ಹಂಚಿಕೆ ಆಗಿಲ್ಲ ಎಂದರು.

ಎಚ್ಡಿಡಿಗೆ ಸಿಗದ ರಾಜ್ಯಸಭೆ ಸ್ಥಾನ: ಕೈ ಟೀಕೆ

• **ಬೆಂಗಳೂರು:** ಎನ್‌ಡಿಎ ಮೈತ್ರಿ ಕೂಟದಿಂದ ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಅವಕಾಶ ಸಿಗದಿರುವುದನ್ನು ಕಾಂಗ್ರೆಸ್ ಟೀಕಿಸಿದ್ದು, ಇದು ಕನ್ನಡಿಗರಿಗೆ ಮಾಡಿದ ದ್ರೋಹ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

ಎನ್‌ಡಿಎ ಮೈತ್ರಿ ಕೂಟದಿಂದ ಎಚ್.ಡಿ. ದೇವೇಗೌಡರಿಗೆ ರಾಜ್ಯಸಭೆಗೆ ಸಿಗಲಿದೆ ಎಂಬ ಚರ್ಚೆಗಳು ಜೋರಾಗಿದ್ದವು, ಇದರ ಜತೆಗೆ ಬಿಜೆಪಿಯಿಂದಲೂ ಹಲವು ನಾಯಕರ ಹೆಸರು ಗಳು ಕೇಳಿ ಬಂದಿದ್ದವು, ಕೊನೆಯದಾಗಿ ಬಿಜೆಪಿ ಪ್ರೊ. ನಾಗರಾಜ ಅಭ್ಯರ್ಥಿಯಾಗಿ ಘೋಷಣೆ ಮಾಡಿಕೊಂಡಿರುವುದನ್ನು ಕಾಂಗ್ರೆಸ್ ಅಸ್ತ್ರ ಮಾಡಿಕೊಂಡಿದ್ದು, ಎಚ್.ಡಿ ಕುಮಾರಸ್ವಾಮಿ ಮತ್ತು ಬಿಜೆಪಿಯ ಮೇಲೆ ಮುಗಿಬಿದ್ದಿದ್ದಾರೆ.

ಬಿಜೆಪಿ ಮತ್ತು ಅದರ ನಾಯಕತ್ವವು ಜೆಡಿಎಸ್‌ಗೆ ಪದೇ ಪದೇ ಮಾಡುತ್ತಿರುವ ಅವಮಾನವನ್ನು ಸಚಿವ ಸ್ಥಾನ ಉಳಿಸಿಕೊಳ್ಳುವ ಉದ್ದೇಶದಿಂದ ಎಚ್.ಡಿ.ಕುಮಾರಸ್ವಾಮಿ ನಿರಂತರವಾಗಿ ಸಹಿಸಿಕೊಳ್ಳುತ್ತಿರುವುದು ಆಶ್ಚರ್ಯಕರವೂ, ಕಣ್ಣು ತೆರೆಸುವಂತದ್ದೂ ಆಗಿದೆ. ಈ ಅವಮಾನವನ್ನೂ ಒಪ್ಪಿಕೊಳ್ಳುವುದು ಪರಮಾವಧಿಯ ರಾಜಕೀಯ ಶರಣಾಗತಿಯಾಗಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಜಿ.ಎಸ್ ಬಸವರಾಜು ಅವರು ದೇವೇಗೌಡರನ್ನು ಸೋಲಿಸಿದ್ದರು. ಬಳಿಕ, ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ, ಮಾಜಿ ಪ್ರಧಾನಮಂತ್ರಿಯ ಸ್ಥಾನಮಾನಕ್ಕೆ ಗೌರವ ನೀಡಿ ಕಾಂಗ್ರೆಸ್ ಪಕ್ಷ ಹಾಗೂ ಸೋನಿಯಾ ಗಾಂಧಿಯವರು ದೇವೇಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡಲು ಬೆಂಬಲ ನೀಡಿದ್ದರು. ಈಗ ದೇವೇಗೌಡರಿಗೆ ರಾಜ್ಯಸಭೆಗೆ ಅವಕಾಶ ನಿರಾಕರಿಸಿ, ತನ್ನ ಪಕ್ಷದ ಪದಾಧಿಕಾರಿಯನ್ನೇ ಆಯ್ಕೆ ಮಾಡಿದೆ ಎಂದಿದ್ದಾರೆ.

ಸುರ್ಜೇವಾಲಗೆ ತಿರುಗೇಟು

ಸುರ್ಜೇವಾಲ ಅವರ ಹೇಳಿಕೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು,



ಜೆಡಿಎಸ್ ಬಗ್ಗೆ ಮಾತನಾಡುವ ಮುನ್ನ ಕಾಂಗ್ರೆಸ್‌ನ ಕರಾಳ ಇತಿಹಾಸವನ್ನು ಒಮ್ಮೆ ನೆನಪಿಸಿಕೊಳ್ಳಿ, 1997ರಲ್ಲಿ ಕುತಂತ್ರದಿಂದ ದೇವೇಗೌಡರನ್ನು ಅವರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದ್ದು, ನೀವು ಕಾಂಗ್ರೆಸ್ ಪಕ್ಷ ಮಾಡಿದ ಈ ಮಹಾದ್ರೋಹವನ್ನು ಕಳೆದ 30 ವರ್ಷದಿಂದ ಕನ್ನಡಿಗರು ಪ್ರಶ್ನಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.



> ದೇವೇಗೌಡರ ಸಹಾಯದಿಂದ ಸಂಸತ್ತಿನಲ್ಲಿ ಬಿಜೆಪಿ ಬಿಲ್ ಪಾಸ್ ಮಾಡಿಕೊಂಡಿತು. ಆದರೆ, ಈಗ ಅವರಿಗೆ ಅಪಮಾನ ಮಾಡಿದೆ.
> ■ **ಬಿ.ಕೆ. ಹರಿಪ್ರಸಾದ್**, ಕೆಪಿಸಿಸಿ ಅಧ್ಯಕ್ಷ

ಬಿಜೆಪಿ ಅಭ್ಯರ್ಥಿಗಳಿಂದ ಉಮೇದುವಾರಿಕೆ

• **ಬೆಂಗಳೂರು:** ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾದ ಸೋಮವಾರ ಬಿಜೆಪಿ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜ ಯೇಂದ್ರ, ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಶಾಸಕ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಸಭೆಯ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಜಿ. ಪಾಟೀಲ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಶುಭ ಹಾರೈಸಿದರು.

ಪ್ರೊ. ಎಂ. ನಾಗರಾಜ್: ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸುದೀರ್ಘ ಅನುಭವ ಹೊಂದಿರುವ ಪ್ರೊ. ಎಂ. ನಾಗರಾಜ್ ಅವರು ಕರ್ನಾಟಕ ಬಿಜೆಪಿಯ ಹಿರಿಯ ಮುಖಂಡರು. ಮೂಲತಃ ಧಾರವಾಡದವರಾದ ನಾಗರಾಜ್, ಶೈಕ್ಷಣಿಕ ವಲಯದಿಂದ ಬಂದವರಾಗಿದ್ದು, ದೀರ್ಘಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಘಟನೆಗಳ ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದಾರೆ. ತರುವಾಯ ಭಾರತೀಯ ಜನತಾ ಪಕ್ಷದ ಮೂಲಕ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದರು.

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಆಡಳಿತಾತ್ಮಕ ಅನುಭವ ಇವರಿಗಿದೆ. ಜನಸಂಘದ ಸ್ಥಾಪಕ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮ ಶತಮಾನೋತ್ಸವ ವರ್ಷದ ನಿಮಿತ್ತ ಪ್ರತಿ ಜಿಲ್ಲೆಯಲ್ಲೂ ಬಿಜೆಪಿಯ ಸ್ವಂತ ಕಾರ್ಯಾಲಯ ನಿರ್ಮಿಸುವ ಅಮಿತ್ ಶಾ ಅವರ ಕನಸಿನ ಯೋಜನೆಯಲ್ಲಿ ಭವನ ನಿರ್ಮಾಣ ಸಮಿತಿಗೆ ಕರ್ನಾಟಕದ ಸಂಚಾಲಕರಾಗಿಯೂ ಕೆಲಸ ಮಾಡಿದ್ದಾರೆ.



ಲಿಂಗರಾಜ ಪಾಟೀಲ್: ಹುಬ್ಬಳ್ಳಿಯವರಾದ ಲಿಂಗರಾಜ ಪಾಟೀಲ್ ಅವರು ಸುಮಾರು ಮೂರುವರೆ ದಶಕಗಳಿಂದ ಬಿಜೆಪಿಯಲ್ಲಿ ಕಾರ್ಯಕರ್ತರಾಗಿ, ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ರಾಜ್ಯ ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ರಘು ಕೌಟಿಲ್ಯ: ಮೈಸೂರಿನ ರಘು ಕೌಟಿಲ್ಯ ಅವರು ಕಾಯಕ ಸಮುದಾಯದ ಪರ ಹೋರಾಟದಲ್ಲಿ ಗುರುತಿಸಿ ಕೊಂಡವರು. ಬಿಜೆಪಿ ರಾಜ್ಯ ಸಹ ವಕ್ತಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿದ್ದಾರೆ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಸರ್ಕಾರಿ ಯೋಜನೆಗಳಿಗೆ ಒಳಪಟ್ಟ ಖಾಸಗಿ ಆಸ್ಪತ್ರೆಗಳು ನಿಯಮ ಉಲ್ಲಂಘಿಸುವಂತಿಲ್ಲ

ನಿಯಮ ಮೀರಿದರೆ ಅನುಮತಿ ರದ್ದು: ಖಾದರ್

• **ಮಂಗಳೂರು:** ರಾಜ್ಯದ ಜನರಿಗೆ ಅತ್ಯುತ್ತಮ ಆರೋಗ್ಯ ಸೇವೆಯನ್ನು ನೀಡುವ ವಾತಾವರಣ ನಿರ್ಮಿಸಬೇಕಾಗಿದೆ. ಆಯುಷ್ಮಾನ್ ಸೇರಿದಂತೆ ಸರಕಾರಿ ಯೋಜನೆಗಳಿಗೆ ಒಳಪಟ್ಟ ಖಾಸಗಿ ಆಸ್ಪತ್ರೆಗಳು ಜನಸಾಮಾನ್ಯರಿಗೆ ನೀಡಿರುವ ಸೌಕರ್ಯ ನೀಡದೆ ನಿಯಮ ಉಲ್ಲಂಘಿಸಿದರೆ, ದುರುಪಯೋಗಪಡಿಸಿದರೆ ಅವರಿಗೆ ನೀಡಿರುವ ಅನುಮತಿ ರದ್ದುಪಡಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ. ಖಾದರ್ ತಿಳಿಸಿದರು.

ಆರೋಗ್ಯ ಸಚಿವ ಬಳಿಕ ಅವರು ಆರೋಗ್ಯ ಇಲಾಖೆ ದಕ ಜಿಲ್ಲಾ ಮಟ್ಟದ ಪ್ರಥಮ ಸಭೆಯನ್ನು ಪಡೀಲ್‌ನ ಪ್ರಜಾಸೌಧದಲ್ಲಿ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಸೋಮವಾರ ಅವರು ಮಾತನಾಡಿದರು. ಈ ಕಾರ್ಯದಲ್ಲಿ ವಿಫಲರಾಗುವ ಆರೋಗ್ಯ ಮಿತ್ರರ ವಿರುದ್ಧವೇ ಇಲಾಖೆಯಿಂದ ಕ್ರಮ ವಹಿಸಲಾಗುವುದು ಎಂದರು. ಜನಸಾಮಾನ್ಯರಿಗೂ ಅತ್ಯುತ್ತಮ ಆರೋಗ್ಯ ವ್ಯವಸ್ಥೆ ಲಭ್ಯವಾಗುವುದನ್ನು ಖಾತರಿ ಪಡಿಸುವುದಕ್ಕಾಗಿ ಆರೋಗ್ಯ ಮಿತ್ರರನ್ನು ನೇಮಕ ಮಾಡಲಾಗಿದೆ. ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇದರ ಜತೆಯಲ್ಲೇ ಅಗತ್ಯ ಕೆಲವೊಂದು ಯೋಜನೆಗಳನ್ನು ಜಾರಿಗೊಳಿಸುವುದು ಹಾಗೂ ಅನಗತ್ಯ ಕಾರ್ಯಕ್ರಮಗಳನ್ನು ಕೈಬಿಡುವ ಬಗ್ಗೆಯೂ ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿಯಾಗಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದರು.



> ಆಯುಷ್ಮಾನ್ ಕರ್ನಾಟಕ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಂದ ಖಾಸಗಿ ಆಸ್ಪತ್ರೆಗಳು ಹಣ ಪಡೆಯಬಾರದು. ಒಂದು ವೇಳೆ ಹೆಚ್ಚುವರಿ ಶುಲ್ಕ ಪಡೆದರೆ ಆರೋಗ್ಯ ಮಿತ್ರರು ಈ ಬಗ್ಗೆ ಗಮನ ಹರಿಸಿ ಮೇಲಿನ ಅಧಿಕಾರಿಗಳ ಮೂಲಕ ಉಚಿತ ಚಿಕಿತ್ಸೆಗೆ ಕ್ರಮ ವಹಿಸಬೇಕು.
> ■ **ಯು.ಟಿ. ಖಾದರ್**, ಸಚಿವ

ಹಿಂದೆ ನಾನು ಆರೋಗ್ಯ ಸಚಿವನಾಗಿದ್ದ ವೇಳೆ ಆರೋಗ್ಯ ಕರ್ನಾಟಕದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ಹಾಗೂ ಎಪಿಎಲ್‌ನವರಿಗೆ ಶೇ. 70ರಷ್ಟು ಉಚಿತ, ಶೇ.30ರಷ್ಟು ವೆಚ್ಚ ರೋಗಿ ಭರಿಸುವ ವ್ಯವಸ್ಥೆ ಇತ್ತು. ಬಳಿಕ ಅದೀಗ ಶೇ. 70ರಷ್ಟು ರೋಗಿ ಭರಿಸುತ್ತಿದ್ದು, ಶೇ.30 ಸರಕಾರ ಎಂಬಂತಾಗಿದೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಲಾಗುವುದು. ಎಪಿಎಲ್ ಹಾಗೂ ಬಿಪಿಎಲ್‌ನವರಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ಒದಗಿಸುವ ಬಗ್ಗೆ ರೂಪುರೇಷೆ ಮಾಡಲಾಗುವುದು ಎಂದು ಹೇಳಿದರು.

ವೈದ್ಯರು ಸರಕಾರಿ ಆಸ್ಪತ್ರೆಗಳಲ್ಲಿ ಸೇವೆ ಮಾಡಲು ಆಕರ್ಷಿಸುವ ಹಾಗೂ ಪ್ರೇರಣೆ ನೀಡುವ ಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಕ್ರಮ ವಹಿಸಲಾಗುವುದು. ಸರಕಾರ ಯೋಜನೆಗಳು ಸಮರ್ಪಕವಾಗಿ ನಿರ್ವಹಣೆಯಾಗಬೇಕಾದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯವಸ್ಥೆ ಉತ್ತಮವಾಗಿರಬೇಕು. ಅದಕ್ಕಾಗಿ ಜಿಲ್ಲಾ ಮಟ್ಟದ ವಿವಿಧ ಹಂತಗಳ ಅಧಿಕಾರಿ, ಸಿಬ್ಬಂದಿಯಿಂದ ಸಮಸ್ಯೆಯನ್ನು ಅರಿತುಕೊಳ್ಳಲಾಗಿದೆ. ಹಲವಾರು ಸಮಸ್ಯೆಗಳು ಗಮನಕ್ಕೆ ಬಂದಿವೆ. ಸಮಸ್ಯೆ ಬಗೆಹರಿಸದೆ ಯೋಜನೆಗಳನ್ನು ಜನರಿಗೆ ತಲುಪಿಸಲು ಸಾಧ್ಯವಾಗದು. ಅದಕ್ಕಾಗಿ ಸರಕಾರಿ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಕ ಮಾಡಬೇಕಿದೆ ಎಂದರು.

ಗುತ್ತಿಗೆ ಆಧಾರದಲ್ಲಿ ನೇಮಕ ಆದ ವೈದ್ಯರು ಮೂರು ವರ್ಷ ಸೇವೆ ಸಲ್ಲಿಸಿದರೆ ಅವರನ್ನು ಖಾಯಂಗೊಳಿಸುವ ಪದ್ಧತಿ ಹಿಂದೆ ಮಾಡಲಾಗಿತ್ತು. ಇದರಿಂದ ಉದ್ಯೋಗ ಭದ್ರತೆಯ ಕಾರಣದಿಂದ ಹೆಚ್ಚಿನ ವೈದ್ಯರ ನೇಮಕವಾಗುತ್ತಿತ್ತು. ಆದರೆ ಅದೀಗ ಬದಲಾಗಿದೆ. ಅದನ್ನು ಮರು ಪರಿಶೀಲಿಸಲಾಗುವುದು ಎಂದು ಸಚಿವ ಯು.ಟಿ.ಖಾದರ್ ಹೇಳಿದರು. ಸಚಿವ ಕೃಷ್ಣ ಬೈರೇಗೌಡ ಅವರು ತಮಗೆ ನೀಡಲಾದ ಖಾತೆ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸಿದ ಖಾದರ್, ಎಲ್ಲಾ ಗೊಂದಲವನ್ನು ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಸರಿ ಮಾಡುತ್ತಾರೆ ಎಂದರು.

ಶಕ್ತಿಗೆ ಬರಲಿದೆ ಸ್ಮಾರ್ಟ್‌ಕಾರ್ಡ್: ಸಚಿವ

• **ಬೆಂಗಳೂರು:** ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಮಹಿಳೆಯರಿಗೆ ಸ್ಮಾರ್ಟ್‌ಕಾರ್ಡ್ ಹಾಗೂ ಪುರುಷರಿಗೆ ಮೆಟ್ರೊ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್ ಕಾರ್ಡ್‌ನ್ನು ಪಡೆದುಕೊಳ್ಳಬಹುದಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ಹೇಳಿದರು.

ನೂತನ ಸಾರಿಗೆ ಸಚಿವರಾಗಿ ಸೋಮವಾರ ವಿಧಾನಸೌಧದ ಕೊಠಡಿಯಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ ಮತ್ತು ವಾಯವ್ಯ ಸಾರಿಗೆ ನಿಗಮಗಳ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಲಾಖೆಗಳ ಬಗ್ಗೆ ಮಾಹಿತಿ ಪಡೆದರು.

ಈ ವೇಳೆ ಮಾತನಾಡಿದ ಸಚಿವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳ ಮೂಲಕ ಜನತೆಯ ಬದುಕು ಹಸನಾಗುವಂತೆ ಮಾಡಲಾಗಿದೆ. ಶಕ್ತಿ ಯೋಜನೆಯನ್ನು ಕೊಟ್ಟ ನಂತರ ಮಹಿಳೆಯರು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಯೋಜನೆ ಜಾರಿಯಾದ ಬಳಿಕ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ.40 ರಷ್ಟು ಹೆಚ್ಚಳವಾಗಿದೆ ಎಂದರು.

ಶಕ್ತಿ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಉದ್ದೇಶದಿಂದ ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದ ಮೂರು ಕೋಟಿಗೂ ಅಧಿಕ ಜನರಿಗೆ ಈ ಸ್ಮಾರ್ಟ್‌ಕಾರ್ಡ್‌ನ್ನು ವಿತರಿಸುವ ನಿರೀಕ್ಷೆಯಿದೆ. ಮಹಿಳೆಯರಿಗೆ ಉಚಿತವಾಗಿ ಸ್ಮಾರ್ಟ್ ಕಾರ್ಡ್ ಸಿಗಲಿದ್ದು, ಪುರುಷರು ಮೆಟ್ರೊ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್ ಕಾರ್ಡ್‌ನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

1000 ಬಸ್ ಖರೀದಿ

ರಾಜ್ಯ ಸರ್ಕಾರದ ಅನುದಾನದಲ್ಲಿ 1000 ಸಾವಿರ ಬಸ್‌ಗಳನ್ನು ಖರೀದಿಸಲಾಗುತ್ತದೆ.



ಇದೇ ವೇಳೆ, ಕೇಂದ್ರ ಸರ್ಕಾರದ ಅನುದಾನದಲ್ಲಿ 4 ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಹಂತಹಂತವಾಗಿ ಬಸ್‌ಗಳನ್ನು ಖರೀದಿಸಿ ನಾಲ್ಕೂ ನಿಗಮಗಳಿಗೆ ಹಂಚಿಕೆ ಮಾಡಲಾಗುತ್ತದೆ ಎಂದು ಹೇಳಿದರು.

ಗೌರಿಬಿದನೂರಿನ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ, ಗುಬ್ಬಿ

ಅಸಲು ದಾವಾ ನಂ. 657/2023

[illegible]

ಪತ್ರಿಕಾ ಪ್ರಕಟಣೆ

[illegible] 657/2023 [illegible] 07-08-2026 [illegible] 11-00 [illegible]

[illegible] 2026ನೇ [illegible] 08 [illegible]

IN THE COURT OF PRL. CIVIL JUDGE & JMFC AT ANEKAL

Crl. Misc No. 849/2026

1. Manju, S/o. Late Venkateshappa, Aged about 42 years, R/at: No. 17/44, (old.No.54), Ambedkar Nagar, Anekal Town, Anekal Taluk, Bangalore - 562125. **2. Suresh.V,** S/o. Venkateshappa, Aged about 34 years, R/at: No. 101, Ambedkar Nagar, Anekal Town, Anekal Taluk, Bangalore-562125.

...PETITIONERS

And : The Chief Officer, Town Municipal Corporation, Anekal Town, Bengaluru Urban District. **...RESPONDENT**

PUBLIC NOTICE

Whereas, the petitioners have filed the above petition for the death certificate of the petitioners Grand Mother namely **GOTAMMA W/o. Late Chikkavenkatappa who died on 20.06.2009** at Ambedkar Nagara, Anekal Town, Bengaluru District. If anyone have any objection hereby inform to appear before this Hon'ble Court in person or by pleader duly instructed **on 13.07.2026 at 11.00 AM** to show cause against claim, failing which the matter will be heard and determined ex-party.

Given under my hand and the seal of the court on this 08th day of June 2026.

By Order of the Court, Sheristedar, Civil Judge (Jr.Dv) and JMFC Court, Anekal.

Advocate for petitioners : **Nandhish P,** Advocate, office at: No. 7, Yellappa Building, Near Court Complex, Anekal Town.

ಹಿರಿಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ಆನೇಕಲ್

ಸಿ.ಮಿಸ್.ಸಂಖ್ಯೆ. 854/2026

[illegible]

IN THE COURT OF THE 38th ADDL. CHIEF JUDICIAL MAGISTRATE AT BENGALURU

C.C. No. 9791/2018 (CH-38)

BETWEEN : VENKATESH .V, S/o Late Venkataswamy, Age: 48 Year, Occ: K.S.R.T.C. Occ. Driver, R/at. No. 19/3, 4th Cross, Mattadahalli, R.T. Nagar Post, Bangalore 560032. Mobile 9449959963.

...COMPLAINANT

AND : JAYAPRAKASH, Age: about 47 years, R/at. No. 1947, 9th Cross, ESRU Layout, Kumarswamy Layout, Bengaluru-560078. Mobile. 9900966992. **...ACCUSED**

PUBLIC NOTICE

WHEREAS, the complainant has filed the above complainant before the Hon'ble 38th Addl. Chief Judicial Magistrate at Bengaluru that the accused Mr. Jayprakash is suspected to have committed the offence punishable U/S 138 of N.I. Act 1881 and the Arrest Warrant was issued thereupon has returned and that the said accused Mr. Jayaprakash can not be found.

AND WHEREAS it has been shown to the satisfaction of the Hon'ble court of 38th Addl Chief Judicial Magistrate at Bengaluru that the said accused has been absconding or concealing themselves to avoid the service of the said warrant.

PROCLAMATION is hereby made that the said accused Mr. Jayprakash is required to appear before the Hon'ble 38th Addl. Chief Judicial Magistrate at Bengaluru to answer the said complainant **on 02/07/2026.**

Given under my hand and seal of this court this 3rd day of June 2026.

By order of the Court, Senior Sheristedar, XXXIII Addl. Chief Judicial Magistrate Court, Bengaluru City.

Address for Service : **SRI. M.G. KANTHARAJAPPA,** Advocate, No. 18, 2nd Cross, Babanna Layout, Malasandra, T.Dasarahalli Post, Bangalore - 560 057. Mobile : 9448711547, Kantharajappa80@gmail.com

---

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹಿರಿಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ಆನೇಕಲ್

ಸಿ.ಮಿಸ್.ಸಂಖ್ಯೆ. 855/2026

[illegible]

BEFORE SMT. B. R. KAMALINI NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESHWARAM, AT BENGALURU

DISPUTE NO. DRB-1/ CFS/142/2025-2026

DISPUTANT: M/s. Margadarsi Chits (K) Pvt, Ltd., NO.717, "Poorna Shashi Complex", 1st Floor, Modi Hospital Road, 2nd Stage, Basaveshwaranagar, Bengaluru-560 086. Rep. by its Foreman and Branch Manager, **Sri. G. Govinda Rao**

OPPONENTS:

M/s. Change Over Fitness Studio Rep By Prop Mr. N. Harish and Others

01. M/s. Change Over Fitness Studio,Rep By Prop Mr. N. Harish S/o Nagaraju. C No. 40/11, 2nd and 3rd Floor, RR Plaza, KHB Colony, 5th main road, Govindaraja Nagar, Vijayanagar, Bengaluru-560 040.

"NOTICE TO THE OPPONENT NO. 01"

Whereas, the Disputant has filed the above dispute under Section 64 of the Chit Funds Act-1982, before the Deputy Registrar of Chits, First Zone, Bengaluru for recovery of **Rs.7,78,339/-** along with interest at 24% per annum and the Court Costs from the Opponent's.

Whereas, the Deputy Registrar of Chits - First Zone, Bangalore, has appointed me as his nominee and referred the above dispute to me for adjudication and disposal.

The Opponent No.01 named above are therefore, hereby directed to appear before this authority in the Office of Disputant **"Basaveswara Nagar Branch office of the Disputant Company which is situated at No.717, Poorna Shashi Complex, 1st Floor, Modi Hospital Road, 2nd Stage, Basaveshwarnagar, Bengaluru - 560 086, on 24-06-2026 at 03.00 P.M,** if they wish to contest the above case, with all relevant documents failing which the above dispute will be decided as per law in their absence.

Given under my hand and seal on **03-06-2026** at Bengaluru.

B.R.KAMALINI

NOMINEE OF THE DEPUTY REGISTRAR OF CHITS FIRST ZONE, BENGALURU

ಹಿರಿಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ [illegible]

[illegible]

IN THE COURT OF THE DEPUTY DIRECTOR OF LAND RECORDS AT CHICKBALLAPURA

DDLR Appeal No. 69/2026

Petitioner: Smt.Sarojamma. K. W/o Late Sri M.C. Rama Rao, Aged about 78 years, #118/13, Reynolds Colaco Road, Navaratna Agrahara, Jala Hobli, Bengaluru.

-V/S-

Respondents: 1.Assistant Director of Land Records (ADLR) Gauribidanur Taluk 2. Surveyor, Office of the Assistant Director of Land Records (ADLR) Gauribidanur Taluk 3. Tahsildar, Gauribidanur Taluk 4. Gangappa son of Kaleshappa, Resident of Sadarlahalli Village, Nagaragere Hobli, Gauribidanur Taluk, Chikkaballapura District.

Notice to all the respondents, under Section136(2) of the Karnataka Land Revenue Act.

Whereas, the petitioner has preferred this appeal against the respondents, You the respondent No.4, is hereby directed to appear before the above court in person or through pleader duly instructed and able to answer all material questions raised in the appeal or accompanied by some person/s able to answer all such questions on: 23.06.2026 at 03:00 PM.

Take notice that in default of your appearance on the date before mentioned in the appeal, it will be heard and determined ex-parte.

Given under my hand, seal of the Court on the day : 04.06.2026

By Order of the Court
Deputy Director of Land Records at Chickballapura

CHANGE OF NAME

I, **ADIL MALIK** S/o JALEEL MALIK aged 54 years, residing at NO 12/1, 7th Floor, A S K Building, Flat No 702, 4th Cross, Sirsi Road, M D Block, Bangalore South, Chamarajpet, Bengaluru- 560018, do hereby declare that I have changed my name from **MALIK MOHAMMAD ADEEL** TO **ADIL MALIK**, henceforth, and I shall be known and called as **ADIL MALIK** for all purposes, vide affidavit dated 20TH SEPTEMBER 2023, sworn before Advocate and Notary **A C SUBBU SWAMY** at Bangalore.

ಹಿರಿಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ಆನೇಕಲ್

ಸಿ.ಮಿಸ್.ಸಂಖ್ಯೆ. 856/2026

[illegible] 12/04/2009 [illegible] 06/06/2026 [illegible]

PUBLIC NOTICE

My client proposes to purchase agricultural land bearing Survey No.23/3 measuring 2 Acres 37 Guntas, situated at Etthinahalli Village, Y.N. Hosakote Hobli, Pavagada Taluk, Tumkuru District, more fully described in the **Schedule** herein below and hereinafter referred to as **'Schedule Property'** from its owner/s **Sudhakara Reddy S/o Late Ramalinga Reddy, ('Owner/s')**, residing at Ettinahalli village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.23/3 measuring 2 Acres 37 Guntas situated at Etthinahalli Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.23/2A1,
West by : Land bearing Sy No.11/3,
North by : Land bearing Sy No.23
South by : Land bearing Sy No.11/3

THIRUMALESH.A BA, LL.B., Advocate & Legal Adviser, Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299, Place: Pavagada. Date:9-6-2026

ಹಾಸನದ 4ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯದಲ್ಲಿ

[illegible] 687/2026

[illegible]

ಪತ್ರಿಕಾ ಪ್ರಕಟಣೆ

[illegible] 19/05/2026 [illegible]

IN THE COURT OF THE SENIOR CIVIL JUDGE AND JMFC AT HOSAKOTE

O.S.No.2443/2022

BETWEEN: Sri.B.Vishnu Prasad and another **... PLAINTIFFS**

AND: Sri.Balasubramanyam and others ... **DEFENDANTS**

NOTICE TO LEGAL REPRESENTATIVES OF THE DECEASED JANARDHANA.M DEFENDANT No.2(a) to 2(d)

2(a) Smt. Sharadamma W/o late M. Janardana, aged about 78 years, **2(b) Sri. Srihari J,** S/o late M. Janardana, aged about 50 years **2(c) Sri. Keshava J,** S/o late M. Janardana, aged about 47 years **2(d) Smt. Shalini** D/o late M. Janardana, aged about 52 years, All are R/at 5th A Cross, M.V. Extension, Hosakote 562114.

Take Notice that the above case was filed against M. Janardhana and others by the plaintiffs by name Balasubramanyam and others for the relief of Partition, the said Janardhana.M the defendant No.2 died, hence all of you legal representatives of the deceased Janardhana.M in the above case The hearing of the said case is fixed to be held on **16-07-2026** at 11:00AM.

You are hereby directed to appear on that day before the court personally or through your advocate, failing which the matter will be determined as exparte.

Given under my hand and seal of the Court on 04-06-2026.

By order of the court, Sheristedar, Senior Civil Judge & JMFC Hosakote.

T.V. ANJANAPPA, Advocate, K.R. Road, Hosakote Town.

IN THE COURT OF THE OF LAND RECORDS AND DEPUTY COMMISSIONER FOR SETTLEMENT AT TUMKUR

SURVEY APPEAL No. 10/2026

APPELANT: KS Malleshaiah. -V/s -

RESPONDENTS: The Assistant Director of Land Records, Tiptur

NOTICE TO RESPONDENT No 3(A) (C) IN THE ABOVE CASE

RESPONDENT No3: (a). Komala w/o Late Shankarappa, aged about 50 years, R/at. Jaipur village,Nonavinkere Hobli, Tiptur. **(c). Teju** s/o Late Shankarappa, aged about 24 Years, R/at Jaipur village, Nonavinkere Hobli, Tiptur Taluk.

Whereas the above appellant have instituted the above appeal against the respondent No 3(a) 283 (e) issued notice.

Take notice that you have been made as Respondent No 3(a) 283 (e) In the above appeal and the same is posted for your appearance on **18-06-2026** at 3:00 P.M, before the court of the Assistant commission at Tumkuru, therefore you are hereby summons to appear on the said date, failing which the case will be heard and determined in your absence.

Given under my hand and seal of this court that the 04-06-2026.

By order of the Court, Assistant Director of land Records, Tiptur.

Advocate for appellant: **Dr. B. SHIVAKUMAR, SUNITHA .B K.** Shurthi Mansion, 2nd Floor, 3rd Cross, MG Road, Tumkur. Mob: 9538544001.

PUBLIC NOTICE

My client proposes to purchase agricultural land bearing Survey No.**20/1** measuring **4** Acres **07** Gunta, situated at Etthinahalli Village, Y.N. Hosakote Hobli, Pavagada Taluk, Tumkuru District, more fully described in the **Schedule** herein below and hereinafter referred to as **'Schedule Property'** from its owner/s **Govindappa S/o Late Anjinappa, ('Owner/s')**, residing at Ettinahalli village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.20/1 measuring 4 Acres 07 Gunta land situated at Etthinahalli Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.112/1 & 112/2,
West by : Land bearing Sy No.14/4,
North by : Land bearing Sy No.19/7, 19/8, 19/6, 19/5,
South by: Land bearing Sy No.20/2

THIRUMALESH.A BA, LL.B., Advocate & Legal Adviser, Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299, Place: Pavagada. Date:9-6-2026

IN THE COURT OF THE I ADDL CIVIL JUDGE AND J.M.F.C AT CHICKBALLAPUR

Crl.Misc.No.29/2026

Petitioner : 1. **Smt. Mary Lathishiya S,** W/o Late. Christu Raj Aged about 50 years, R/at, #19/2, 5th Cross, Venkateshwara Layout, Dharamaram College Bengaluru South, Bengaluru-560 029. **2. Sri. Pradeep Nithin C,** S/o Late. Christu Raj, Aged about 30 years, **3. Sri. Keerthi Nirikshith,** S/o Late. Christu Raj, Aged about 28 years, The petitioner No.2 and 3 R/at, #43/A, 7th Cross, Near Lakshmi Theatre, Balaji Layout, Dharamaram College, Bengaluru South, Bengaluru-560 029. V/s

RESPONDENT: The Tahasildar, Chickaballapur Taluk, Chickballapur.

DRAFT PAPER PUBLICATION

The Petitioners have filed a petition for grant of death certificate of Christu Raj, S/o Late. Arogyaswamy, was died on 27.12.2004 at Susepalya Village, Kasaba Hobli, Chickaballapur Taluk and District. As the Petitioners are the legal heirs of the deceased Christu Raj.

If any person has right interest may appear before this Hon'ble court on 25.06.2026 at Chickaballapur at 11:00 AM in person or through pleader to file your objections if any.

Take notice that in default in your appearance of the date before/above mention in the notice it will be heard and determine ex-party.

Given under by hand seal of the court on the day of 04.06.2026.

By Order of the Court
Cheaf Ministrial Officer, 1st Addl. Civil Judge & J.M.F.C at Chickaballapur

Advocate for service: **Kumar T,** Advocate, Chickaballapur

IN THE COURT OF THE SENIOR CIVIL JUDGE AND JMFC AT TURUVEKERE

R.A. No. 60/2025

BETWEEN: Smt. Meenakshmamma and others **...APPELLANTS**

AND: Hanumanathaiah ...RESPONDENT

NOTICE/SUMMONS UNDER ORDER V RULE 20(1-A) OF THE CODE OF CIVIL PROCEDURE

To. Hanumanthaiah, S/o Boregowda, aged about 63 years, R/o Kolala Village, Dabbeghatta Hobli, Turuvekere Taluk, Tumakuru District **...RESPONDENT**

Whereas, the above named appellant have instituted the above appeal against the defendants for Declaration permanent injection in R.A. No.60/2025 and consequential reliefs, where in the above named is the respondent respectively. The appeal has been posted on **10-07-2026** for your appearance at 11-00 am. Take notice to appear before this Hon'ble court on the above mentioned date, i.e., **10-07-2026** at 11:00 A.M. Either personally or through your counsel to answer to the above suit. If you failed to appear on the above mentioned date, the matter will be disposed of in your absence as ex-parte

Issued as per the orders of this Hon'ble court on this 06-06-2026 with seal of this Hon'ble Court, Turuvekere.

By order of the court, Chief Ministerial Officer, Senior Civil Judge & JMFC Court at Tumkuru.

Advocate for Appellant: **NYAYADHAMA AND ASSOCIATES K.R. SANTHOSHA** No. 2, 2nd Floor, Baggiri Dore Complex, Tiptur Road, Turuvekere Town.

IN THE COURT OF THE MOTOR ACCIDENT CLAIMS TRIBUNAL AT BANGALORE (SCCH-10)

M.V.C. No. 8832/2025

BETWEEN : THAMAS ...PETITIONER

AND : RAKSHITH .G & ANOTHER ...RESPONDENTS

NOTICE TO RESPONDENT No. 1

Rakshith .G, S/o. Gangadharappa, # B Henjagondanahalli, Arisikere Taluk, Hassan District, Karnataka-573103.

(R C Owner of Motor Cycle Reg. No. KA-13-EZ-8017)

Whereas, the above Claim Petition is filed by the Petitioner against you and "IFFCO TOKIO GENERAL INSURANCE COMPANY LIMITED" for seeking compensation for a sum of Rs. 15,00,000/- on account of injuries in the Road Traffic Accident that occurred On.26-07-2025 at about 07:00 A.M while the Petitioner was carefully riding on Motor cycle Reg No : KA-14-HB-3575, near NH-69, Bypass Road, near Bhadra Petrol Bunk, Hudco Circle, Bhadravathi, Shivamogga, Karnataka, at the rider of the Motor cycle Reg. KA-13-EZ-8017, came at high speed in rash and negligent manner so as to endanger to the public, dashed against the petitioner Motor Cycle, caused the accident.

You are hereby Summoned to appear in this Court in person or pleader duly instructed **on 22.07.2026 at 11-00 A.M.** To answer the Claim Petition.

Take notice that in default of your appearance on the said date, the same will be heard and determined in your absence.

Given under my hand and seal of the Court on 06.06.2026.

By Order of the Court, Assistant Registrar, Court of Small Causes, Bangalore.

Advocate for Petitioner : **Manjunath .C.R,** Advocate, No. 5/9, 50 Feet Road, Muneshwara Block, Girinagara, Bangalore - 560 058.

PUBLIC NOTICE

My client proposes to purchase agricultural land bearing Survey No.**19/8** measuring **3** Acres, situated at Etthinahalli Village, Y.N. Hosakote Hobli, Pavagada Taluk, Tumkuru District, more fully described in the **Schedule** herein below and hereinafter referred to as **'Schedule Property'** from its owner/s **M Babu S/o Muthyalappa, ('Owner/s')**, residing at Ettinahalli village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.19/8 measuring 3 Acres situated at Etthinahalli Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.112/2,
West by : Land bearing Sy No.19/7,
North by: Land bearing Sy No.19/3
South by : Land bearing Sy No.20/1

THIRUMALESH.A BA, LL.B., Advocate & Legal Adviser, Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299, Place: Pavagada. Date:9-6-2026

[illegible]

IN THE COURT OF THE HON'BLE PRINCIPAL CIVIL JUDGE & JMFC AT HOSKOTE

C.Misc. 248/2026

PETITIONERS: Lakkana and others -V/s-

RESPONDENT: The Tahasildar, Hoskote

GENERAL PUBLIC NOTICE

Whereas, the petitioners has filed the above said petition for seeking the direction to the respondent for the issuance of death certificate of the Mother of the petitioners as Late MUNIYAMMA S/O Late SHANKARAPPA at Chokkahalli village kasaba Hobli Hoskote Taluk Bangalore Rural District-562114 As she was died on 30/12/2013, the case is posted for the appearance of the interested parties /publics on **09/07/2026** before the above said court Hence, interested parties are hereby requested to appear on person/ pleader / advocate on **09/07/2026** before the PRINCIPAL ADDITIONAL CIVIL JUDGE AND J.M.F.C AT HOSAKOTE. Failing which the above case will be disposed as exparte.

Given under my hand and seal of the Court on this 08/06/2026

By order of the Court, Sheristedar, Civil Judge & J.M.F.C Hoskote

GANESH .M, Advocate, Hoskote

ಚಿಕ್ಕಬಳ್ಳಾಪುರದ [illegible] ನ್ಯಾಯಾಲಯ, ಚಿಕ್ಕಬಳ್ಳಾಪುರ

[illegible] 284/2025

[illegible]

PUBLIC NOTICE

My client proposes to purchase agricultural land bearing Survey No.**19/7** measuring **3** Acres **01** Gunta, situated at Etthinahalli Village, Y.N. Hosakote Hobli, Pavagada Taluk, Tumkuru District, more fully described in the **Schedule** herein below and hereinafter referred to as **'Schedule Property'** from its owner/s **Vinay G H S/o Hanumantha Reddy, ('Owner/s')**, residing at Ettinahalli village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.19/7 measuring 3 Acres 01 Gunta land situated at Etthinahalli Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.19/8,
West by : Land bearing Sy No.19/6,
North by : Land bearing Sy No.19/3
South by : Land bearing Sy No.20/1

THIRUMALESH.A BA, LL.B., Advocate & Legal Adviser, Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299, Place: Pavagada. Date:9-6-2026

CHANGE OF NAME

I, **ASIF IQBAL HYDAR ALI** S/o HYDAR ALI PANAMBUR, residing at DS Max Sky City, Flat No 1210 12th Floor, Near Devin Paradise Enclave, Thanisandra Main Road, Jakkur Post, Bangalore North, Karnataka – 560064, do hereby declare that I have changed my name from **ASIF IQBAL CHIKMAGALUR HYDAR ALI** TO **ASIF IQBAL HYDAR ALI**, henceforth, and I shall be known and called as **ASIF IQBAL HYDAR ALI**, for all purposes, vide affidavit dated 08/06/2026, sworn before Advocate **FAHIM UNNISA** and Notary at Bangalore.

BEFORE THE JOINT COMMISSIONER OF LABOUR YERCADU ROAD, GOREMEDU, SALEM 636 008.

M.C.O.P. No. 242/2025

MR. TAMILSELVAN. ... PETITIONER/ APPLICANT

-V/s-

M/S. M.A.K.FEED AND FARM, # 77/1, RANAJI RAO ROAD, NEAR EAST-WEST SCHOOL, BASAVANGUDI, BANGALORE SOUTH, BANGALORE-560 004. KARNATAKA. ...**OPPOSITE PARTY-1.**

NOTICE

Take notice that the above named APPLICANT has filed a compensation claim petition against you before this Honorable Court. If you have got any objection, you may either directly or through a lawyer appear before this Honorable Court on **16.06.2026** at **3.00.P.M.** and file your objections. Failing which the case will be decided exparte in the above main petition.

COUNSEL FOR APPLICANT
P. SUBRAMANI
49, RAM NAGAR, KUMARASAMYPATTY, SALEM 636 007. CELL. 94433 55771.

IN THE COURT OF THE SCCH 16 AT BANGALORE

MVC No.: 1486/2026

PETITIONER: Ramesh & others.

-V/S-

RESPONDENT: United India insurance and others.

NOTICE TO RESPONDENT NO. 1 & 2

1)Sagar S/o Ram Murat, R/a: No. 257, 7th Cross, Pragathipura Bidarahalli, Bangalore-560070 (Owner of TVS raider vehicle bearing Reg. No. KA-53-JB-1894), 2) Manjunath S/o Shivashivanappa, R/a: 1st cross, 1st floor, St. Antony School, Ramamurthy nagar, Bangalore-560016, (Insured of TVS raider vehicle bearing Reg. No. KA-53-JB-1894)

Whereas the above named petitioners have filed the petition against respondents for seeking the relief for road traffic accident.

Take notice that the petitioner has filed the above case against you and other respondent for claiming compensation of Rs 50,00,000/- for the death occurred in the Road Traffic Accident, In RTA occurred. On 21-02-2026 at about 06-30 P.M., when deceased Komala travelling in your two wheeler bearing Reg. No. KA-53-JB-1894 involved in the accident. Due to that deceased Komala sustained grievous injuries and dead. Accident near BM Express Way, BM Road, Ramanagara Town and Taluk. You are by Summoned to appear before this Hon'ble Court in person or pleader on 01-07-2026 Day of 11-00 A.M, if you fail to appear the above case will be decided exparte.

Issued as per the order and seal of this Hon'ble court on this Day of 02-06-2026 with the seal of this Hon'ble court.

By Order of the Court, Assistance Registrar, Court of Small Causes, Bengaluru.

Advocate for petitioner: Hemanth, Advocate, Opp. British liquors, Ramanagara Town, Ramanagara. Bengaluru. Date: 02-06-2026

BEFORE SMT. P. ANURADHA NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESHWARAM, AT BENGALURU

DISPUTE NO. DRB-1/CFS/ 144 /2025-2026

DISPUTANT: M/s. Margadarsi Chits (K) Pvt, Ltd., NO.717, "Poorna Shashi Complex", 1st Floor, Modi Hospital Road, 2nd Stage, Basaveshwaranagar, Bengaluru-560 086. Rep. by its Foreman and Branch Manager, **Sri. G. Govinda Rao**

OPPONENTS:

Mr. N. Rajesh Kumar and Others

07. Mrs. B. Padma W/o Venkatesh Domalapalli, Gudemarlahalli Chintamani, Chikkaballapura - 563 146.

"NOTICE TO THE OPPONENT NO. 07"

Whereas, the Disputant has filed the above dispute under Section 64 of the Chit Funds Act-1982, before the Deputy Registrar of Chits, First Zone, Bengaluru for recovery of **Rs.2,11,673/-** along with interest at 24% per annum and the Court Costs from the Opponent's.

Whereas, the Deputy Registrar of Chits - First Zone, Bangalore, has appointed me as his nominee and referred the above dispute to me for adjudication and disposal.

The Opponent No.07 named above are therefore, hereby directed to appear before this authority in the Office of Disputant **"Basaveswara Nagar Branch office of the Disputant Company which is situated at No.717, Poorna Shashi Complex, 1st Floor, Modi Hospital Road, 2nd Stage, Basaveshwarnagar, Bengaluru - 560 086,** on **24-06-2026 at 03.00 P.M,** if they wish to contest the above case, with all relevant documents failing which the above dispute will be decided as per law in their absence.

Given under my hand and seal on **03-06-2026** at Bengaluru.

SMT. P. ANURADHA

NOMINEE OF THE DEPUTY REGISTRAR OF CHITS FIRST ZONE, BENGALURU

CHANGE OF NAME

I, **NIKILA NATARAJ** W/o NATARAJ B aged 39 years, residing at NO 13 GOPIKA NILAYA 6TH CROSS SBM COLONY, MATHIKERE, BENGALURU-560054, do hereby declare that I have changed my name from **NIKILA** TO **NIKILA NATARAJ**, henceforth, and I shall be known and called as **NIKILA NATARAJ**, for all purposes, vide affidavit dated 08TH JUNE 2026, sworn before Advocate and Notary **R VISHWANATH** at Bangalore.

IN THE COURT OF PRL. CIVIL JUDGE & JMFC AT ANEKAL

Crl. Misc No. 842/2026

1. Manju, S/o. Late Venkateshappa, Aged about 42 years, R/at: No. 17/44, (old.No.54), Ambedkar Nagar, Anekal Town, Anekal Taluk, Bangalore - 562125. **2. Suresh.V,** S/o. Venkateshappa, Aged about 34 years, R/at: No. 101, Ambedkar Nagar, Anekal Town, Anekal Taluk, Bangalore-562125.

...PETITIONERS

And : The Chief Officer, Town Municipal Corporation, Anekal Town, Bengaluru Urban District. **...RESPONDENT**

PUBLIC NOTICE

Whereas, the petitioners have filed the above petition for the death certificate of the petitioners father namely **Venkateshappa S/o. Late. Chikkavenkatappa who died on 07-12-2000** at Ambedkar Nagara, Anekal Town, Bengaluru District. If anyone have any objection hereby inform to appear before this Hon'ble Court in person or by pleader duly instructed **on 10.07.2026 at 11.00 AM** to show cause against claim, failing which the matter will be heard and determined ex-party.

Given under my hand and the seal of the court on this 08th day of June 2026.

By Order of the Court, Sheristedar, Civil Judge (Jr.Dv) and JMFC Court, Anekal.

Advocate for petitioners : **Nandhish P,** Advocate, office at: No. 7, Yellappa Building, Near Court Complex, Anekal Town.

ಬೆಂಗಳೂರು 23ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು

ಕ್ರಿಮಿನಲ್ ಮಿಸ್. ನಂ. 2245/2026

[illegible] 02.09.2020 [illegible] 20.06.2026 [illegible] 11.00 [illegible] 06.06.2026 [illegible]

By Order Of the Court, Senior Sheristedar, XXIII ADDL. Chief Judicial, Magistrate Court, Bengaluru City.

BEFORE SMT. B. R. KAMALINI NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESHWARAM, AT BENGALURU

DISPUTE NO. DRB-1/ CFS/143/2025-2026

DISPUTANT: M/s. Margadarsi Chits (K) Pvt, Ltd., NO.717, "Poorna Shashi Complex", 1st Floor, Modi Hospital Road, 2nd Stage, Basaveshwaranagar, Bengaluru-560 086. Rep. by its Foreman and Branch Manager, **Sri. G. Govinda Rao**

OPPONENTS:

Mr. R. Venkatesh and Others

06. Mr. G. Srinivas S/o Govindaraj Prop: SLV Electricals No.77, 2nd Main, 4th Cross, Pattegarpalya, Kaveripura Bengaluru-560 072.

"NOTICE TO THE OPPONENT NO. 06"

Whereas, the Disputant has filed the above dispute under Section 64 of the Chit Funds Act 1982, before the Deputy Registrar of Chits, First Zone, Bengaluru for recovery of **Rs.7,10,955/-** along with interest at 24% per annum and the Court Costs from the Opponent's.

Whereas, the Deputy Registrar of Chits - First Zone, Bangalore, has appointed me as his nominee and referred the above dispute to me for adjudication and disposal.

The Opponent No.06 named above are therefore, hereby directed to appear before this authority in the Office of Disputant **"Basaveswara Nagar Branch office of the Disputant Company which is situated at No.717, Poorna Shashi Complex, 1st Floor, Modi Hospital Road, 2nd Stage, Basaveshwarnagar, Bengaluru-560 086,** on **24-06-2026 at 03.00 P.M,** if they wish to contest the above case, with all relevant documents failing which the above dispute will be decided as per law in their absence.

Given under my hand and seal on **03-06-2026** at Bengaluru.

B.R.KAMALINI

NOMINEE OF THE DEPUTY REGISTRAR OF CHITS FIRST ZONE, BENGALURU

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ಮಿನಿ ವಿಧಾನಸೌಧ ಪಕ್ಕದಲ್ಲಿ, ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ–585102.Email: commissionergda@gmail.com

ಸಂಖ್ಯೆ: ನಪ್ರಾಕ/ತಾಂತ್ರಿಕ/ಉದ್ಯಾನವನ/ /2026–27/1056 ದಿನಾಂಕ : 08–06–2026

–: ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ (ಮೂರನೇಯ ಕರೆ) :–

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ ಸಂಖ್ಯೆ 19 ರ ಬಿಲಾಲಾಬಾದ ಕಾಲೋನಿ ರೆಹಮಾನ ಮಜೀದ ಹತ್ತಿರದಲ್ಲಿರುವ ಬಿಲಾಲಾಬಾದ ಪಾರ್ಕ & ಆಟದ ಮೈದಾನ ಅಭಿವೃದ್ಧಿ ಪಡಿಸುವ ಕಾಮಗಾರಿಗಾಗಿ ಇ–ಪ್ರೋಕ್ಯೂರಮೆಂಟ ಟೆಂಡರ್ ಕರೆಯಲಾಗಿದೆ. ಟೆಂಡರಗಿಟ್ಟ ಮೊತ್ತ **ರೂ. 1,34,32,260/-** ಇ.ಎಮ್.ಡಿ ಮೊತ್ತ ರೂ. 2,00,000/- ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ದ್ವಿಲಕೋಟೆ ಮಾದರಿಯಲ್ಲಿ (KW-4) ರಂತೆ. ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **23.06.2026 ರಂದು ಸಾಯಂಕಾಲ 5:30 ಗಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25.06.2026 ರಂದು ಬೆಳಗ್ಗೆ 11:00 ಗಂಟೆಗೆ** ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.06.2026 ರಂದು ಬೆಳಗ್ಗೆ 11:00 ಗಂಟೆಗೆ.** ಟೆಂಡರದ ಎಲ್ಲಾ ವಿವರಗಳನ್ನು ಇ–ಪ್ರೋಕ್ಯೂರಮೆಂಟ ಟೆಂಡರದ ವೆಬ್‌ಸೈಟ್ www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಇನ್ನುಳಿದಂತೆ ವಿವರಗಳಿಗಾಗಿ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/194/ಕೆ.ಎಸ್.ಎಂ.ಸಿ.&ಎ/2026–27

ಜಿಲ್ಲಾ ಪಂಚಾಯತ್ ಬೆಂಗಳೂರು ನಗರ ಜಿಲ್ಲೆ
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ
ಆನೇಕಲ್ ತಾಲ್ಲೂಕು
ಜೆ.ಎಂ.ಎಫ್.ಸಿ ನ್ಯಾಯಾಲಯ ಎದುರು, ಅತ್ತಿಬೆಲೆ ರಸ್ತೆ, ಆನೇಕಲ್–562106

ಸಂಖ್ಯೆ:ಹಗುಪ/01/2026–27 ದಿನಾಂಕ:08–06–2026

ಕೆರೆಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಪ್ರಕಟಣೆ

2026–27ನೇ ಸಾಲಿನಲ್ಲಿ ಆನೇಕಲ್ ತಾಲ್ಲೂಕಿನ ಈ ಕೆಳಗಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಸರ್ಕಾರಿ ನಿಯಮಾನುಸಾರ ವಿಲೇವಾರಿ ಮಾಡಲು ಉದ್ದೇಶಿಸಲಾಗಿರುತ್ತದೆ.

1) ಲಕ್ಷ್ಮಿಸಾಗರ ಕೆರೆ, 2) ಕ್ಯಾಲಸನಹಳ್ಳಿ ಕೆರೆ, 3) ವಡೇರಮಂಚನಹಳ್ಳಿ ಕೆರೆ, 4) ಬಂಡೆನಲ್ಲಸಂದ್ರ ಕೆರೆ, 5) ಇಗ್ಗಲೂರು ಕೆರೆ, 6) ಕೂಡ್ಲುದೊಡ್ಡ ಕೆರೆ, 7) ಕೂಡ್ಲುಚಿಕ್ಕ ಕೆರೆ, 8) ಅತ್ತಿಬೆಲೆ ಬೊಮ್ಮಸಂದ್ರ, ಇಂಡಸ್ಟ್ರಿಯಲ್ ಏರಿಯಕೆರೆ, 9) ಕಮ್ಮಸಂದ್ರ ಕೆರೆ, 10) ಗೊಲ್ಲಹಳ್ಳಿ ಕೆರೆ, 11) ವೀರಸಂದ್ರ ಕೆರೆ.

ಸದರಿ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆಯಲು ಅರ್ಹ ಮೀನುಗಾರಿಕೆ ಸಹಕಾರ ಸಂಘ / ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರರ ಉತ್ಪಾದಕರ ಸಂಸ್ಥೆಗಳು (FFPOs) ಮಾತ್ರ ಅರ್ಜಿ (ಅನುಬಂಧ–9) ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:29–06–2026.** ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಆನೇಕಲ್ ತಾಲ್ಲೂಕು, ಜೆ.ಎಂ.ಎಫ್.ಸಿ. ನ್ಯಾಯಾಲಯ ಎದುರು ಅತ್ತಿಬೆಲೆ ರಸ್ತೆ, ಆನೇಕಲ್ ರವರನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು
ಆನೇಕಲ್ ತಾಲ್ಲೂಕು

[illegible]/2026–27

ಹೊಸ ದಿಗಂತ
ಮಂಗಳವಾರ 9 ಜೂನ್ 2026



ಭಾರತದ ಮೊದಲ ಪ್ರಧಾನಿ ನೆಹರು ಮತ್ತು ಮೋದಿ ಯುಗ: ಎರಡು ಕಾಲಘಟ್ಟಗಳ ನಡುವಿನ ಅಜಗಜಾಂತರ

ನಮೋ ನೇತೃತ್ವದ ನವ ಭಾರತ

ಭಾರತದ ರಾಜಕೀಯ ಇತಿಹಾಸದಲ್ಲಿ ಜೂ.10 ಒಂದು ಸುವರ್ಣ ಅಕ್ಷರಗಳಲ್ಲಿ ಬರೆಯುವಂತಹ ದಿನ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಹೆಸರಲ್ಲಿದ್ದ ಸತತವಾಗಿ ಸುದೀರ್ಘ ಅವಧಿಗೆ ದೇಶವನ್ನು ಮುನ್ನಡೆಸಿದ ಪ್ರಜಾಸತ್ತಾತ್ಮಕ ಪ್ರಧಾನಿ ಎಂಬ ದಾಖಲೆಯನ್ನು ದಾಟಿ ಮುನ್ನಡೆಯಲಿದ್ದಾರೆ. ಈ ಮೈಲಿಗಲ್ಲು ಸ್ವಾಭಾವಿಕವಾಗಿಯೇ ಇಬ್ಬರು ನಾಯಕರ ಆಡಳಿತ ಶೈಲಿ, ಸಿದ್ಧಾಂತ, ಹೋರಾಟ ಹಾಗೂ ಸಾಮ್ಯತೆಗಳನ್ನು ಚರ್ಚಿಸುವಂತೆ ಮಾಡಿದೆ. ಆ ಕುರಿತ ವಿವರ ಇಲ್ಲಿದೆ.

ಒಂದು ದೇಶದ ಇತಿಹಾಸದ ಪುಟಗಳನ್ನು ತಿರುವಿಹಾಕುವಾಗ, ಆಯಾ ಕಾಲಘಟ್ಟದಲ್ಲಿ ಪ್ರಧಾನಿಯಾರಾಗಿದ್ದರು ಎನ್ನುವುದಕ್ಕಿಂತ ಆ ಪ್ರಧಾನಿ ಯಾವ ರಾಜಕೀಯ, ಸಾಮಾಜಿಕ ಮತ್ತು ಜಾಗತಿಕ ವಾತಾವರಣದಲ್ಲಿ ಆಡಳಿತ ನಡೆಸಿದರು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ನಾಯಕನೊಬ್ಬನ ಸಾಧನೆ ಅಥವಾ ವೈಫಲ್ಯವನ್ನು ಅಳೆಯುವ ಮುನ್ನ, ಆ ನಾಯಕ ಭದ್ರವಾಗಿ ನಿಂತ ನೆಲವನ್ನು, ಅವನ ಸುತ್ತ ಬೀಸುತ್ತಿದ್ದ ಬಿರುಗಾಳಿಯ ತೀವ್ರತೆಯನ್ನು ಮತ್ತು ಅವನ ಹೆಗಲ ಮೇಲೆ ತೂಗುತ್ತಿದ್ದ ಸವಾಲುಗಳ ಆಕಾಶವನ್ನು ಅಳೆಯಬೇಕಾಗುತ್ತದೆ.

ಜವಾಹರಲಾಲ್ ನೆಹರು ಮತ್ತು ನರೇಂದ್ರ ಮೋದಿಯವರನ್ನು ಭಾರತದ ರಾಜಕೀಯ ಇತಿಹಾಸ ಸತತ ಮೂರು ಬಾರಿ ದೇಶದ ಚುಕ್ಕಾಣಿ ಹಿಡಿಯುವ ಅಪರೂಪದ ಐತಿಹಾಸಿಕ ಗೌರವಕ್ಕೆ ಪಾತ್ರವಾಗಿಸಿದೆ. ಹೀಗಾಗಿ ಇಂದಿನ ಸಾರ್ವಜನಿಕ ಹಾಗೂ ಬೌದ್ಧಿಕ ಚರ್ಚೆಗಳಲ್ಲಿ ಇವರಿಬ್ಬರನ್ನೂ ಪಕ್ಕಪಕ್ಕದಲ್ಲಿಟ್ಟು ಹೋಲಿಸುವ, ವಿಶ್ಲೇಷಿಸುವುದು ತೀರಾ ಸಾಮಾನ್ಯ. ಆದರೆ, ಆ ಹೋಲಿಕೆ ವೈಜ್ಞಾನಿಕವಾಗಿ ಮತ್ತು ಬೌದ್ಧಿಕವಾಗಿ ಪ್ರಾಮಾಣಿಕವಾಗಿರಬೇಕಾದರೆ, ಮೊದಲು ಇಬ್ಬರೂ ಆಡಳಿತ ನಡೆಸಿದ ಕಾಲಘಟ್ಟಗಳ ನಡುವಿನ ಅಂತರವನ್ನು ಅರ್ಥಮಾಡಿಕೊಳ್ಳಬೇಕು. ಆ ಅಂತರ ಸಣ್ಣದೇನಲ್ಲ, ಅದು ನಿಜಕ್ಕೂ ಅಜಗಜಾಂತರ.

ನೆಹರು ಪ್ರಧಾನಿಯಾದದ್ದು 1947ರಲ್ಲಿ. ಒಂದು ಹೊಸ ರಾಷ್ಟ್ರ ಬ್ರಿಟಿಷ್ ದಾಸ್ಯದಿಂದ ಬಿಡುಗಡೆಯಾದ ಕಾಲ. ಅದೇ ನರೇಂದ್ರ ಮೋದಿ ಪ್ರಧಾನಿಯಾದದ್ದು 2014ರಲ್ಲಿ, ಈಗಾಗಲೇ ದಶಕಗಳ ಇತಿಹಾಸವಿರುವ ಹಳೆಯ ರಾಷ್ಟ್ರವೊಂದು ತನ್ನ ಮುಂದಿನ ಶತಮಾನದ ಜಾಗತಿಕ ನಾಯಕತ್ವವನ್ನು ಊಹಿಸಿಕೊಳ್ಳುತ್ತಿದ್ದ ಮಹತ್ವಾಕಾಂಕ್ಷೆಯ ಸಂದರ್ಭದಲ್ಲಿ. ಒಬ್ಬರು ಶೂನ್ಯದಿಂದ ಆಡಳಿತದ ಅಡಿಪಾಯ ಹಾಕಬೇಕಿತ್ತು, ಇನ್ನೊಬ್ಬರು ಈಗಾಗಲೇ ಸಿದ್ಧವಿರುವ ಬೃಹತ್ ಭವನವನ್ನು ಜಾಗತಿಕ ಆರ್ಥಿಕ, ರಾಜತಾಂತ್ರಿಕ ಉದ್ವಿಗ್ನಗಳ ನಡುವೆ ಧೃತಿಗೆಡದೆ ಮುನ್ನಡೆಸಬೇಕಿದೆ. ಇದು ಕೇವಲ ಎಪ್ಪತ್ತು ವರ್ಷಗಳ ತಾಂತ್ರಿಕ ಅಂತರವಲ್ಲ, ಇದು ಎರಡು ಸಂಪೂರ್ಣ ಭಿನ್ನ ಪ್ರಪಂಚಗಳ ನಡುವಿನ ಸ್ಥಿತ್ಯಂತರ.

1947ರ ಭಾರತ ಮತ್ತು 2014ರ ನಂತರದ ಭಾರತ... ಇವೆರಡೂ ಕೇವಲ ಎಪ್ಪತ್ತು ವರ್ಷಗಳ ಅಂತರದ ದೇಶಗಳಲ್ಲ, ಇವು ಎರಡು ಭಿನ್ನ ಪ್ರಪಂಚಗಳು. ನೆಹರೂ ಪಾಲಿಗೆ ಎದುರಾಳಿಗಳಿಲ್ಲದ ರಾಜಕೀಯ ಮುಕ್ತ ಬಯಲಿನಲ್ಲಿ ಶೂನ್ಯದಿಂದ ಸಂಸ್ಥೆಗಳನ್ನು ಕಟ್ಟುವ ಐತಿಹಾಸಿಕ ಭಾರವಿತ್ತಾದರೆ, ಮೋದಿಯವರ ಪಾಲಿಗೆ ಪ್ರತಿ ಇಂಚಿಗೂ ಹೋರಾಡಬೇಕಾದ ಮುಳ್ಳಿನ ಕಣದಲ್ಲಿ, ಜಾಗತಿಕ ಬಿಕ್ಕಟ್ಟು ಹಾಗೂ ಇಪ್ಪತ್ತನಾಲ್ಕು ಗಂಟೆಯ ಕಣ್ಗಾವಲಿನ ನಡುವೆ ದೇಶವನ್ನು ಮುನ್ನಡೆಸುವ ಅನಿವಾರ್ಯತೆಯಿದೆ. ಇದು ಯಾರು ಶ್ರೇಷ್ಠ ಎನ್ನುವ ಸರಳೀಕೃತ ಚರ್ಚೆಯಲ್ಲ, ಬದಲಿಗೆ ಭಾರತೀಯ ಪ್ರಜಾಪ್ರಭುತ್ವ ತಾನು ಬೆಳೆದು ಬಂದ ಹಾದಿಯಾಗಿದೆ.


2014 ಮೇ 26


2019 ಮೇ 30



2024 ಜೂನ್ 09

ಕಾಲಘಟ್ಟಗಳ ನಡುವಿನ ವ್ಯತ್ಯಾಸ





ಶೂನ್ಯದಿಂದ ಆರಂಭಿಸಿದ ಯುಗ



ನೆಹರು ಕಾಲವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಆಗಿನ ಭಾರತದ ಚಿತ್ರವನ್ನು ಮನಸ್ಸಿನಲ್ಲಿ ಎಳೆಯಬೇಕು. ಮುರಿದ ವಿಭಜನೆಯ ಗಾಯಗಳಿಂದ ರಕ್ತ ಸುರಿಯುತ್ತಿತ್ತು. ಲಕ್ಷಾಂತರ ನಿರಾಶ್ರಿತರು ಗಡಿಯ ಎರಡೂ ಕಡೆ ಸಾಗುತ್ತಿದ್ದರು. ಐದು ನೂರಕ್ಕೂ ಹೆಚ್ಚು ರಾಜಸಂಸ್ಥಾನಗಳನ್ನು ಒಂದು ಬಾವುಟದ ಕೆಳಗೆ ತರುವ ಸವಾಲಿತ್ತು. ಶೇ.12ರಷ್ಟು ಮಂದಿ ಮಾತ್ರ ಅಕ್ಷರಸ್ಥರಾಗಿದ್ದರು. ಕೈಗಾರಿಕೆ ಎಂದರೆ ಕೆಲವೇ ಗಿರಣಿಗಳು, ತಂತ್ರಜ್ಞಾನ ಎಂದರೆ ವಿದೇಶಿ ಆಮದು. ಇಂಥ ನೆಲದ ಮೇಲೆ ನಿಂತ ನೆಹರು ಮಾಡಬೇಕಿದ್ದದ್ದು ಸ್ಪಷ್ಟವಾಗಿತ್ತು. ಅದು ಒಂದು ರಾಷ್ಟ್ರವನ್ನು, ಒಂದು ರಾಜ್ಯವ್ಯವಸ್ಥೆಯನ್ನು, ಒಂದು ಆರ್ಥಿಕ ತಳಪಾಯವನ್ನು ಮೊದಲಿನಿಂದ ಕಟ್ಟುವುದು.

ಆ ಕಾಲದ ದೊಡ್ಡ ಅನುಕೂಲ ಎಂದರೆ ಹೊಸ ರಾಷ್ಟ್ರದ ಆ ಹುಮ್ಮಸ್ಸು. ಸ್ವಾತಂತ್ರ್ಯ ಹೋರಾಟದ ಕಿಚ್ಚು ಇನ್ನೂ ಆರಿರಲಿಲ್ಲ, ಜನರಿಗೆ ತ್ಯಾಗದ ಅರ್ಥ ಗೊತ್ತಿತ್ತು, ಕಾಯುವ ತಾಳ್ಮೆ ಇತ್ತು. ನೆಹರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದಾಗ ಜನ ನಂಬಿದರು. ಭಾಕ್ರಾ-ನಂಗಲ್, ಭಿಲಾಯ್, ಐಐಟಿ, ಐಸಿಎಆರ್, ಬಾಹ್ಯಾಕಾಶ ಮತ್ತು ಪರಮಾಣು ಸಂಶೋಧನೆಯ ಸಂಸ್ಥೆಗಳೆಲ್ಲ ಆ ಕಾಲದ ಕನಸುಗಳ ಇಟ್ಟಿಗೆಗಳು. ಆದರೆ, ಆ ಯುಗದ ಅತಿ ದೊಡ್ಡ ಸೌಲಭ್ಯ ಬೇರೆಯೇ ಇತ್ತು. ಅದು ಕಾಲದ ನಿಧಾನಗತಿ. ಒಂದು ತಪ್ಪು ತೀರ್ಮಾನ ಮಾರನೆಯ ದಿನ ಜಗತ್ತಿನ ಮುಂದೆ ಬರುತ್ತಿರಲಿಲ್ಲ, ವಿಮರ್ಶೆ ಪತ್ರಿಕೆಯ ಸಂಪಾದಕೀಯದಲ್ಲಿ, ಸಂಸತ್ತಿನ ಚರ್ಚೆಯಲ್ಲಿ ಮಾತ್ರ ಇರುತ್ತಿತ್ತು. ವಾರಗಳ ನಂತರ ನಿರ್ಧಾರ ತೆಗೆದುಕೊಳ್ಳಲು ಸಮಯವಿತ್ತು, ತಿದ್ದಿಕೊಳ್ಳಲು ಅವಕಾಶವಿತ್ತು.

ಇದರ ಅರ್ಥ ನೆಹರು ಕಾಲ ಸವಾಲುರಹಿತವಾಗಿತ್ತು ಎಂದಲ್ಲ, 1962ರ ಚೀನಾ ಯುದ್ಧದ ಸೋಲು ಆ ಯುಗದ ಆತ್ಮವಿಶ್ವಾಸವನ್ನೇ ಅಲ್ಲಾಡಿಸಿತ್ತು. ಆಹಾರದ ಕೊರತೆ, ವಿದೇಶಿ ನೆರವಿನ ಮೇಲಿನ ಅವಲಂಬನೆ, ಭಾಷಾವಾರು ರಾಜ್ಯ ರಚನೆಯ ಬಿರುಗಾಳಿ ಸೇರಿ ಹಲವು ಸಮಸ್ಯೆಗಳಿದ್ದವು. ಆದರೆ ಆ ಸವಾಲುಗಳ ಸ್ವರೂಪವೇ ಬೇರೆ. ಅವು ಒಂದೊಂದಾಗಿ ಬರುತ್ತಿದ್ದವು. ಒಂದನ್ನು ನಿಭಾಯಿಸಿ ಮುಂದಿನದಕ್ಕೆ ಸಿದ್ಧವಾಗುವ ವ್ಯವಧಾನವಿತ್ತು. ಇಡೀ ಜಗತ್ತು ಕ್ಷಣಕ್ಷಣಕ್ಕೆ ಮೇಲೆ ಕಣ್ಣಿಟ್ಟು ಕೂತಿರಲಿಲ್ಲ.

ಎಲ್ಲವೂ ಒಟ್ಟಿಗೆ ಎರಗುವ ಯುಗ

ಇದಕ್ಕೆ ತದ್ವಿರುದ್ಧ ಮೋದಿ ಯುಗ. ಇಲ್ಲಿ ಸವಾಲುಗಳು ಸಾಲಾಗಿ ಬರುವುದಿಲ್ಲ, ಎಲ್ಲವೂ ಒಟ್ಟಿಗೆ ಮುಗಿಬೀಳುತ್ತವೆ. ಒಂದು ಬಿಕ್ಕಟ್ಟಿಗೆ ಉತ್ತರ ಹುಡುಕುತ್ತಿರುವಾಗಲೇ ಮತ್ತೆರಡು ಬಾಗಿಲು ಬಡಿಯುತ್ತವೆ. ನೆಹರುಗೆ ಒಂದು ಯುದ್ಧ ಎದುರಾದರೆ, ಮೋದಿ ಕಾಲದಲ್ಲಿ ಗಡಿಯ ಎರಡೂ ಮೂರೂ ಕಡೆ ಏಕಕಾಲಕ್ಕೆ ಒತ್ತಡ. ಪಶ್ಚಿಮದಲ್ಲಿ ಪಾಕಿಸ್ತಾನದಿಂದ 2016ರ ಉರಿ, 2019ರ ಪುಲ್ವಾಮಾ-ಬಾಲಾಕೋಟ್ ಮತ್ತು 2025ರ ಆಪರೇಷನ್ ಸಿಂದೂರ ಸಂಘರ್ಷ. ಉತ್ತರದಲ್ಲಿ ಚೀನಾದಿಂದ 2017ರ ಡೋಕ್ಲಾಮ್ ಬಿಕ್ಕಟ್ಟು, 2020ರ ಗಲ್ವಾನ್ ರಕ್ತಪಾತ. ಗಡಿಯಲ್ಲಿ ಶಾಂತಿಯೆಂಬುದು ಇಂದು ಸದಾ ಪರೀಕ್ಷೆಗೆ ಒಡ್ಡಿರುವ ಪದ. ಜತೆಗೆ ಜಾಗತಿಕ ಮಟ್ಟದಲ್ಲಿ ರಷ್ಯಾ-ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದ ಯುದ್ಧಗಳಿಂದ ತೈಲ ಬೆಲೆ ಹೆಚ್ಚಳ, ಗೋಧಿ ರಫ್ತು, ರಸಗೊಬ್ಬರದ ಅಭಾವ. ಇದರ ನಡುವೆ ಬಂದದ್ದು ಶತಮಾನದಲ್ಲಿ ಒಮ್ಮೆ ಬರುವ ಮಹಾಮಾರಿ ಕೊರೋನಾ ವೈರಾಣು. ನೆಹರು ಯುಗಕ್ಕೆ ಇಂಥ ಒಂದು ಬಿಕ್ಕಟ್ಟಿನ ಊಹೆಯೂ ಇರಲಿಲ್ಲ, 130 ಕೋಟಿ ಜನರ ದೇಶವನ್ನು ಕೆಲವೇ ಗಂಟೆಗಳ ಸೂಚನೆಯಲ್ಲಿ ಸ್ತಬ್ಧಗೊಳಿಸಬೇಕಾದ ಪರಿಸ್ಥಿತಿ. ವಲಸೆ ಕಾರ್ಮಿಕರು ನೂರಾರು ಮೈಲಿ ನಡೆದ ಹೃದಯವಿದ್ರಾವಕ ದೃಶ್ಯಗಳು, ಆಮ್ಲಜನಕದ ಕೊರತೆ, ಸ್ಮಶಾನಗಳಲ್ಲಿ ಸಾಲು ಶವಗಳು. ಎರಡನೇ ಅಲೆಯ ಆ ಭೀಕರ ದಿನಗಳು ಆಡಳಿತದ ಮೇಲೆ ಶಾಶ್ವತ ಗಾಯವನ್ನು ಬಿಟ್ಟವು. ಆದರೆ ಇದೇ ಬಿಕ್ಕಟ್ಟಿನ ನಡುವೆ ದೇಶ ತನ್ನದೇ ಲಸಿಕೆಯನ್ನು ಅಭಿವೃದ್ಧಿಪಡಿಸಿ, 200 ಕೋಟಿಗೂ ಹೆಚ್ಚು ಡೋಸ್ ಹಾಕಿ, ಡಿಜಿಟಲ್ ತಂತ್ರಜ್ಞಾನದ ಮೂಲಕ ನಿರ್ವಹಿಸಿದ್ದು, ಆ ಕಾಲದ ಸಂಕೀರ್ಣತೆಯ ಇನ್ನೊಂದು ಮುಖ. ಒಂದೇ ಸವಾಲಿನಲ್ಲಿ ಆಳ ದುರಂತ ಮತ್ತು ದೊಡ್ಡ ಸಾಧನೆಯೆಂಬ ಎರಡೂ ಜೊತೆಯಾಗಿ ನಡೆಯುವುದು ಈ ಯುಗದ ಲಕ್ಷಣ.

ಆರ್ಥಿಕತೆಯ ಮೇಲೆ ಬೀಳುವ ಪ್ರಹಾರಗಳೂ ಇಂದು ಬೇರೆ ಸ್ವರೂಪದ್ದು. ನೆಹರು ಕಾಲದಲ್ಲಿ ಆರ್ಥಿಕ ಬಿಕ್ಕಟ್ಟು ಎಂದರೆ ಮುಖ್ಯವಾಗಿ ಆಂತರಿಕವಾದವುಗಳಾದ ಆಹಾರ ಉತ್ಪಾದನೆ, ಕೈಗಾರಿಕೆಯ ಕೊರತೆ. ಇಂದು ಭಾರತ ಜಾಗತಿಕ ಆರ್ಥಿಕತೆಯ ಅವಿಭಾಜ್ಯ ಭಾಗ. ಅಮೆರಿಕದ ಬಡ್ಡಿದರ ಏರಿದರೆ ಮುಂಬೈ ಷೇರುಪೇಟೆ ತಲ್ಲಣವಾಗುತ್ತದೆ. ಸುಂಕ ಯುದ್ಧ, ಪೂರೈಕೆ ಸರಪಳಿಯ ಅಡಚಣೆ, ಡಾಲರ್ ಮುಂದೆ ರೂಪಾಯಿಯ ಮೌಲ್ಯ ಕುಸಿತ ಎಂಬಂತಹ ಜಾಗತಿಕ ಸಮಸ್ಯೆಗಳು ದಿಲ್ಲಿಯ ನಿಯಂತ್ರಣದಲ್ಲಿ ಇಲ್ಲದ ಶಕ್ತಿಗಳಿಂದ ಬರುತ್ತವೆ. ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿಯಂಥ ಆಂತರಿಕ ಆಘಾತಗಳ ಜೊತೆಗೆ ಈ ಬಾಹ್ಯ ಸಮಸ್ಯೆಗಳನ್ನೂ ಏಕಕಾಲಕ್ಕೆ ನಿಭಾಯಿಸಬೇಕಾದ ಸ್ಥಿತಿ. ಇದು ಒಂದು ಮುಚ್ಚಿದ, ಸ್ವಾವಲಂಬಿ ಆರ್ಥಿಕತೆಯ ಕಾಲವಲ್ಲ, ಎಲ್ಲ ಬಾಗಿಲೂ ತೆರೆದಿರುವ, ಎಲ್ಲ ಗಾಳಿಯೂ ಒಳಬರುವ ಕಾಲ.

ಇಪ್ಪತ್ತನಾಲ್ಕು ಗಂಟೆಯ ಕಣ್ಗಾವಲು

ಆದರೆ, ಮೋದಿ ಯುಗದ ಅತಿ ದೊಡ್ಡ ಮತ್ತು ಅತಿ ಹೊಸ ಸವಾಲು ಯುದ್ಧವೂ ಅಲ್ಲ, ಮಹಾಮಾರಿಯೂ ಅಲ್ಲ, ಅದು ನಿರಂತರ ಕಣ್ಗಾವಲು. ನೆಹರು ತೆಗೆದುಕೊಂಡ ಒಂದು ತೀರ್ಮಾನ ಜನರ ಕಣ್ಣಿಗೆ ಬೀಳಲು ದಿನಗಳು ಬೇಕಾಗುತ್ತಿದ್ದವು. ಇಂದು ಮೋದಿ ಆಡುವ ಒಂದು ವಾಕ್ಯ ಸೆಕೆಂಡುಗಳಲ್ಲಿ ಕೋಟ್ಯಂತರ ಮೊಬೈಲ್ ಪರದೆಗಳ ಮೇಲೆ ಮೂಡುತ್ತದೆ, ಅದೇ ಕ್ಷಣ ಸಾವಿರ ಕೋನಗಳಿಂದ ವಿಶ್ಲೇಷಣೆಗೆ, ವ್ಯಂಗ್ಯಚಿತ್ರಕ್ಕೆ, ಸಮರ್ಥನೆಗೆ, ಆಕ್ರೋಶಕ್ಕೆ ಒಳಗಾಗುತ್ತದೆ. ಸಾಮಾಜಿಕ ಜಾಲತಾಣಗಳು, 24X7 ಸುದ್ದಿವಾಹಿನಿಗಳು, ತ್ವರಿತ ಸಮೀಕ್ಷೆಗಳ ಈ ಯುಗದಲ್ಲಿ ಪ್ರತಿ ತೀರ್ಮಾನವೂ ತಕ್ಷಣದ ತೀರ್ಪಿಗೆ ಒಳಪಡುತ್ತದೆ. ತಿದ್ದಿಕೊಳ್ಳುವ ವ್ಯವಧಾನವಿಲ್ಲ, ಮೌನವಾಗಿರುವ ಐಷಾರಾಮವಿಲ್ಲ.

ಈ ಕಣ್ಗಾವಲು ಬರೀ ರಾಜಕೀಯ ಒತ್ತಡವಲ್ಲ, ಅದು ಆಡಳಿತದ ಶೈಲಿಯನ್ನೇ ಬದಲಿಸುತ್ತದೆ. ನೆಹರು ತಮ್ಮ ಧೋರಣೆಯನ್ನು ದೀರ್ಘ ಪತ್ರಗಳಲ್ಲಿ, ಸಂಸತ್ತಿನ ಭಾಷಣಗಳಲ್ಲಿ ನಿಧಾನವಾಗಿ ರೂಪಿಸುಹುದಿತ್ತು. ಮೋದಿ ಯುಗದ ನಾಯಕ ಒಂದೇ ದಿನದಲ್ಲಿ ಜನಸಾಮಾನ್ಯನಿಗೆ, ಷೇರು ಮಾರುಕಟ್ಟೆಗೆ, ವಿದೇಶಿ ಬಂಡವಾಳಗಾರನಿಗೆ, ಗಡಿಯ ಸೈನಿಕನಿಗೆ ಮತ್ತು ಜಾಗತಿಕ ರಾಜತಂತ್ರ ಸೇರಿ ಎಲ್ಲರಿಗೂ ಏಕಕಾಲಕ್ಕೆ ಸಂದೇಶ ನೀಡಬೇಕು. ಅಭಿಪ್ರಾಯವೆಂಬುದು ಇಂದು ಗಂಟೆಗೊಮ್ಮೆ ಬದಲಾಗುವ ಹವಾಮಾನ. ಇಂಥ ಪರಿಸ್ಥಿತಿಯಲ್ಲಿ ಆಡಳಿತ ನಡೆಸುವುದು, ಆ ಆಡಳಿತದ ನಿರೂಪಣೆಯನ್ನು ನಿಯಂತ್ರಿಸುವುದಾಗಿದೆ. ಇದು ನೆಹರು ಕಾಲದ ಯಾವ ಪ್ರಧಾನಿಯೂ ಊಹಿಸಲಾಗದ ಸವಾಲು.

ಜತೆಗೆ ಒಕ್ಕೂಟ ವ್ಯವಸ್ಥೆಯ ಸ್ವರೂಪವೂ ಬದಲಾಗಿದೆ. ನೆಹರು ಕಾಲದಲ್ಲಿ ಬಹುತೇಕ ರಾಜ್ಯಗಳಲ್ಲಿ ಒಂದೇ ಪಕ್ಷದ ಆಡಳಿತವಿತ್ತು, ಸಮನ್ವಯ ಸುಲಭವಿತ್ತು. ಇಂದು ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರ್ಕಾರಗಳು, ಪ್ರಾದೇಶಿಕ ಅಸ್ಮಿತೆಯ ಒತ್ತಾಯಗಳು, ತೆರಿಗೆ ಹಂಚಿಕೆಯ ತಿಕ್ಕಾಟಗಳು ಸೇರಿದಂತೆ ಒಕ್ಕೂಟ ತತ್ತ್ವ ಸದಾ ಪರೀಕ್ಷೆಗೆ ಒಳಪಡುತ್ತಿದೆ. ಪ್ರತಿ ರಾಷ್ಟ್ರೀಯ ತೀರ್ಮಾನವೂ ಮೂವತ್ತಕ್ಕೂ ಹೆಚ್ಚು ಭಿನ್ನ ರಾಜಕೀಯ ಧ್ವನಿಗಳ ಜಾಲವನ್ನು ದಾಟಿ ಬರಬೇಕು. ಇದು ಪ್ರಜಾಪ್ರಭುತ್ವದ ಆಳ ಬೆಳೆದದ್ದರ ಸಂಕೇತ, ಆದರೆ ಆಡಳಿತಗಾರನಿಗೆ ಇದು ನಿತ್ಯದ ಪರೀಕ್ಷೆ.



ಕಾಲವನ್ನು ಮರೆತ ಹೋಲಿಕೆ ಅಸ್ಪಷ್ಟ

ಈ ಎಲ್ಲ ಕಾರಣಗಳಿಂದ, ನೆಹರು ಮತ್ತು ಮೋದಿಯವರ ಸಾಧನೆ-ವೈಫಲ್ಯಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಬೌದ್ಧಿಕವಾಗಿ ಅಪ್ರಾಮಾಣಿಕ. ಇಬ್ಬರ ಜವಾಬ್ದಾರಿಗಳೇ ಬೇರೆ. ನೆಹರುಗೆ ಕಟ್ಟುವ ಭಾರ, ಮೋದಿಗೆ ಉಳಿಸಿಕೊಂಡು ಬೆಳೆಸುವ ಭಾರ. ಶೂನ್ಯದಿಂದ ಒಂದು ಸಂಸ್ಥೆ ಕಟ್ಟುವುದಕ್ಕೂ, ಈಗಾಗಲೇ ಇರುವ ಬೃಹತ್ ಸಂಸ್ಥೆಯನ್ನು ಬಿರುಗಾಳಿಯ ನಡುವೆ ಮುನ್ನಡೆಸುವುದಕ್ಕೂ ಬೇಕಾದ ಕೌಶಲ ಬೇರೆ. ನೆಹರು ಕಾಲದ ಪ್ರಧಾನಿಗೆ ತಾಳ್ಮೆ, ದೂರದೃಷ್ಟಿ ಮತ್ತು ಸ್ಥಿರತೆ ಮುಖ್ಯವಾಗಿತ್ತು. ಮೋದಿ ಕಾಲದ ಪ್ರಧಾನಿಗೆ ವೇಗ, ಏಕಕಾಲಿಕ ನಿರ್ವಹಣೆ ಮತ್ತು ಸಾರ್ವಜನಿಕ ನಿರೂಪಣೆಯ ಮೇಲಿನ ಹಿಡಿತ ಅನಿವಾರ್ಯ.

ನ್ಯಾಯಯುತವಾಗಿ ಹೇಳಬೇಕೆಂದರೆ, ಆಯಾ ಕಾಲಕ್ಕೆ ಆಯಾ ಸವಾಲುಗಳ ತೂಕವಿದೆ. ನೆಹರು ತಪ್ಪು ಮಾಡಿದಾಗ ಅದನ್ನು ಸರಿಪಡಿಸಲು ಕಾಲವಿತ್ತು, ಜನರ ತಾಳ್ಮೆಯಿತ್ತು, ಜಾಗತಿಕ ಒತ್ತಡ ಕಡಿಮೆಯಿತ್ತು. ಮೋದಿ ಒಂದು ತಪ್ಪು ಮಾಡಿದರೆ ಮರುಕ್ಷಣವೇ ಜಗತ್ತಿನ ಮುಂದೆ ತೆರೆದುಕೊಳ್ಳುತ್ತದೆ, ಮಾರುಕಟ್ಟೆ ಪ್ರತಿಕ್ರಿಯಿಸುತ್ತದೆ, ಗಡಿಯ ಆಚೆ ಶತ್ರು ಗಮನಿಸುತ್ತಾನೆ. ಒಂದು ಕಾಲ ಕಡಿಮೆ ಸಾಧನಗಳ, ಆದರೆ ಹೆಚ್ಚು ವ್ಯವಧಾನದ ಯುಗ, ಇನ್ನೊಂದು ಹೆಚ್ಚು ಸಾಧನಗಳ, ಆದರೆ, ಶೂನ್ಯ ವ್ಯವಧಾನದ ಯುಗ. ಒಂದು ಕಡೆ ಇಡೀ ರಾಷ್ಟ್ರವನ್ನು ಕಟ್ಟುವ ಭಾರ, ಇನ್ನೊಂದು ಕಡೆ ಯುದ್ಧ, ಮಹಾಮಾರಿ, ಆರ್ಥಿಕ ಪ್ರಹಾರ, ನಿರಂತರ ಕಣ್ಗಾವಲು. ಎಲ್ಲವೂ ಒಟ್ಟಿಗೆ ಬಡಿಯುವ ಭಾರ.

ಆದ್ದರಿಂದ ಯಾರು ಶ್ರೇಷ್ಠ ಎಂಬ ಪ್ರಶ್ನೆ ತಪ್ಪಾದದ್ದು. ಆಯಾ ಕಾಲ ಆ ನಾಯಕನ ಮುಂದೆ ಯಾವ ಪರೀಕ್ಷೆಯನ್ನು ಇಟ್ಟಿತು, ಮತ್ತು ಆ ಪರೀಕ್ಷೆಯನ್ನು ಆ ನಾಯಕ ಹೇಗೆ ಎದುರಿಸಿದ ಎಂಬುದು ಮುಖ್ಯ. ನೆಹರು ತಮ್ಮ ಕಾಲದ ಪರೀಕ್ಷೆಯನ್ನು ತಮ್ಮದೇ ಮಿತಿ-ಶಕ್ತಿಗಳೊಂದಿಗೆ ಎದುರಿಸಿದರು. ಮೋದಿ ತಮ್ಮ ಕಾಲದಲ್ಲಿ ಹೆಚ್ಚು ಕ್ರೂರವಾದ, ಹೆಚ್ಚು ವೇಗದ, ಹೆಚ್ಚು ನಿಷ್ಠುರವಾದ ಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಇತಿಹಾಸ ಇಬ್ಬರನ್ನೂ ತೀರ್ಮಾನಿಸುತ್ತದೆ. ಆದರೆ ಆ ತೀರ್ಮಾನ ನ್ಯಾಯಯುತವಾಗಬೇಕಾದರೆ, ಮೊದಲು ಎರಡು ಕಾಲಗಳ ನಡುವಿನ ಆ ಅಜಗಜಾಂತರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕಾಲವನ್ನು ಮರೆತ ಹೋಲಿಕೆ, ಎಷ್ಟೇ ಚಾಣಾಕ್ಷವಾದರೂ ಅದು ಸುಳ್ಳಿನ ಸೋದರಿ.

ಎರಡು ಯುಗಗಳ ಹಾದಿ ಮತ್ತು ಸ್ವರೂಪ

ಆಯಾಮ	ನೆಹರು ಯುಗ (1947 - 1964)	ಮೋದಿ ಯುಗ(2014ರಿಂದ ಪ್ರಸ್ತುತ)
ಆರಂಭದ ನೆಲ	**ತೆರೆದ ಬಯಲು(ಗ್ರೀನ್‌ಫೀಲ್ಡ್):** ಬ್ರಿಟಿಷರು ಬಿಟ್ಟುಹೋದ ಖಾಲಿ ಬಿಳಿ ಹಾಳೆಯ ಮೇಲೆ ಶೂನ್ಯದಿಂದ ರಾಷ್ಟ್ರ ನಿರ್ಮಾಣ ಮಾಡುವ ಭಾರ.	**ಕಿಕ್ಕಿರಿದ ಕಣ(ಬ್ರೌನ್ ಫೀಲ್ಡ್):** ಆರು ದಶಕಗಳ ಕಾಲ ಆಳವಾಗಿ ಬೇರೂರಿದ್ದ ರಾಜಕೀಯ ಮತ್ತು ಸಾಂಸ್ಥಿಕ ವ್ಯವಸ್ಥೆಯನ್ನು ಮರುರೂಪಿಸುವ ಸವಾಲು.
ರಾಜಕೀಯ ಪ್ರತಿಸ್ಪರ್ಧೆ	**ಏಕಪಕ್ಷ ಪ್ರಾಬಲ್ಯ:** ಕಾಂಗ್ರೆಸ್‌ಗೆ ಸರಿಸಮನಾದ ಎದುರಾಳಿಗಳಿರಲಿಲ್ಲ, ಸ್ವಾತಂತ್ರ್ಯದ ಪ್ರಭಾವಳಿಯೇ ಶ್ರೀರಕ್ಷೆಯಾಗಿತ್ತು.	**ತೀವ್ರ ಜಿದ್ದಾಜಿದ್ದಿ:** ಪ್ರಬಲ ಪ್ರಾದೇಶಿಕ ಶಕ್ತಿಗಳು, ಸಂಘಟಿತ ಪ್ರತಿಪಕ್ಷಗಳು ಮತ್ತು ಪ್ರತಿ ಹಂತದಲ್ಲೂ ಕಠಿಣ ರಾಜಕೀಯ ಹೋರಾಟ.
ಅಧಿಕಾರದ ಸ್ವರೂಪ	**ವಾರಸುದಾರಿಕೆ:** ರಾಷ್ಟ್ರೀಯ ಚಳವಳಿ ಮತ್ತು ಮಹಾತ್ಮ ಗಾಂಧಿಯವರ ಪರಂಪರೆಯಿಂದ ಲಭಿಸಿದ ಸ್ವಾಭಾವಿಕ ನಾಯಕತ್ವ.	**ಸ್ವಯಂ ಗಳಿಸಿದ್ದು:** ತಳಮಟ್ಟದ ಸಂಘಟನೆಯಿಂದ ಮೆಟ್ಟಿಲೇರಿ, ತೀವ್ರ ಟೀಕೆ-ಪರೀಕ್ಷೆಗಳನ್ನು ದಾಟಿ ಗೆದ್ದುಕೊಂಡ ಅಧಿಕಾರ.
ಮಾಧ್ಯಮ ಮತ್ತು ಬೌದ್ಧಿಕ ವಲಯ	**ಅನುಕೂಲಕರ ವಾತಾವರಣ:** ರೂಪುಗೊಳ್ಳುತ್ತಿದ್ದ ಮಾಧ್ಯಮಗಳು, ಹೆಚ್ಚಾಗಿ ನೆಹರು ಅವರ ಉದಾರವಾದಿ ಧೋರಣೆಗೆ ಪೂರಕವಾಗಿದ್ದ ಬೌದ್ಧಿಕ ವರ್ಗ.	**ತೀಕ್ಷ್ಣ ಕಣ್ಗಾವಲು:** 24X7 ಸುದ್ದಿವಾಹಿನಿಗಳು, ವಿಭಜಿತ ಬೌದ್ಧಿಕ ವಲಯ ಮತ್ತು ತಕ್ಷಣದ ತೀರ್ಪು ನೀಡುವ ಸಾರ್ವಜನಿಕ ವೇದಿಕೆಗಳು.
ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರ	**ಸಾಂಪ್ರದಾಯಿಕ ಬಿತ್ತನೆ:** ಅಣೆಕಟ್ಟು, ಭಾರೀ ಕೈಗಾರಿಕೆಗಳು, ಕೃಷಿ ಸಂಶೋಧನೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಸ್ಥಾಪನೆ.	**ಡಿಜಿಟಲ್ ಕ್ರಾಂತಿ:** ಯುಪಿಐ, ನವೋದ್ಯಮ ಆರ್ಥಿಕತೆ, ಹಸಿರು ಇಂಧನ, ಸೆಮಿಕಂಡಕ್ಟರ್ ಮತ್ತು ಜಾಗತಿಕ ಸಂಪರ್ಕ ಕೊಂಡಿಗಳಲ್ಲಿ ಭಾರತದ ಪಾತ್ರ.
ಪ್ರಮುಖ ಸವಾಲು	ಸಂಸ್ಥೆಗಳನ್ನು ಶೂನ್ಯದಿಂದ ಕಟ್ಟುವುದು ಮತ್ತು ವೈವಿಧ್ಯಮಯ ದೇಶವನ್ನು ಒಗ್ಗೂಡಿಸುವುದು.	ಜಾಗತಿಕ ಬಿಕ್ಕಟ್ಟುಗಳ ನಡುವೆ ದೇಶದ ಆರ್ಥಿಕತೆಯನ್ನು ಎತ್ತಿಹಿಡಿಯುವುದು ಮತ್ತು ಸ್ಥಾಪಿತ ವ್ಯವಸ್ಥೆಯ ಜಡತ್ವವನ್ನು ನಿವಾರಿಸುವುದು.

ಸಂಪಾದಕೀಯ

ಸತ್ವವಿಲ್ಲದ ವಿಪಕ್ಷ ಒಕ್ಕೂಟ

ವಿಪರ್ಯಾಸ ನೋಡಿ, ಬಿಜೆಪಿ ವಿರುದ್ಧವಾಗಿ ಒಗ್ಗಟ್ಟಿನ ಪ್ರದರ್ಶನ ನೀಡಬೇಕು ಎಂದು ಪ್ರತಿಪಾದಿಸುವ ಇಂಡಿಯಾ ಒಕ್ಕೂಟವು ತಾನೇ ಒಗ್ಗಟ್ಟು ಕಳೆದುಕೊಂಡು ಸತ್ವಹೀನವಾಗುತ್ತಿದೆ. ಅದೂ ಸಾಲದೆಂಬಂತೆ ಇಂಡಿ ಕೂಟದ ಪ್ರಬಲ ಪಕ್ಷಗಳೂ ತಮ್ಮೊಳಗೇ ಛಿದ್ರಗೊಳ್ಳುತ್ತಾ ಸಾಗುತ್ತಿವೆ. ಸೋಮವಾರ ಇಂಡಿಕೂಟದ 20ಕ್ಕೂ ಹೆಚ್ಚು ವಿರೋಧ ಪಕ್ಷಗಳು ದಿಲ್ಲಿಯಲ್ಲಿ ಸಭೆ ಸೇರಿ ಚರ್ಚಿಸಿದವಾದರೂ ಅವರೊಳಗಿನ ವೈರುಧ್ಯ, ಕೆಲವು ಪಕ್ಷಗಳು ಎದುರಿಸುತ್ತಿರುವ ಆಂತರಿಕ ಸಂಘರ್ಷಗಳು ಈ ಸಭೆಯನ್ನು ಮಂಕುಗೊಳಿಸಿದವು. ಕಾಂಗ್ರೆಸಿನ ವಿಶ್ವಾಸದ್ರೋಹವನ್ನು ವಿರೋಧಿಸಿ ಡಿಎಂಕೆ



ಸಭೆಗೇ ಹಾಜರಾಗಲಿಲ್ಲ, ಆಪ್ ಕೂಡಾ ಸಭೆಯಿಂದ ದೂರವುಳಿಯಿತು. ಕೇರಳ ಚುನಾವಣೆಯ ವೇಳೆ ಕಾಂಗ್ರೆಸ್ ಹೊರಿಸಿದ ಆರೋಪಗಳಿಂದ ಕೆಂಡವಾಗಿರುವ ಎಡಪಕ್ಷಗಳು ಕೂಡಾ ಇಂಡಿಯಾ ಒಕ್ಕೂಟವನ್ನು ಟೀಕಿಸುವ ಮೂಲಕ ಬಿರುಕಿನ ಸಂಕೇತ ನೀಡಿವೆ. ಜೆಎಂಎಂ ಕೂಡಾ ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿ ಕಾಂಗ್ರೆಸಿನ ವರ್ತನೆಯಿಂದ ಆಕ್ರೋಶಗೊಂಡಿದೆ.

ಇದೇವೇಳೆ, ಪಶ್ಚಿಮ ಬಂಗಾಳದಲ್ಲಿ ಸೋತು ಸುಣ್ಣವಾಗಿರುವ ಮಮತಾ ಬ್ಯಾನರ್ಜಿಯವರು ಇಂಡಿಯಾ ಒಕ್ಕೂಟವನ್ನು ಬಲಪಡಿಸುವ ನಿಟ್ಟಿನಲ್ಲಿ ತಮ್ಮ ಶ್ರಮ ಹಾಕುತ್ತಿದ್ದಾರಾದರೂ ಅವರ ಕಾಲಕೆಳಗೆ ಅವರದೇ ಪಕ್ಷ ಛಿದ್ರವಾಗುತ್ತಿರುವುದು ಇಂಡಿ ಒಕ್ಕೂಟದಲ್ಲೂ ಅವರ ಪರಿಸ್ಥಿತಿಯನ್ನು ದುರ್ಬಲಗೊಳಿಸಿದೆ. ಅತ್ತ ಅವರು ವಿಪಕ್ಷ ಒಕ್ಕೂಟದ ಸಭೆಯಲ್ಲಿ ಭಾಗವಹಿಸಿದ್ದರೆ ಇತ್ತ ಅವರ ಪಕ್ಷದ ಮುಖ್ಯ ಸಚೇತಕ ಹಾಗೂ ರಾಜ್ಯಸಭಾ ಸದಸ್ಯ ಸುಕೇಂದು ಶೇಖರ ರಾಯ್ ಪಕ್ಷಕ್ಕೆ ರಾಜೀನಾಮೆ ನೀಡಿದ ಬೆಳವಣಿಗೆ ನಡೆಯಿತು.

ನಂತರದ ಬೆಳವಣಿಗೆಯಲ್ಲಿ 10ಕ್ಕೂ ಅಧಿಕ ಟಿಎಂಸಿ ಸಂಸತ್ ಸದಸ್ಯರು ದಿಲ್ಲಿಗೆ ಬಂದಿದ್ದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರನ್ನು ಭೇಟಿಯಾಗುವ ಮೂಲಕ ಟಿಎಂಸಿಯ ಸಂಸತ್‌ಸದಸ್ಯರು ಕೂಡಾ ಬಂಡಾಯವೇಳುವ ಸಂಕೇತ ತೋರಿದರು. ಅದರ ಬೆನ್ನಿಗೇ ಸುಮಾರು 20 ಸಂಸತ್‌ಸದಸ್ಯರು ಎನ್‌ಡಿಎ ಕೂಟವನ್ನು ಸೇರುವ ಇಂಗಿತ ವ್ಯಕ್ತಪಡಿಸುತ್ತಿದ್ದಾರೆಂದೂ ವರದಿಯಾಗಿದೆ. ಈಗಾಗಲೆ ಪಶ್ಚಿಮ ಬಂಗಾಳದಲ್ಲಿ ಶಾಸಕರ ಬಂಡಾಯದಿಂದ ಸೊರಗಿರುವ ಟಿಎಂಸಿಗೆ ಇದು ಇನ್ನಷ್ಟು ದೊಡ್ಡ ಹೊಡೆತ ನೀಡಬಹುದು.

ಈ ಮಧ್ಯೆ ಇಂಡಿಯಾ ಒಕ್ಕೂಟದ ನಾಯಕತ್ವ ವಹಿಸುವ ಕುರಿತಂತೆ ಕೂಡಾ ಗೊಂದಲ ಮನೆ ಮಾಡಿದೆ. ತಮ್ಮ ಪಕ್ಷಕ್ಕೇ ಗೆಲುವು ತಂದುಕೊಡದ ರಾಹುಲ್ ಗಾಂಧಿಯ ನಾಯಕತ್ವವನ್ನು ಬಹುತೇಕರು ಒಪ್ಪುತ್ತಿಲ್ಲ. ಒಂದು ಕಾಲದಲ್ಲಿ ಮಮತಾ ನಾಯಕತ್ವವನ್ನು ಬೆಂಬಲಿಸಿದ್ದವರೆಲ್ಲ ಈಗ ಟಿಎಂಸಿ ಸ್ಥಿತಿ ಕಂಡು ಹಿಂಸರಿದಿದ್ದಾರೆ. ಒಮ್ಮೆ ಕೇಜ್ರಿವಾಲ್‌ರನ್ನು ಮುಂದೆ ಮಾಡಲಾಗಿತ್ತಾದರೂ ಅವರೂ ಈಗ ಮೂಲೆಗುಂಪಾಗಿದ್ದಾರೆ. ಒಟ್ಟಿನಲ್ಲಿ ಇಂಡಿಯಾ ಒಕ್ಕೂಟವೆಂಬುದು ಸತ್ವವಿಲ್ಲದ ಪಕ್ಷಗಳ ಒಕ್ಕೂಟವೇ ಹೊರತು ಎನ್‌ಡಿಎಗೆ ಪ್ರಬಲ ಪರ್ಯಾಯವಾಗುವ ಪ್ರಶ್ನೆ ದೂರವೇ ಉಳಿದಿದೆ.

ಅದೃಷ್ಟವಿದ್ದಂತೆಯೇ ಫಲ

ಸಮುದ್ರಮಥನಾಲ್ಲೇಭೆ ಹರಿರ್ಲಕ್ಷ್ಮೀಂ ಹರೋ ವಿಷಮ್ ।
ಭಾಗ್ಯಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಮ್ ॥

ದೇವಾಸುರರು ಸಮುದ್ರವನ್ನು ಕಡೆದಾಗ ವಿಷ್ಣು ಲಕ್ಷ್ಮಿಯನ್ನೂ, ಶಿವ ವಿಷವನ್ನೂ ಪಡೆದರು. ಆದುದರಿಂದ ಅದೃಷ್ಟವಿದ್ದಂತೆಯೇ ಫಲಪ್ರಾಪ್ತಿ. ವಿದ್ಯೆ ಮತ್ತು ಪುರುಷ ಪ್ರಯತ್ನಗಳು ಪ್ರಯೋಜನಕ್ಕೆ ಬರಲಾರವು - ಎಂಬುದು ಶ್ಲೋಕಾರ್ಥ.

ಪ್ರಕೃತದಲ್ಲಿ ಈ ಸುಭಾಷಿತ ಪುರಾಣದ ಘಟನೆಯೊಂದನ್ನು ದೃಷ್ಟಾಂತವನ್ನಾಗಿಸಿ ಶಾಶ್ವತವಾದ ಮೌಲ್ಯವೊಂದನ್ನು ನಿರೂಪಿಸುತ್ತದೆ.

ದೇವತೆಗಳು ಹಾಗೂ ಅಸುರರು ಒಟ್ಟಾಗಿ ಸಮುದ್ರ ಮಥನ ಮಾಡಿದ ಘಟನೆಯನ್ನು ಕೇಳಿದ್ದೇವೆ. "ಸಮುದ್ರಮಥನ" ಎಂಬ ಯಕ್ಷಗಾನವನ್ನಾದರೂ ನೋಡಿರ ಬಹುದು. ದೂರ್ವಾಸರ ಶಾಪದ ಪರಿಣಾಮವಾಗಿ ಇಂದ್ರನು ದೇವಲೋಕದ ತನ್ನೆಲ್ಲ ಸಂಪತ್ತುಗಳನ್ನೂ ಕಳೆದುಕೊಳ್ಳುತ್ತಾನೆ. ಆ ಸಂಪತ್ತುಗಳನ್ನು ಪುನರಪಿ ಪಡೆಯಲು ಮಹಾವಿಷ್ಣುವಿನ ಸಲಹೆಯಂತೆ ಸಮುದ್ರ ವನ್ನು ಕಡೆಯಲು ಮುಂದಾಗುತ್ತಾರೆ. ಮಂದರ ಪರ್ವತವನ್ನು ಕಡಗೋಲಾಗಿಸಿ, ವಾಸುಕಿಯನ್ನು ಹಗ್ಗವನ್ನಾಗಿಸಿ ದೇವ-



ದಾನವರು ಸಮುದ್ರ ಮಥನ ನಡೆಸುತ್ತಾರೆ. ಆಗ ನೀರಿನಲ್ಲಿ ಕರಗಿಹೋದ ಅಥವಾ ಮುಳುಗಿಹೋದ ಒಂದೊಂದೇ ವಸ್ತುಗಳು ಮೇಲಕ್ಕೆ ಬರಲಾರಂಭಿಸಿದವು. ಮಥನ ಕ್ರಿಯೆ ನಡೆದಾಗ ಸಮುದ್ರದ ಆಳದಿಂದ ಹಾಲಾಹಲವು ಬರಲು ಅದನ್ನು ಶಿವನು ಸ್ವೀಕರಿಸಿದ ವಿಷಕಂಠನಾದ.

ಮಥನಕ್ರಿಯೆ ಮುಂದುವರಿಯಲು ಕಡಲಿನ ಒಡಲಿನಿಂದ ಸಂಪತ್ತಿನ ಒಡತಿ ಲಕ್ಷ್ಮಿ ಮೇಲೆ ಬಂದಳು. ಅವಳನ್ನು ವಿಷ್ಣುವು ಪಡೆದನು. ಲಕ್ಷ್ಮೀಪತಿಯಾದನು. ಕಥೆಯು ಇನ್ನೂ ಮುಂದುವರಿಯುತ್ತದೆ. ಇರಲಿ. ಅದೃಷ್ಟದಂತೆಯೇ ಫಲದ ಪ್ರಾಪ್ತಿಯಾಗುತ್ತದೆ. ಶಿವನ ಅದೃಷ್ಟದಲ್ಲಿ ವಿಷವಿತ್ತು. ವಿಷ್ಣುವಿನ ಅದೃಷ್ಟದಲ್ಲಿ ಲಕ್ಷ್ಮಿಯಿತ್ತು. ಅದೃಷ್ಟವನ್ನು ಬದಲಾಯಿಸಲು ಸಾಧ್ಯವಾಗು ವುದಿಲ್ಲ. ಅದನ್ನು ಅನುಭವಿಸಲೇಬೇಕು. ಕೆಡುಕಾದಾಗ ಅದೃಷ್ಟವನ್ನು ದೂಷಿಸದೇ ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಯಾರ ಅದೃಷ್ಟ ಹೇಗಿದೆಯೆಂಬುದು ಹೇಳಲು ಸಾಧ್ಯವಿಲ್ಲ. ಇದರ ಮುಂದೆ ಪ್ರಯತ್ನ ವಿಫಲವೂ ಆಗುತ್ತದೆ. ಚೆನ್ನಾಗಿ ಓದಿದವನೊಬ್ಬ ಪರೀಕ್ಷೆಯ ಸಮಯದಲ್ಲಿ ಅನಾರೋಗ್ಯದಿಂದ ಪರೀಕ್ಷೆಗೆ ಹಾಜರಾಗುವುದಕ್ಕೂ ಆಗದೇ ಅನುತ್ತೀರ್ಣನಾಗಬಲ್ಲ. ಏನೂ ಓದದವನು ಒಳ್ಳೆಯ ಅಂಕದೊಂದಿಗೆ ಉತ್ತೀರ್ಣನಾಗಬಲ್ಲ.

ಅದೃಷ್ಟದ ಮುಂದೆ ಯಾವುದೂ ಇಲ್ಲ, ವಿದ್ಯೆ, ಪುರುಷ ಪ್ರಯತ್ನ ಇವುಗಳೆಲ್ಲವೂ ಗೌಣವೆನಿಸುತ್ತವೆ. ಯಾವುದೇ ರಂಗದಲ್ಲಿ ಯಶಸ್ಸನ್ನು ಪಡೆಯಲು ಅದೃಷ್ಟ ಮೊದಲು ಬೇಕು. ವಿದ್ಯೆಯಿದ್ದವರೂ ಚೆನ್ನಾಗಿರುವ ಉದ್ಯೋಗ ಪಡೆಯದಿರಬಹುದು ಅಥವಾ ಅಷ್ಟೇ ವಿಧದಲ್ಲಿ ಪ್ರಯತ್ನಪಟ್ಟರೂ ಎಣಿಸಿದ ಯಶಸ್ಸು ಸಿಗದಿರಬಹುದು. ಆಗೆಲ್ಲ ಅದೃಷ್ಟ ಕೈಕೊಟ್ಟಿದೆ ಎನ್ನುತ್ತೇವೆ. ಅದೃಷ್ಟವಂತನಾಗುವುದಕ್ಕೂ ಪೂರ್ವಜನ್ಮದ ಪುಣ್ಯ ಸಂಚಯನವಿರಬೇಕು. ಒಳ್ಳೆಯ ಯೋಚನೆ, ಮನೋಭಾವ ಇರಬೇಕು. ಈ ಎಲ್ಲ ಬಗೆಯ ಒಳ್ಳೆಯತನವೇ ನಮ್ಮನ್ನು ಮೇಲೆತ್ತುವುದು.

ದೆಹಲಿ ಬಿಸಿಲಿಗೆ ಚಿರಳೆಗಳು ಒಣಗಿದವೇ?



ಪುಟ ೧ ➔ ಯಾರು ಬೇಕಾದರೂ, ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ನಡೆಸಬಹುದು ಎಂಬ ಹಗಲುಗನಸಿನ ಆದರ್ಶವನ್ನು ಮುಂದಿಟ್ಟುಕೊಂಡು ತಲೆಬುಡವಿಲ್ಲದ ಮಾತನಾಡುತ್ತಾ, ಎಲ್ಲಾ ಮಾಧ್ಯಮಗಳನ್ನು ಕರೆಸಿಕೊಂಡು ಕುಳಿತಿದ್ದ ಈ ಹುಡುಗರಿಗೆ ಆಶ್ಚರ್ಯವಾಗುವಂತೆ, ತಮ್ಮ ಬಳಿ ಕೋರಿಕೆ ಹಿಡಿದು ಬಂದವರಿಗೆ ಹೆಚ್ಚಿನ ಪ್ರಶ್ನೆಯನ್ನೇನೂ ಕೇಳದೆ ದೆಹಲಿ ಪೊಲೀಸರು ಅನುಮತಿ ಪತ್ರವನ್ನು ಕೈಗಿತ್ತರು. ಅನುಮತಿ ಸಿಗದಿದ್ದರೆ ಗಲಭೆ ಮಾಡುವ ಸಾಧ್ಯತೆಯನ್ನೇ ಇಲ್ಲವಾಗಿಸಿದರು. ಅನುಮತಿ ಸಿಕ್ಕಿದರೆ ಗಲಭೆ ಮಾಡಿಸುವ ಇನ್ನೊಂದು ಸಾಧ್ಯತೆಯನ್ನು ಇಲ್ಲವಾಗಿಸಲು, ಸಮವಸ್ತ್ರ ಧರಿಸಿದ ಹಾಗು ಮಫ್ತಿಯಲ್ಲಿರುವ ಸಾಮಾನ್ಯ ಪೊಲೀಸ್ ತುಕಡಿಗಳೊಂದಿಗೆ ಹಿಂದೆಂದೂ ಉಪಯೋಗಿಸದ ಹೊಸ ತಂತ್ರವೊಂದನ್ನು ಬಳಸಲಾಯ್ತು. ಅದೇನೆಂದರೆ, ಪ್ರತಿಭಟನೆಯ ದಿನ ಮಾಧ್ಯಮ ಪ್ರತಿನಿಧಿಗಳಲ್ಲದೆ ದೆಹಲಿ ಪೊಲೀಸರು ಕೂಡ ಕೈಯಲ್ಲಿ ಕ್ಯಾಮರಾ ಮತ್ತು ಡ್ರೋನ್‌ಗಳನ್ನು ಹಿಡಿದು, ಬಾಡಿ ಕ್ಯಾಮ್‌ಗಳನ್ನೂ ಧರಿಸಿ, ಪ್ರತಿಯೊಬ್ಬ ಪ್ರತಿಭಟನಾಕಾರನ ಮುಖಗಳನ್ನು ಸೆರೆಹಿಡಿದರು. ಒಂದೊಮ್ಮೆ ಗಲಭೆ ನಡೆದರೆ ಯಾರ್ಯಾರನ್ನು ಹೆಡೆಮುರಿ ಕಟ್ಟಬೇಕು ಎನ್ನುವುದು ಇದರಿಂದ ಸುಲಭವಾಯ್ತು. ನಿಜಕ್ಕೂ ನೀಟ್ ಅವ್ಯವಹಾರದ ಬಗ್ಗೆ ಮಾತ್ರವೇ ಪ್ರತಿಭಟಿಸಲು ಬಂದಿದ್ದ ವಿದ್ಯಾರ್ಥಿಗಳು ಪೊಲೀಸರ ಈ ನಡೆಗಳಿಂದ, ಯಾರಾದರೂ ಗಲಭೆ ಪ್ರಾರಂಭಿಸಿದರೆ ಅದರಿಂದ ತಮ್ಮ ಮುಂದಿನ ಭವಿಷ್ಯಕ್ಕೆ ಆಗಬಹುದಾದ ಪರಿಣಾಮಗಳನ್ನು ಊಹಿಸಿಕೊಂಡು ಪ್ರತಿಭಟನೆಯಿಂದ ದೂರವೇ ಉಳಿದರು.

ಇದೆಲ್ಲದರ ಜೊತೆಗೆ ಯೂಟ್ಯೂಬರ್‌ಗಳು ಮತ್ತು ಇನ್‌ಫ್ಲುಯೆನ್ಸರುಗಳು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಜೊತೆ ನಡೆಸಿದ ಸಂವಾದಗಳು ಮತ್ತು ಸಂದರ್ಶನಗಳು, ಇಡೀ ಪ್ರತಿಭಟನೆ ಎಷ್ಟು ಟೊಳ್ಳು ಅಂತಲೂ ನಿರೂಪಿಸಿದರು. ನೀಟ್ ಪರೀಕ್ಷೆ ಅಂದರೆ ಏನಂತಲೂ ಗೊತ್ತಿಲ್ಲದ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಒಂದು ಹುಡುಗಿಯಂತೂ 'ನಾನಿಲ್ಲಿ ಇಸ್ರೇಲ್-ಅಮೆರಿಕಾ ನಡುವೆ ನಡೆಯುತ್ತಿರುವ ಯುದ್ಧದ ವಿರುದ್ಧ ಪ್ರತಿಭಟಿಸಲು ಬಂದಿದ್ದೇನೆ' ಎಂದಳು. ಇನ್ನೊಬ್ಬಳು 'ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ಅದರ ವಿರುದ್ಧ ಪ್ರತಿಭಟನೆಗೆ ಬಂದಿದ್ದೀನಿ' ಎಂದಳು.

ಮತ್ತೊಬ್ಬ ಮಹಾಶಯ 'ಇವಿಎಂ ಹ್ಯಾಕ್ ಮಾಡಿ ತೋರಿಸುತ್ತೇನೆ' ಎಂದು ಕುಳಿತಿದ್ದ. ಇನ್ನೊಬ್ಬ 'ನನ್ನ ಮೊಬೈಲ್ ಮತ್ತು ಚಿನ್ನದ ಚೈನ್ ಕಳುವಾಗಿದೆ. ಹುಡುಕಿಕೊಡಿ' ಎಂದು ಅಳುತ್ತಿದ್ದ. ಉದ್ದದ ಫ್ರಾಕ್, ಲಂಗ ದಾವಣಿ ಮತ್ತು ಸೀರೆಗಳನ್ನು ಧರಿಸಿದ್ದ ಪುರುಷ ಮಹಾಶಯರು ಆಝಾದಿ ಆಝಾದಿ ಎಂದು ನರ್ತಿಸುತ್ತಿದ್ದರು. ಪ್ಯಾಂಟ್ ಮತ್ತು ಚಡ್ಡಿ ಧರಿಸಿರುವ ಹುಡುಗಿಯರು ಪ್ಯಾಲೆಸ್ತೀನಿಗೆ ಜಿಂದಾಬಾದ್ ಕೂಗುತ್ತಿದ್ದರು. ಸಮಾನತೆಯ ಕೂಗು ಎತ್ತಿದ್ದ ಮೂವತ್ತರ ಹರೆಯದ ಜೆನ್ ಝೀ ಪ್ರತಿನಿಧಿಗಳಿಗೆ ಅರವತ್ತರ ಅಜ್ಜನೊಬ್ಬ ಗಾಳಿ ಹಾಕುತ್ತಾ ನಿಂತಿದ್ದ. ಅಮೆರಿಕಾದಿಂದ ಆಮದಾಗಿದ್ದ ಸಿಜೆಪಿಯ ಅಧ್ಯಕ್ಷನಂತೂ ದೆಹಲಿಯ ಬಿಸಿ ತಾಳಲಾರದೆ ಅವರ ಪ್ರತಿಭಟನೆಯ ರೀತಿಯಲ್ಲಿ ಕುಸಿದೇ ಬಿದ್ದ. ಒಟ್ಟಿನಲ್ಲಿ ನಿಜಕ್ಕೂ ಅರ್ಥಪೂರ್ಣ ರೀತಿಯಲ್ಲಿ ನಡೆಯಬೇಕಾಗಿದ್ದ ಪ್ರತಿಭಟನೆಯೊಂದು, ಇಪ್ಪತ್ತು ಲಕ್ಷಕ್ಕೂ ಹೆಚ್ಚು ಆನ್ಲೈನ್ ಬೆಂಬಲಿಗರಿದ್ದ ಪ್ರತಿಭಟನೆಯೊಂದು, ಇಪ್ಪತ್ತು ಸಾವಿರ ಜನರನ್ನೂ ಜಂತರ್ ಮಂತರ್‌ನಲ್ಲಿ ಸೇರಿಸಲಾಗದೇ ಕಮರಿಯೇ ಹೋಯಿತು. ಈ ಪ್ರತಿಭಟನಾಕಾರರು ತಮ್ಮ ತಪ್ಪುಗಳಿಂದ ಪಾಠ ಕಲಿತು, ಇನ್ನೊಮ್ಮೆ ಬೇರೆಯದೇ ರೂಪದಲ್ಲಿ ಅಥವಾ ದೇಶಾದ್ಯಂತ ಏಕಕಾಲದಲ್ಲಿ ತಲೆಯೆತ್ತುವುದನ್ನು ಅಲ್ಲಗಳೆಯಲಾಗುವುದಿಲ್ಲವಾದರೂ, ಈ ಪಾರ್ಟಿ ತನ್ನ ನಂಬಿಕೆಯನ್ನು ಮತ್ತು ಈ ಪ್ರತಿಭಟನೆ ತನ್ನ ಮೊನಚನ್ನು ಸದ್ಯಕ್ಕೆ ಕಳೆದುಕೊಂಡಿರುವುದಂತೂ ಹೌದು.

ಹಾಗಾದರೆ ಈ ಪ್ರತಿಭಟನೆಯೇ ತಪ್ಪೇ? ಇದು ಕೇವಲ ಬಿಜೆಪಿ ವಿರೋಧಿಗಳ ರಾಜಕೀಯವೇ? ಖಂಡಿತಾ ಈ ಪ್ರತಿಭಟನೆ ತಪ್ಪಲ್ಲ. ಧರ್ಮೇಂದ್ರ ಪ್ರಧಾನ್ ಸಾರ್ವಜನಿಕವಾಗಿ ಛೀಮಾರಿ ಹಾಕಿಸಿಕೊಳ್ಳುತ್ತಿರುವುದು ಇದೇನೂ ಮೊದಲನೇ ಬಾರಿಗಲ್ಲ. ನಮ್ಮ ಭವಿಷ್ಯದ ಪ್ರಜೆಗಳನ್ನು ರೂಪಿಸುವಂತಹ ಗುರುತರ ಜವಾಬ್ದಾರಿಯಿರುವ ಈ ಹುದ್ದೆಗೆ ಅದೆಷ್ಟು ವರ್ಚಸ್ಸಿರುವ ವ್ಯಕ್ತಿ ಬೇಕು. ಇನ್ನು ಈ ರಾಜೀನಾಮೆಯ ಬೇಡಿಕೆಗೆ ಬಂದರೆ, ವೈಯಕ್ತಿಕವಾಗಿ ನನಗಂತೂ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕೇ? ಎನ್ನುವುದು ರಾಜಕೀಯ ಪ್ರೇರಿತ ಪ್ರಶ್ನೆಯಷ್ಟೇ. ಕಾಂಗ್ರೆಸ್ ಮತ್ತು ಸಿಜೆಪಿಯಂತವರು ರಾಜೀನಾಮೆಗೆ ಆಗ್ರಹಿಸುತ್ತಿರುವುದು ಮೋದಿಯರನ್ನು ಮಣಿಸುವ ಸೇಡಿನ ಲೆಕ್ಕಾಚಾರದಲ್ಲೇ ಹೊರತು, ನೀಟ್ ಪತ್ರಿಕೆಯ ಸೋರಿಕೆಯಿಂದ ನೊಂದ ವಿದ್ಯಾರ್ಥಿಗಳ ಮೇಲಿನ ಕಕ್ಕುಲತೆಗಲ್ಲ ಎನ್ನುವುದು ಆದಾಗಲೇ ಕಂಡುಬರುತ್ತಿದೆ. ಇಲ್ಲಿ ಸರಿಹೋಗಬೇಕಾದದ್ದು ದುರ್ಬಲ ವ್ಯವಸ್ಥೆಯಷ್ಟೇ ಹೊರತು, ಪ್ರಧಾನ್ ಒಂದು ದುರ್ಬಲ ಮಂತ್ರಿಯ ಮುಖ ಮಾತ್ರ. ಹಾಗು ಸರ್ಕಾರ ದುರ್ಬಲ ವ್ಯವಸ್ಥೆಯನ್ನು ಸರಿಮಾಡಬೇಕಾಗಿದೆಯೇ ಹೊರತು, ದುರ್ಬಲ ಮಂತ್ರಿಯನ್ನು ಹೊರಗಟ್ಟಿದರೆ ಅದರಿಂದ ಯಾವ ಹೆಚ್ಚಿನ ಸಕಾರಾತ್ಮಕ ಪರಿಣಾಮವೂ ಉಂಟಾಗದು. ಮಾತ್ರವಲ್ಲ, ರಾಜಕೀಯ ಒಳಸುಳಿಯ ದೃಷ್ಟಿಯಿಂದ ನೋಡಿದರೂ ಕೂಡ, ನಡೆದ ಅವಘಡಕ್ಕೆ ಮಂತ್ರಿಯೊಬ್ಬನನ್ನು ಹೊಣೆಮಾಡುವ ಹಾಗೂ ಅವನ ಅಥವಾ ಅವಳ ರಾಜೀನಾಮೆ ಪಡೆಯುವ ಹೊಸ ಪದ್ಧತಿಗೆ ನಾಂದಿ ಹಾಡುವತ್ತ ಬಿಜೆಪಿ ಹೆಜ್ಜೆ ಹಾಕಲಾರದು. ಯಾಕೆಂದರೆ ಸಾಂವಿಧಾನಿಕವಾಗಿ ಜಾರಿಗೆ ಬಂದ ನಿಯಮವೊಂದನ್ನು ಹೇಗಾದರೂ ಬದಲಿಸಬಹುದು. ಆದರೆ ಮಂತ್ರಿಯನ್ನು ಬಲಿಕೊಡುವ ಪದ್ಧತಿ ಒಮ್ಮೆ ಜಾರಿಗೆ ಬಂದರೆ ಮತ್ತೆ ಬದಲಿಸಲಾಗದು. ಇವತ್ತು ಪ್ರಧಾನ್ ಅವರನ್ನು ತೆಗೆದರೆ, ಬಿಜೆಪಿ ತಾನಾಗಿಯೇ 'ಆಯಾ ಸಚಿವಾಲಯದಲ್ಲಿ ನಡೆದ ತಪ್ಪಿಗೆ ಆ ಮಂತ್ರಿಯೇ ಹೊಣೆ ಹಾಗೂ ಆ ತಪ್ಪಿಗೆ ಅವರನ್ನು ಕೆಲಸದಿಂದ ತೆಗೆಯಲಾಗುತ್ತದೆ' ಎಂಬ ಅಲಿಖಿತ ನಿಯಮವನ್ನು ಬರೆದಂತಾಗುತ್ತದೆ. ನಾಳೆ ರೂಪಾಯಿ ಅಪಮೌಲ್ಯದ ನೆಪ ಹಿಡಿದು ನಿರ್ಮಲಾ ಅವರ ತಲೆದಂಡಕ್ಕೆ ಆಗ್ರಹಪಡಲಾಗುತ್ತದೆ. ಪೆಟ್ರೋಲ್ ಮತ್ತು ಗ್ಯಾಸ್ ಕೊರತೆಗೆ ಹರ್ದೀಪ್ ಪುರಿಯವರ ರಾಜೀನಾಮೆಗೆ ಗಲಭೆ ಪ್ರಾರಂಭವಾಗುತ್ತದೆ. ಮಾತ್ರವಲ್ಲ ವಿರೋಧ ಪಕ್ಷಗಳು ಮುಂದಿನ ದಿನಗಳಲ್ಲಿ ಇದನ್ನೇ ಖಾಯಂ ಅಜೆಂಡಾ ಮಾಡಿಕೊಂಡು ಬಿಡುತ್ತವೆ. ಆದ್ದರಿಂದ, ಪ್ರಧಾನ್ ಅವರ ತಲೆದಂಡ ಕೊಡಲಾಗುತ್ತದೆ ಎಂಬ ಯಾವ ನಂಬಿಕೆಯೂ ನನಗಿಲ್ಲ. ಆದರೆ, ಈ ಜಿರಳೆಗಳ ಗಲಾಟೆಯಿಂದ ಯಾವ ಉಪಯೋಗವೂ ಇದೆ ಎಂಬ ನಂಬಿಕೆಯೂ ನನಗಿಲ್ಲ. ಆದ್ದರಿಂದ, ಯಾರನ್ನೂ ಕೆಲಸದಿಂದ ತೆಗೆಯದೇ, ಮೋದಿಯವರ ಸರ್ಕಾರ ಈಗ ನಡೆದಿರುವ ತಪ್ಪನ್ನು ಒಪ್ಪಿಕೊಂಡು, ಇಂತಹ ಘಟನೆಗಳು ಮರುಕಳಿಸದಂತೆ ಯಾವ ನಿಯಮಾವಳಿಗಳನ್ನು ಜಾರಿಗೊಳಿಸುವ ಹೆಜ್ಜೆಗಳನ್ನು ಇಡಲಿದೆ ಎಂಬುದು ಕುತೂಹಲಕಾರಿ ವಿಚಾರ. ಅಂತಹದೊಂದು ನಿಯಮಾವಳಿಯನ್ನು ಜಾರಿಗೆ ತಂದು, ಆನಂತರ ಸಚಿವಾಲಯದಲ್ಲಿ ಬದಲಾವಣೆ ಮಾಡಿದರೆ, ಈ ಸರ್ಕಾರ ನಿಜಕ್ಕೂ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಿದೆ ಎಂಬ ನಂಬಿಕೆಯನ್ನಾದರೂ ಉಳಿಸಿಕೊಳ್ಳಬಹುದು.

ಇನ್ನು ಈ ಜೆನ್-ಝೀಗಳ ವಿಚಾರಕ್ಕೆ ಬಂದರೆ, ಯೋಚಿಸುವ ಶಕ್ತಿಯೇ ಇಲ್ಲದ ಇವರನ್ನು ವಿದೇಶೀ ಶಕ್ತಿಗಳು ದಾಳಗಳನ್ನಾಗಿ ಬಳಸಿಕೊಳ್ಳುತ್ತಿವೆ ಎಂಬುದಂತೂ ಬಾಂಗ್ಲಾದೇಶ, ನೇಪಾಳ, ಇಂಡೋನೇಷ್ಯಗಳಲ್ಲಿ ನಡೆದ ರಾಜಕೀಯ ವಿಕೋಪಗಳಿಂದ ಸರ್ವವಿದಿತವಾಗಿದೆ. ಹೊಸ ರೀತಿಯ ಸಮಸ್ಯೆಗಳಿಗೆ, ಹೊಸ ರೀತಿಯ ಪರಿಹಾರಗಳೇ ಬೇಕು. ರಾಜಕೀಯದಲ್ಲಿ ಅನುಭವಿಗಳಾದರೂ ಸಹ ಹಳೆಯ ಯೋಚನಾಲಹರಿಗೇ ಜೋತುಬಿದ್ದಿರುವ ಹಳೆಯ ಪಕ್ಷಗಳು ಇವರನ್ನು ಹೇಗೆ ನಿರ್ವಹಿಸುತ್ತವೆ ಎಂಬುದು ಕೂಡ ಕುತೂಹಲದ ವಿಚಾರ.

ಮೊನ್ನೆಯಷ್ಟೇ ನನ್ನ ಮಗಳು ಅಪ್ಪಾ, ಜೆನ್-ಝೀ ಗಳಿಗೆ ಆ ಝೆಡ್ ಅಕ್ಷರವನ್ನೇ ಏಕೆ ಬಳಸುತ್ತಾರೆ ಎಂದು ಕೇಳಿದಾಗ, ಬೇರೆಲ್ಲ ಇತಿಹಾಸ ವಿವರಿಸುವುದು ಬಿಟ್ಟು ನಾನು ಝೆಡ್ ಹೇಗೆ ಅಕ್ಷರಮಾಲೆಯ ಕೊನೆಯ ಅಕ್ಷರವೋ, ಹಾಗೆಯೇ ಈ ಜೆನ್-ಝೀಗಳು ಮನುಕುಲದ ಕೊನೆಯ ಪೀಳಿಗೆಯಾಗುವ ಎಲ್ಲ ಲಕ್ಷಣಗಳನ್ನೂ ಹೊಂದಿದ್ದಾರೆ. ಇವರನ್ನೇ ನಂಬಿಕೊಂಡರೆ, ಇವರನ್ನು ತಿವಿಯುವ ಎಚ್ಚರವನ್ನು ನಾವು ಬೆಳೆಸಿಕೊಳ್ಳದೇ ಹೋದರೆ ನಮ್ಮ ಕಥೆ ಆ ಇಂಗ್ಲಿಷ್ ಅಕ್ಷರಮಾಲೆಯಂತೆಯೇ ಕೊನೆಯಾಗುವುದೇ ಹೌದು. ಅದಕ್ಕೇ ಆ ಅಕ್ಷರವನ್ನು ಸರಿಯಾಗಿಯೇ ಇಟ್ಟಿದ್ದಾರೆ ಎಂದೆ. ಮನುಕುಲ ಕೊನೆಯಾಗುತ್ತಾ? ಹಾಗಾದರೆ ನಮ್ಮ ಕಥೆಯೇನು? ಎಂದಳು. ಈ ಝೀಗಳ ಹಳವಂಡಗಳನ್ನು ನೋಡಿದ ಮೇಲೆ, ಅವರನ್ನು ತಿವಿದ ಮೇಲೆ, ನಿಮ್ಮನ್ನು ಸರಿಯಾಗಿ ಬೆಳೆಸುವುದು ನಮ್ಮ ಮುಖ್ಯ ಜವಾಬ್ದಾರಿಯಾಗುತ್ತದೆ. ನಿಮ್ಮನ್ನೆಲ್ಲಾ ಸರಿಯಾಗಿ ಬೆಳೆಸಿದ ಮೇಲೆ, ಮನುಕುಲಕ್ಕೆ ಹೊಸದೊಂದು ಹುಟ್ಟು ಸಿಗುವ ಸಾಧ್ಯತೆಯಿರುವುದರಿಂದ ನೀವು ಝೆನ್-ಎ ಕಣೇ ಮಗಳೇ. ನಿಮ್ಮಿಂದ ಹಳೆಯ ಮತ್ತು ಹೊಸ ಜಗತ್ತಿನ ಮಿಸಳಭಾಜಿಯಾಗಿ, ಮನುಕುಲದ ಹೊಸ ಶಕೆಯ ಪ್ರಾರಂಭ ಆಗಬೇಕು ನೋಡು ಎಂದೆ. ಎಷ್ಟು ಅರ್ಥವಾಯ್ತೋ ಗೊತ್ತಿಲ್ಲ.

ಬಕ್ರೀದ್ ಮತ್ತು ವಿವಿಧ ರಾಜ್ಯಗಳ ಗೋಹತ್ಯಾ ನಿಷೇಧ ಕಾನೂನುಗಳು



ಈ ವರ್ಷದ ಬಕ್ರೀದ್‌ನಲ್ಲಿ ಪ್ರತಿ ವರ್ಷದಂತೆ ಅಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ಗೋವುಗಳ ರಕ್ತ ಕಡಿಮೆ ಹರಿದಿತ್ತು. ಇದಕ್ಕೆ ಆಯಾ ರಾಜ್ಯ ಸರ್ಕಾರಗಳು ಪ್ರಾಣಿಬಲಿ ತಡೆಗೆ ಸಂಬಂಧಿಸಿದಂತೆ ತಕ್ಕ ಮಟ್ಟಿನ ವ್ಯವಸ್ಥೆಯನ್ನು ಮಾಡಿದ್ದು ಒಂದು ಕಾರಣವಾದರೆ, ಜನರಲ್ಲಿ ಗೋವಿನ ಬಗ್ಗೆ ಜಾಗೃತಿ ಮೂಡುತ್ತಿರುವುದು ಮತ್ತೊಂದು ಕಾರಣವಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೆಲ್ಲಾ ಜಾನುವಾರು ಮಾರಾಟ ಮತ್ತು ಹತ್ಯೆಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸಲಾಗಿತ್ತು. ದೇಶದಲ್ಲಿ ಆಡು, ಕುರಿ ಮತ್ತು ಒಂಟೆಗಳನ್ನು ಸಾಮಾನ್ಯವಾಗಿ ಬಲಿ ನೀಡಲಾಗುತ್ತದೆಯಾದರೂ, ಕೆಲವು ರಾಜ್ಯಗಳು ಮುಂದಾಗಲಿರುವ ಧಾರ್ಮಿಕ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಗೋಹತ್ಯೆಯ ಮೇಲೆ ಭಾಗಶಃ ನಿಷೇಧವನ್ನು ವಿಧಿಸಿದ್ದವು. ಜಾನುವಾರುಗಳ ದುಡಿಮೆಯ ಶಕ್ತಿ, ವಯಸ್ಸು ಮತ್ತು ಹಾಲು ಕೊಡುವ ಸಾಮರ್ಥ್ಯಕ್ಕೆ ಅನುಗುಣವಾಗಿ ದೃಢೀಕರಣ ಪತ್ರದೊಂದಿಗೆ ಅವುಗಳ ಹತ್ಯೆಗೂ ಕೆಲವೊಂದು ರಾಜ್ಯಗಳು ಅನುಮತಿಸಿದ್ದವು. ಬಹುತೇಕ ಬಿಜೆಪಿ ಅಧಿಕಾರವಿರುವ ರಾಜ್ಯಗಳಲ್ಲಿ ಗೋಹತ್ಯೆಯ ಮೇಲೆ ಕಟ್ಟುನಿಟ್ಟಾದ ನಿರ್ಬಂಧಗಳು ಅಥವಾ ಸಂಪೂರ್ಣ ನಿಷೇಧವಿತ್ತು. ಇನ್ನು ಕೆಲ ಈಶಾನ್ಯ ಮತ್ತು ದಕ್ಷಿಣ ರಾಜ್ಯಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹತ್ಯೆಗೆ ಕೆಲವು ನಿರ್ಬಂಧಗಳೊಂದಿಗೆ ಅನುಮತಿಯನ್ನು ನೀಡಲಾಗಿತ್ತು.

ಇದೇ ಕಾರಣಕ್ಕೆ ಈ ವರ್ಷ ಮೊದಲ ಬಾರಿಗೆ ಕೆಲ ಮುಲ್ಲಾ ಮೌಲ್ವಿಗಳು ಮುಂದಾಗಲಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಕ್ತಿಗಿಳಿದು ಗೋವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನವನ್ನು ನೀಡಬೇಕೆಂದು ಒತ್ತಾಯಿಸುವುದರೊಂದಿಗೆ ಗೋವನ್ನು ಈ ಬಾರಿ ಕುರ್ಬಾನಿ ಕೊಡಬಾರದು ಎಂಬುದಾಗೆಲ್ಲಾ ಹೇಳಲು ಪ್ರಾರಂಭಿಸಿದ್ದರು. ಇನ್ನು ಕೆಲ ಮುಸ್ಲಿಂ ಸಂಘಟನೆಗಳು ಮತ್ತು ಧರ್ಮಗುರುಗಳು ಕುರ್ಬಾನಿ ಆಚರಣೆಯನ್ನು ಆಯಾ ರಾಜ್ಯದ ಕಾನೂನಿನ ಅನ್ವಯ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಒತ್ತಾಯಿಸಿದ್ದವು. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿನ ಮುಸ್ಲಿಂ ಮುಖಂಡರು ಮತ್ತು ಈದ್ಗಾ ಸಮಿತಿಗಳು ಮುಸ್ಲಿಂ ಸಮುದಾಯಕ್ಕೆ ಗೋವುಗಳ ಬಲಿಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಮನವಿ ಮಾಡಿದ್ದವು. ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿನ ಮುಸ್ಲಿಂ ಸಂಘಟನೆಗಳು ಕೋಮು ಸಾಮರಸ್ಯವನ್ನು ಕಾಪಾಡಿಕೊಳ್ಳಲು ಗೋಹತ್ಯೆ ಮಾಡದಂತೆ ಮತ್ತು ಕಾನೂನನ್ನು ಪಾಲಿಸುವಂತೆ ಸಮುದಾಯಕ್ಕೆ ಮನವಿ ಮಾಡಿತ್ತು. ಜಮಿಯತ್ ಉಲಮಾ-ಇ-ಹಿಂದ್ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಷೇಧಿಸಲಾದ ಪ್ರಾಣಿಗಳನ್ನು ಬಲಿ ನೀಡದಂತೆ ಸಮುದಾಯಕ್ಕೆ ಮನವಿ ಮಾಡಿದ್ದರು ಮತ್ತು ಸಾಮಾಜಿಕ ಮಾಧ್ಯಮದಲ್ಲಿ ವಧೆ ಮಾಡಲಾದ ಪ್ರಾಣಿಗಳ ಚಿತ್ರಗಳನ್ನು ಹಂಚಿಕೊಳ್ಳದಂತೆ ಸಲಹೆ ನೀಡಿದ್ದರು. ಇವರು ಇನ್ನಿತರ ಮುಸ್ಲಿಂ ಮುಖಂಡರೊಂದಿಗೆ ಸೇರಿಕೊಂಡು ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿದ್ದರು.

ಪ್ರತಿವರ್ಷ ಮುಸ್ಲಿಮರು ಬಕ್ರೀದ್‌ಗೆ ಪ್ರಾಣಿ ಬಲಿ ಕೊಡಲು ತಯಾರಿ ನಡೆಸುತ್ತಿದ್ದಂತೆ, ಆಡಳಿತ ರೂಢ ಸರ್ಕಾರಗಳು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಸಾಮಾನ್ಯ. ಇದರೊಂದಿಗೆ ಸ್ಥಳೀಯ ಜಾನುವಾರು ಹತ್ಯೆ ನಿಷೇಧ ಮತ್ತು ಪ್ರಾಣಿ ಬಲಿ ತಡೆ ಕಾನೂನಿನ ನಿಯಮಗಳನ್ನು ಜಾರಿಗೊಳಿಸಿ ನಿಗಾವಹಿಸಲು ಪ್ರಾರಂಭಿಸುತ್ತವೆ. ಹೀಗೆ ತೆಗೆದುಕೊಳ್ಳುವ ಕಾನೂನಿನ ನಿಯಮಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತವೆ. ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಹರಿಯಾಣ, ಮಧ್ಯಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಗೋವಿನ ಬಲಿಯ ಮೇಲೆ ಸಂಪೂರ್ಣ ನಿಷೇಧವಿದ್ದರೆ, ಕೇರಳ, ಈಶಾನ್ಯದ ಕೆಲವು ರಾಜ್ಯಗಳು ಗೋಹತ್ಯೆಗೆ ಅನುಮತಿಯನ್ನು ನೀಡುತ್ತವೆ.

ಮಹಾರಾಷ್ಟ್ರ ತನ್ನ 1976ರ ಮಹಾರಾಷ್ಟ್ರ ಪ್ರಾಣಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಪ್ರಾಣಿಗಳ ಹತ್ಯೆಯನ್ನು ನಿಯಂತ್ರಿಸುತ್ತಾ, ಗೋವುಗಳ ಹತ್ಯೆಯನ್ನು ನಿಷೇಧಿಸಿದೆ. ಈ ಕಾಯ್ದೆಗೆ 2015ರಲ್ಲಿ ತಿದ್ದುಪಡಿಯನ್ನು ತಂದು ಎತ್ತುಗಳ ವಧೆಯನ್ನು ಸಹ ನಿಷೇಧಿಸುತ್ತಾ, ಗೋವಂಶದ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಹಾಗೆಯೇ ಗೋಮಾಂಸದ ಸಂಗ್ರಹ, ಮಾರಾಟ ಮತ್ತು ಸಾಗಿಸುವುದನ್ನು ಅಪರಾಧಿಕ ಕೃತ್ಯವೆಂದು ಘೋಷಿಸುತ್ತಾ, ಉಲ್ಲಂಘಿಸಿದಲ್ಲಿ ಐದು ವರ್ಷಗಳ ವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸುವ ಅವಕಾಶವನ್ನು ಕಲ್ಪಿಸಿದೆ. ಎಮ್ಮೆಗಳ ಹತ್ಯೆಗೆ ಸ್ಥಳೀಯ ಅಧಿಕಾರಿಗಳ ಪ್ರಮಾಣಪತ್ರದೊಂದಿಗೆ ಅನುಮತಿಯನ್ನು ನೀಡಿದೆ.

ಪಶ್ಚಿಮ ಬಂಗಾಳದ ನೂತನ ಸರ್ಕಾರ 14 ವರ್ಷಕ್ಕಿಂತ ಮೇಲ್ಪಟ್ಟ ಅಥವಾ ಕೆಲಸ ಮಾಡಲು ಅಥವಾ ಸಂತಾನೋತ್ಪತ್ತಿಗೆ ಅನರ್ಹವೆಂದು ಘೋಷಿಸಲಾದ ಜಾನುವಾರುಗಳನ್ನು ಮಾತ್ರ ವಧೆಗೆ ಬಳಸಬಹುದು ಎಂಬ ಆದೇಶವನ್ನು ಹೊರಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ಫಿಟ್‌ನೆಸ್ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿದೆ. ಹಾಗೆಯೇ ಸಾರ್ವಜನಿಕವಾಗಿ ಜಾನುವಾರುಗಳ ಹತ್ಯೆಯನ್ನು ಮಾಡುವಂತಿಲ್ಲ ಮತ್ತು ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ನಿರ್ದಿಷ್ಟ ಸೂಚನೆಗಳೊಂದಿಗೆ ಹತ್ಯೆಯನ್ನು ಅನುಮತಿಸಿದೆ. ಧಾರ್ಮಿಕ ಆಚರಣೆಗಳನ್ನು ಗುರಿಯಾಗಿಸುವ ಬದಲು ಅಕ್ರಮ ಜಾನುವಾರು ಕಳ್ಳಸಾಗಣೆ ಮತ್ತು ಅನಧಿಕೃತ ಹತ್ಯೆಯನ್ನು ತಡೆಯುವುದು ಸರ್ಕಾರದ ಮೂಲ ಉದ್ದೇಶವಾಗಿದೆ.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ- 2020ರ ಅಡಿಯಲ್ಲಿ ಎಲ್ಲಾ ವಯಸ್ಸಿನ ಹಸುಗಳು, ಎತ್ತುಗಳು ಮತ್ತು 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳ ವಧೆಯನ್ನು ನಿಷೇಧಿಸಿದೆ. ಕಾನೂನುಬದ್ಧವಾಗಿ ಎಮ್ಮೆ ವಧೆಗೆ ಸಹ ಪಶುವೈದ್ಯಕೀಯ ಪ್ರಮಾಣೀಕರಣ ಮತ್ತು ಅಧಿಕೃತ ಅನುಮತಿಯನ್ನು ಕಡ್ಡಾಯಗೊಳಿಸಿದೆ. ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯ್ದೆ, 1958ರ ಅಡಿಯಲ್ಲಿ ಜಾನುವಾರು ಹತ್ಯೆಯನ್ನು ತುಲನಾತ್ಮಕವಾಗಿ ಅನುಸರಿಸುತ್ತಾ, ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿಲ್ಲ. ಪಶುವೈದ್ಯಕೀಯ ಅಧಿಕಾರಿಗಳಿಂದ ವಧೆಗೆ ಯೋಗ್ಯ ಪ್ರಮಾಣ ಪತ್ರವನ್ನು ಪಡೆದ ನಂತರವೇ ವಧೆಯನ್ನು ಅನುಮತಿಸಲಾಗಿದೆ. ಸಂತಾನೋತ್ಪತ್ತಿ, ಡ್ರಾಫ್ಟ್ ಅಥವಾ ಕೃಷಿ ಬಳಕೆಗೆ ಶಾಶ್ವತವಾಗಿ ಅನರ್ಹವೆಂದು ಪರಿಗಣಿಸಲಾದ ಪ್ರಾಣಿಗಳಿಗೆ ಸಾಮಾನ್ಯವಾಗಿ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಎಮ್ಮೆಗಳು, ಮೇಕೆಗಳು ಮತ್ತು ಕುರಿಗಳನ್ನು ಸಾಮಾನ್ಯವಾಗಿ ಇಲ್ಲಿ ಕುರ್ಬಾನಿಗಾಗಿ ಬಳಸಲಾಗುತ್ತದೆ. ಇನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣವು ಆಂಧ್ರ ಪ್ರದೇಶ ಗೋಹತ್ಯೆ ನಿಷೇಧ ಮತ್ತು ಪ್ರಾಣಿ ಸಂರಕ್ಷಣಾ ಕಾಯ್ದೆ, 1977ರ ನಿಬಂಧನೆಗಳನ್ನು ಜಾರಿಗೊಳಿಸುವುದನ್ನು ಮುಂದುವರೆಸಿದೆ. ಇಲ್ಲಿಯ ಕಾನೂನು ಹಸುಗಳು ಮತ್ತು ಕರುಗಳ ವಧೆಯನ್ನು ನಿಷೇಧಿಸುತ್ತದೆ, ಆದರೆ ಎತ್ತುಗಳನ್ನು ಕೃಷಿ ಅಥವಾ ಸಂತಾನೋತ್ಪತ್ತಿ ಉದ್ದೇಶಗಳಿಗೆ ಶಾಶ್ವತವಾಗಿ ಅನರ್ಹವೆಂದು ಘೋಷಿಸಿದ ನಂತರವೇ ವಧೆ ಮಾಡಬಹುದಾಗಿದೆ. ಕೆಲವೊಂದು ಪರಿಸ್ಥಿತಿಗಳಲ್ಲಿ ವಯಸ್ಕ ಎಮ್ಮೆಗಳ ವಧೆಯನ್ನು ಅನುಮತಿಸಲಾಗಿದೆ.

ಗೋಹತ್ಯೆಯ ಮೇಲೆ ಸಂಪೂರ್ಣ ನಿಷೇಧವಿಲ್ಲದ ಏಕೈಕ ದಕ್ಷಿಣದ ರಾಜ್ಯವಾಗಿ ಕೇರಳ ಕಂಡುಬರುತ್ತದೆ. ಇಲ್ಲಿ ಗೋಹತ್ಯೆ ಮತ್ತು ಗೋಮಾಂಸ ಸೇವನೆ ರಾಜ್ಯದಾದ್ಯಂತ ಕಾನೂನುಬದ್ಧವಾಗಿದೆ. ಗೋಹತ್ಯೆ ವಿರೋಧಿ ಶಾಸನಕ್ಕಿಂತ ಹೆಚ್ಚಾಗಿ ಪುರಸಭೆಯ ಕಾನೂನುಗಳು, ಪರವಾನಗಿ ಪಡೆದ ಕಸಾಯಿಖಾನೆಗಳು ಮತ್ತು ಸಾರ್ವಜನಿಕ ಆರೋಗ್ಯ ನಿಯಮಗಳ ಮೂಲಕ ವಧೆಯನ್ನು ನಿಯಂತ್ರಿಸಲಾಗುತ್ತದೆ. ಇನ್ನು ಅಸ್ಸಾಂಗೆ ಹೋಲಿಸಿದರೆ, ಇತರ ಈಶಾನ್ಯ ರಾಜ್ಯಗಳು ಗೋಹತ್ಯೆಯ ಮೇಲಿನ ನಿಯಮಗಳ ವಿಷಯದಲ್ಲಿ ತುಸು ಭಿನ್ನವಾಗಿರುವುದು ಕಂಡುಬರುತ್ತದೆ. ಮೇಘಾಲಯ, ನಾಗಾಲ್ಯಾಂಡ್ ಮತ್ತು ಮಿಜೋರಾಂಗಳಲ್ಲಿ ಗೋಹತ್ಯೆಗೆ ಸಂಪೂರ್ಣ ನಿಷೇಧವಿಲ್ಲದೆ ಜಾನುವಾರು ವಧೆ ಮತ್ತು ಗೋಮಾಂಸ ಸೇವನೆಯನ್ನು ಅನುಮತಿಸಿದೆ. ಈ ಕ್ರಿಶ್ಚಿಯನ್ ಬಹುಸಂಖ್ಯಾತ ರಾಜ್ಯಗಳು ದೇಶಾದ್ಯಂತ ಹಿಂದೆ ಗೋಹತ್ಯೆಗೆ ನಿರ್ಬಂಧಿಸುವುದನ್ನು ತೀವ್ರವಾಗಿ ವಿರೋಧಿಸಿದ್ದವು. ಈ ರಾಜ್ಯಗಳ ಪ್ರಕಾರ ಗೋಮಾಂಸ ಎಂಬುದು ಸ್ಥಳೀಯ ಆಹಾರ ಸಂಸ್ಕೃತಿಯ ಮತ್ತು ಬುಡಕಟ್ಟು ಸಂಪ್ರದಾಯದ ಅವಿಭಾಜ್ಯ ಅಂಗವಾಗಿದೆ. ಅರುಣಾಚಲ ಪ್ರದೇಶ ಮತ್ತು ತ್ರಿಪುರ ರಾಜ್ಯಗಳು ಜಾನುವಾರು ವಧೆಯ ಮೇಲೆ ಸಂಪೂರ್ಣ ನಿಷೇಧವನ್ನು ಜಾರಿಗೊಳಿಸಿಲ್ಲ. ಮಣಿಪುರ ಸಂಪೂರ್ಣ ಗೋಹತ್ಯೆಯ ಪರ ಹಾಗೂ ವಿರುದ್ಧವೂ ಇಲ್ಲದ ಸ್ಥಿತಿಯನ್ನು ಅನುಸರಿಸುತ್ತಿದೆ. ಮೈತೈ ಹಿಂದೂಗಳು ಹೆಚ್ಚಿರುವ ಸ್ಥಳಗಳಲ್ಲಿ ಪ್ರಮುಖವಾಗಿ ಇಂಫಾಲ್ ಕಣಿವೆಯಲ್ಲಿ ಧಾರ್ಮಿಕ ಸೂಕ್ಷ್ಮತೆಯ ದೃಷ್ಟಿಯಿಂದ ಜಾನುವಾರು ವಧೆಯನ್ನು ನಿರ್ಬಂಧಿಸಿದೆ. ಆದರೆ ಬುಡಕಟ್ಟು ಕ್ರಿಶ್ಚಿಯನ್ ಸಮುದಾಯಗಳು ಪ್ರಾಬಲ್ಯ ಹೊಂದಿರುವ ಬೆಟ್ಟದ ಜಿಲ್ಲೆಗಳಲ್ಲಿ ಗೋಮಾಂಸ ಸೇವನೆಯು ಸಾಮಾನ್ಯವಾಗಿದೆ.

ಬಕ್ರೀದ್ ಸಮಯದಲ್ಲಿ ಭಾಗಶಃ ಭಾರತದಾದ್ಯಂತ ಗೋಹತ್ಯೆಯನ್ನು ಆಯಾ ರಾಜ್ಯಗಳ ಸ್ಥಳೀಯ ಕಾನೂನಿನ ಅಡಿಯಲ್ಲಿಯೇ ನಿಷೇಧಿಸುವ ಪ್ರಯತ್ನಗಳಾಗುತ್ತವೆ. ಬಹುತೇಕ ರಾಜ್ಯಗಳು ಸ್ಥಳೀಯವಾಗಿ ಗೋವಂಶದ ಹತ್ಯೆಯನ್ನು ನಿಷೇಧಿಸುವ ಕಾನೂನನ್ನು ಒಳಗೊಂಡಿದ್ದರೆ, ಇನ್ನು ಕೆಲ ರಾಜ್ಯಗಳು ಗೋಹತ್ಯೆ ತಡೆಯಲು ಯಾವುದೇ ಕಾಯ್ದೆ ಕಾನೂನನ್ನು ಇಂದಿಗೂ ರಚಿಸಿಕೊಂಡಿಲ್ಲ. ಇನ್ನು ಕೆಲವೊಂದು ರಾಜ್ಯಗಳು ಯಾವುದೇ ಧಾರ್ಮಿಕ ಹಬ್ಬಗಳಲ್ಲಿ ಕುರಿ, ಒಂಟೆ, ಗೋವಂಶ ಸೇರಿದಂತೆ ಯಾವುದೇ ಪ್ರಾಣಿಗಳನ್ನು ಬಲಿ ಕೊಡುವುದನ್ನು ಕಡ್ಡಾಯವಾಗಿ ಸ್ಥಳೀಯ ಹಾಗೂ ಕೇಂದ್ರೀಯ ಕಾನೂನಿನ ಮೂಲಕ ನಿಯಂತ್ರಿಸುವುದರೊಂದಿಗೆ ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ಕೆಲವೊಂದು ನಿರ್ಬಂಧಗಳೊಂದಿಗೆ ಹತ್ಯೆ ಮಾಡಲು ಅನುಮತಿಸಿವೆ. ಅದರಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿಯ ಹತ್ಯೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿವೆ.

ಮನ ಮೋಹಿಸುವ ಮಾಧುರ್ಯದ ಒಡತಿ ಸುಮನ್ ಕಲ್ಯಾಣ್‌ಪುರ್

ಸುಮನ್ ಕಲ್ಯಾಣಪುರ್ ತಮ್ಮ ಹಾಡುಗಳ ರೂಪದಲ್ಲಿ ಎಂದೆಂದಿಗೂ ನಮ್ಮೊಂದಿಗೆ ಇರುತ್ತಾರೆ.

▸ **ಚಿದಂಬರ ಕಾಕತ್ಕರ್ ಮಂಗಳೂರು**

ಚಿತ್ರಸಂಗೀತದ ಸ್ವರ್ಣಯುಗವನ್ನು ಶ್ರೀಮಂತಗೊಳಿಸಿದವರಲ್ಲಿ ಓರ್ವರಾದ ಗಾಯಕಿ ಸುಮನ್ ಕಲ್ಯಾಣ್‌ಪುರ್ ಮದುವೆಗೆ ಮುನ್ನ ಸುಮನ್ ಹೆಮ್ಮಾಡಿ ಆಗಿದ್ದವರು. ಬ್ಯಾಂಕ್ ನೌಕರಿ ನಿಮಿತ್ತ ಢಾಕಾದಲ್ಲಿ ನೆಲೆಸಿದ್ದ ಅವರ ತಂದೆ ಶಂಕರ ರಾವ್ ಮೂಲತಃ ಕುಂದಾಪುರ ಸಮೀಪದ ಹೆಮ್ಮಾಡಿಯವರು. 1937ರಲ್ಲಿ ಸುಮನ್ ಜನಿಸಿದ ಕೆಲವು ವರ್ಷಗಳ ನಂತರ ಅವರ ಕುಟುಂಬ ಮುಂಬಯಿಗೆ ಸ್ಥಳಾಂತರಗೊಂಡಿತು. ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ್ದ ಸುಮನ್ ಹೈಸ್ಕೂಲ್ ಶಿಕ್ಷಣದ ನಂತರ ಪ್ರಸಿದ್ಧ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಸೇರಿದರು. ಗಾಯನದಲ್ಲೂ ಆಸಕ್ತಿ ಹೊಂದಿದ್ದ ಅವರು ಶಾಸ್ತ್ರೀಯ ಸಂಗೀತ ತರಬೇತಿಯನ್ನೂ ಪಡೆದರು. ಸಮಾರಂಭವೊಂದರಲ್ಲಿ ಹಾಡುತ್ತಿದ್ದಾಗ ಮುಖ್ಯ ಅತಿಥಿಯಾಗಿದ್ದ ತಲತ್ ಮಹಮೂದ್ ಇವರ ಪ್ರತಿಭೆಯನ್ನು ಗುರುತಿಸಿ HMVಗೆ ಪರಿಚಯಿಸಿದರು. ಆ ಮೇಲೆ ಆಕಾಶವಾಣಿಯಲ್ಲೂ ಹಾಡತೊಡಗಿದ ಅವರಿಗೆ ಮರಾಠಿ ಚಿತ್ರ ಶುಕ್ರಾಚಿ ಚಾಂದಣಿಯಲ್ಲಿ ಹಾಡುವ ಅವಕಾಶ ದೊರೆಯಿತು. ಅದರ ಹಾಡುಗಳಿಂದ ಆಕರ್ಷಿತರಾದ ಶೇಖ್ ಮುಖ್ತಾರ್‌ರವರು 'ಮಂಗೂ' ಎಂಬ ಹೆಸರಿನ ತಮ್ಮ ಚಿತ್ರಕ್ಕಾಗಿ ಮಹಮ್ಮದ್ ಶಫಿ ಅವರ ಸಂಗೀತ ನಿರ್ದೇಶನದಲ್ಲಿ ಮೂರು ಹಾಡುಗಳನ್ನು ಹಾಡಿಸಿದರು. ಆದರೆ ಕಾರಣಾಂತರದಿಂದ ಮಹಮ್ಮದ್ ಶಫಿ ಆ ಚಿತ್ರವನ್ನು ಬಿಡಬೇಕಾಗಿ ಬಂತು. ಅವರ ಜಾಗಕ್ಕೆ ಬಂದ ಓ.ಪಿ. ನಯ್ಯರ್ ಸುಮನ್ ಅವರ ಒಂದು ಹಾಡನ್ನು ಮಾತ್ರ ಉಳಿಸಿಕೊಂಡರು. ನಂತರ ಸುಮನ್ ನೌಷಾದ್ ಸಂಗೀತ ನಿರ್ದೇಶನವಿದ್ದ ದರ್ವಾಜಾ ಚಿತ್ರಕ್ಕೆ ಹಾಡಿದರು. ಕ್ರಮೇಣ ಅವರಿಗೆ ಒಂದರ ಹಿಂದೆ ಒಂದು ಅವಕಾಶಗಳು ಬರತೊಡಗಿದವು.



ಸುಮನ್ ಹೆಮ್ಮಾಡಿ 1958ರಲ್ಲಿ ಮುಂಬಯಿಯ ಉದ್ಯಮಿ ರಮಾನಂದ ಕಲ್ಯಾಣ್‌ಪುರ್ ಅವರನ್ನು ವಿವಾಹವಾದ ಮೇಲೆ ಸುಮನ್ ಕಲ್ಯಾಣ್‌ಪುರ್ ಆದರು.

50-60ರ ದಶಕಗಳಲ್ಲಿ ಸುಮನ್ ಕಲ್ಯಾಣಪುರ್ ಮತ್ತು ಲತಾ ಮಂಗೇಶ್ಕರ್ ಅವರ ಧ್ವನಿ ಮತ್ತು ಹಾಡುವ ಶೈಲಿಗಳು ಬಹುವಾಗಿ ಹೋಲುತ್ತಿದ್ದವು. ಶಂಕರ್ ಜೈಕಿಶನ್ ಅವರಿಂದ ಲಕ್ಷ್ಮಿಪ್ಯಾರೆವರೆಗೆ, ಸಲಿಲ್ ಚೌಧರಿಯಿಂದ ನೌಷಾದ್ ವರೆಗೆ ಎಲ್ಲರ ಅಚ್ಚುಮೆಚ್ಚಿನವರಾಗಿದ್ದ ಇವರು ಹೆಚ್ಚಿನ ರಿಹರ್ಸಲ್ ಇಲ್ಲದೆ ಸ್ಟುಡಿಯೊದಲ್ಲೇ ಹಾಡನ್ನು ಒಂದೆರಡು ಸಲ ಕೇಳಿ ರೆಕಾರ್ಡಿಂಗಿಗೆ ತಯಾರಾಗುತ್ತಿದ್ದರಂತೆ. ಲತಾ ಮಂಗೇಶ್ಕರ್ ಮುಂಚೂಣಿಯಲ್ಲಿರುವಾಗಲೇ ಇಷ್ಟೊಂದು ಹಾಡುಗಳು ಇವರ ಕಂಠದಿಂದ ಹೊರಹೊಮ್ಮಲು ಇದೂ ಒಂದು ಕಾರಣವಿರಬಹುದು. ಲತಾ ಮಂಗೇಶ್ಕರ್ ಇವರಿಗೆ ಹೆಚ್ಚು ಅವಕಾಶಗಳು ಸಿಗದಂತೆ ಮಾಡಿದರು ಎಂದು ಕೆಲವರು ಹೇಳುವುದಿದೆ. ಆದರೆ ಇದರಲ್ಲಿ ಹುರುಳಿಲ್ಲ. ಅವರು ಹಾಡಬೇಕಾದ ಹಾಡುಗಳೆಲ್ಲ ಅವರಿಗೆ ಸಿಕ್ಕಿವೆ.

ರಫಿ - ಸುಮನ್

ಸುಮನ್ ಕಲ್ಯಾಣಪುರ್ ಡ್ಯುಯೆಟ್‌ಗಳ ರಾಣಿ ಎಂದರೆ ತಪ್ಪಾಗಲಾರದು. ಇವರು ರಫಿ ಜತೆಗೂಡಿ ಹಾಡಿದರೆಂದರೆ ಆ ಹಾಡು ಸುಪರ್ ಹಿಟ್ ಎಂದೇ ಅರ್ಥ. ತುಝೆ ಪ್ಯಾರ್ ಕರತೆ ಹೈಂ ಕರತೆ ರಹೇಂಗೆ - ಎಪ್ರಿಲ್ ಫೂಲ್, ಅಗರ್ ತೇರಿ ಜಲ್ವಾನುಮಾಯಿ ನ ಹೋತಿ - ಬೇಟಿ ಬೇಟೆ, ಆಜ್ ಹಮ ಆಯೆ ಬಾಲಮಾ - ಸಾಂಝ್ ಔರ್ ಸವೇರಾ, ತುಮನೆ ಪುಕಾರಾ ಔರ್ ಹಮ್ ಚಲೆ ಆಯೆ - ರಾಜ್ ಕುಮಾರ್, ಠಹರಿಯೆ ಹೋಶ್ ಮೆಂ ಆ ಲೂಂ - ಮೊಹಬ್ಬತ್ ಇಸಕೊ ಕಹತೆ ಹೈಂ, ರಾತ್ ಸುಹಾನೀ ಜಾಗ್ ರಹೀ ಹೈ - ಜಿಗ್ರೀ ದೋಸ್ತ್, ಆಜ್ ಕಲ್ ತೆರೆ ಮೇರೆ ಪ್ಯಾರ್ ಕೆ - ಬ್ರಹ್ಮಚಾರಿ, ನಾ ನಾ ಕರತೆ ಪ್ಯಾರ್ ತುಮ್ಹೀ ಸೆ - ಜಬ್ ಜಬ್ ಫೂಲ್ ಖಿಲೆ, ದಿಲ್ ಏಕ್ ಮಂದಿರ್ ಹೈ - ಟೈಟಲ್ ಹಾಡು, ಪರ್ಬತೋಂ ಕೆ ಪೇಡೋಂ ಪರ್ - ಶಗೂನ್, ತುಮ್ ಸೆ ಓ ಹಸೀನಾ ಮೊಹಬ್ಬತ್ ನ ಮೈನೆ - ಫರ್ಜ್, ತುಝೆ ದೇಖಾ, ತುಝೇ ಚಾಹಾ - ಛೋಟೀಸೀ ಮುಲಾಕಾತ್ ಇವು ಕೆಲವು ಉದಾಹರಣೆಗಳು.

ಮುಕೇಶ್ - ಸುಮನ್

ಮುಕೇಶ್ ಜೊತೆಗಿನ ಅವರ ಹಿಟ್ ಹಾಡುಗಳು ಮೇರಾ ಪ್ಯಾರ್ ಭೀ ತೂ ಹೈ - ಸಾಥಿ, ಚುರಾ ಲೇನ ತುಮ್ ಕೋ ಯೇ - ದಿಲ್ ಹೀ ತೊ ಹೈ, ಯೇ ಕಿಸ್ ನೆ ಗೀತ್ ಛೇಡಾ - ಮೇರೀ ಸೂರತ್ ತೇರೀ ಆಂಖೆಂ, ಆಯಾ ನ ಹಮ್ ಕೋ ಪ್ಯಾರ್ ಜತಾನಾ - ಪಹಚಾನ್, ಹಾಂ ಮೈ ನೆ ಭೀ ಪ್ಯಾರ್ ಕಿಯಾ - ಬೂಂದ್ ಜೋ ಬನ್ ಗಯೀ ಮೋತಿ, ಯೇ ಮೌಸಮ್ ರಂಗೀನ್ ಸಮಾ - ಮಾಡರ್ನ್ ಗರ್ಲ್ ಇತ್ಯಾದಿ. ಪಹಚಾನ್ ಚಿತ್ರಕ್ಕಾಗಿ ಮುಕೇಶ್ ಮತ್ತು ಶಾರದಾ ಜೊತೆ ಅವರು ಹಾಡಿದ ವೋ ಪರಿ ಕಹಾಂ ಸೆ ಲಾವೂಂ ಚಾರ್ಟ್ ಬಸ್ಟರ್ ಆಗಿತ್ತು.

ಇತರರೊಂದಿಗೆ

ಅವರು ಹೇಮಂತ್ ಕುಮಾರ್ ಜೊತೆ ಹಾಡಿದ ಬಾತ್ ಏಕ್ ರಾತ್ ಕೀ ಚಿತ್ರದ ನ ತುಮ್ ಹಮೆಂ ಜಾನೋ, ಮನ್ನಾಡೆ ಜೊತೆ ಹಾಡಿದ ಜಿಂದಗೀ ಔರ್ ಖ್ವಾಬ್ ಚಿತ್ರದ ನ ಜಾನೆ ಕಹಾಂ ತುಮ್ ಥೆ, ಮನ್‌ಹರ್ ಉಧಾಸ್ ಜೊತೆ ಹಾಡಿದ ವಿಶ್ವಾಸ್ ಚಿತ್ರದ ಆಪ್ ಕೊ ಹಮ್ ಸೆ ಬಿಛ್‌ಡೆ ಹುವೆ ಕೂಡ ಹಿಟ್ ಹಾಡುಗಳೇ.

ಸೋಲೋ ಹಾಡುಗಳು

ಅವರ ಸೋಲೋ ಹಾಡುಗಳಲ್ಲಿ ದಿಲ್ ಏಕ್ ಮಂದಿರ್ ಚಿತ್ರದ ಜೂಹಿ ಕೀ ಕಲಿ ಮೇರಿ ಲಾಡಲಿ, ಕಣ್ ಕಣ್ ಮೆಂ ಭಗವಾನ್ ಚಿತ್ರದ ಅಪನೆ ಪಿಯಾ ಕೀ ಮೈ ತೋ ಬನಿರೆ ಜೋಗನಿಯಾ, ನೂರ್ ಮಹಲ್ ಚಿತ್ರದ ಮೇರೆ ಮೆಹಬೂಬ್ ನ ಜಾ, ಬಾಲಕ್ ಚಿತ್ರದ ಸುನ್ ಲೇ ಬಾಪೂ ಯೆ ಪೈಗಾಮ್, ರೇಶಮ್ ಕೀ ಡೋರಿಯ ಬಹನಾ ನೆ ಭಾಯಿ ಕೀ ಕಲಾಯಿ ಸೇ, ಗೀತ್ ಚಿತ್ರದ ಕಭೀ ಹೋಟೊಂ ಪೆ ಮುಝೆ ಭೀ ಲಗಾ ಲೆ, ರಫಿ ಮತ್ತು ಅವರು ಬೇರೆ ಬೇರೆಯಾಗಿ ಹಾಡಿದ ಜಹಾಂ ಪ್ಯಾರ್ ಮಿಲೆ ಚಿತ್ರದ ಚಲೇ ಜಾ ಚಲೇಜಾ ಹಾಡುಗಳು ನೆನಪಿನಲ್ಲುಳಿಯುವಂಥವು. Come September ಚಿತ್ರದ ಥೀಮ್ ಮ್ಯೂಸಿಕ್ ಆಧರಿಸಿ ಶಂಕರ್ ಜೈಕಿಶನ್ ನೇತೃತ್ವದಲ್ಲಿ ರಿಮ್ ಝಿಮ್ ರಿಮ್ ಝಿಮ್ ನ ಬರ್‌ಸೆ ಮೋತಿ ಕೆ ದಾನೆ ಎಂಬ non filmy ಹಾಡನ್ನು ಸುಮನ್ ಕಲ್ಯಾಣಪುರ್ ಹಾಡಿದ್ದು ಅದು ರೇಡಿಯೋ ಸಿಲೋನಿನಲ್ಲಿ ಮಾತ್ರ ಕೇಳಲು ಸಿಗುತ್ತಿತ್ತು.

ಕನ್ನಡ, ಮರಾಠಿ

'ಕಲಾವತಿ' ಚಿತ್ರದ ಒಡನಾಡಿ ಬೇಕೆಂದು, ಕಲ್ಪವೃಕ್ಷದ ಹಸಿ ಹಸಿ ಹೀರಿ ತನಿ ಹರೆಯ ಮತ್ತು ತಲ್ಲಾ ನೂರು ಬಗೆ ಅವರು ಹಾಡಿದ ಕನ್ನಡ ಹಾಡುಗಳು. ಅವರ ಮಧುರ ಮರಾಠಿ ಹಾಡುಗಳಲ್ಲಿ ಥಟ್ಟನೆ ನೆನಪಿಗೆ ಬರುವುದು ಬೆಳಗ್ಗೆ ರೇಡಿಯೋ ಮೂಲಕ ಕಿವಿಗೆ ಬೀಳುತ್ತಿದ್ದ 'ಕೇಶವಾ ಮಾಧವಾ ತುಝ್ಯಾ ನಾಮಾಚ ವೇ ಗೋಡವಾ' ಮತ್ತು 'ದೇಹ ಶುದ್ಧ ಕರುನಿ'.

ಸುರ್ ಸಿಂಗಾರ್ ಸಂಸದ್ ಪ್ರಶಸ್ತಿ, ಲತಾ ಮಂಗೇಶ್ಕರ್ ಪ್ರಶಸ್ತಿಗಳನ್ನು ಪಡೆದಿದ್ದ ಅವರನ್ನು 2023ರಲ್ಲಿ ಪದ್ಮಭೂಷಣ ನೀಡಿ ಗೌರವಿಸಲಾಗಿತ್ತು. ಯಾವುದೇ ವಿವಾದಗಳಿಗೆ ಸಿಲುಕದೆ ತಾನಾಯಿತು, ತನ್ನ ಹಾಡುಗಾರಿಕೆಯಾಯಿತು ಎಂದು ಕೊಡು ಕುಟುಂಬದೊಂದಿಗೆ ಸಂತೃಪ್ತ ಜೀವನ ನಡೆಸಿ 31-05-2026ರಂದು ನಮ್ಮನ್ನಗಲಿದ ಸುಮನ್ ಕಲ್ಯಾಣಪುರ್ ತಮ್ಮ ಹಾಡುಗಳ ರೂಪದಲ್ಲಿ ಎಂದೆಂದಿಗೂ ನಮ್ಮೊಂದಿಗೆ ಇರುತ್ತಾರೆ.

ಕಿರುಸುದ್ದಿ

ಕಲಾವಿದರು, ಕಲಾ ತಂಡಗಳಿಂದ ಅರ್ಜಿ ಆಹ್ವಾನ

• **ದೊಡ್ಡಬಳ್ಳಾಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏರ್ಪಡಿಸುವ ಕಾರ್ಯಕ್ರಮಗಳಿಗೆ ಹಾಗೂ ಸಂಘ-ಸಂಸ್ಥೆಗಳು ಪ್ರಯೋಜನೆ ಕೋರಿದಾಗ ಕಲಾವಿದರು/ಕಲಾ ತಂಡಗಳಿಗೆ ಅವಕಾಶ ಮಾಡಿಕೊಡಲು ಜಿಲ್ಲೆಯ ಕಲಾತಂಡ, ಕಲಾವಿದರುಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಜಿಲ್ಲೆಯ ಕಲಾವಿದರು, ಕಲಾತಂಡಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ನಮೂನೆಯನ್ನು ಪಡೆದು, ಕಲಾ ತಂಡಗಳ ಸದಸ್ಯರ ವಿವರಗಳು ಹಾಗೂ ಪ್ರದರ್ಶನ ನೀಡುತ್ತಿರುವ ಛಾಯಾಚಿತ್ರಗಳನ್ನು ಲಗತ್ತಿಸಿ ಜೂ.23ರ ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕು, ಚಪ್ಪರದಕಲ್ಲು, ಬೀರಸಂದ್ರ ಗ್ರಾಮ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ: 118 ಇಲ್ಲಿ ಸಂಪರ್ಕಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಪ್ರಧಾನಿಗಳ ಗಮನಸೆಳೆದ ಚಂದ್ರ ಹಲಸು

• **ದೊಡ್ಡಬಳ್ಳಾಪುರ:** ಜಿಕೆವಿಕೆ ಆವರಣದಲ್ಲಿ ನಡೆದ ಹಲಸು ಮೇಳದಲ್ಲಿ ಪ್ರದರ್ಶನಕ್ಕಿಟ್ಟಿದ್ದ ತೂಬಗೆರೆ ಚಂದ್ರ ಹಲಸು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಗಮನ ಸೆಳೆಯಿತು. ತೂಬಗೆರೆ ಹಲಸು ಬೆಳೆಗಾರರ ಸಂಘದ ಸದಸ್ಯ ಹಾಗೂ ದೊಡ್ಡ ತಿಮ್ಮನಹಳ್ಳಿ ಗ್ರಾಮದ ಯುವ ರೈತ ನಟರಾಜ ಬೆಳೆದಿರುವ ಈ ಹಲಸನ್ನು ವೀಕ್ಷಿಸಿದ ದೇವೇಗೌಡ ಅವರು ಅದರ ರುಚಿ ಸವಿದು, ಗುಣಮಟ್ಟ ಹಾಗೂ ವಿಶೇಷತೆಗಳ ಕುರಿತು ಮಾಹಿತಿ ಪಡೆದರು.



ವಿಶಿಷ್ಟ ಬಣ್ಣ, ಸುವಾಸನೆ ಮತ್ತು ರುಚಿಯಿಂದ ಹೆಸರು ವಾಸಿಯಾಗಿ ರುವ ತೂಬಗೆರೆ ಹಲಸು ರಾಜ್ಯದ ಪ್ರಮುಖ ಸ್ಥಳೀಯ ತಳಿಗಳಲ್ಲಿ ಒಂದಾಗಿದೆ. ಈ ಭಾಗದಲ್ಲಿ ಬೆಳೆಯುವ 8 ಹಲಸು ತಳಿಗಳಿಗೆ ವಿಶೇಷ ಪೇಟೆಂಟ್ ಸಿಕ್ಕಿದೆ. ಕೇಂದ್ರ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಬರುವ 'ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಪ್ರಾಧಿಕಾರ' (ಪಿಪಿಎಫ್‌ಆರ್‌ಎ) ದಿಂದ ತೂಬಗೆರೆ ಸುತ್ತಮುತ್ತಲಿನ 8 ಹಲಸು ತಳಿಗಳಿಗೆ, ಹಲಸಿನ ಹಣ್ಣಿನಲ್ಲೇ ಉತ್ಕೃಷ್ಟ ಎಂದು ಗುರುತಿಸಿರುವ ಹಕ್ಕು ಸ್ವಾಮ್ಯ (ಪೇಟೆಂಟ್) ಪ್ರಮಾಣಪತ್ರ ನೀಡಿದೆ. ಇದರಿಂದ ಈ ತಳಿಗಳ ವಿಶಿಷ್ಟತೆ ಹಾಗೂ ಸಂರಕ್ಷಣೆಗೆ ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ದೊರೆತಂತಾಗಿದೆ.

ಅರ್ಜಿ ಆಹ್ವಾನ

• **ಹೊಸಕೋಟೆ:** 2025-26 ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಮತ್ತು ಪದವಿ ತರಗತಿಗಳಲ್ಲಿ ಶೇಕಡಾ 60ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣವಾಗಿರುವ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತಾಲೂಕು ಗಾಣಿಗ ಸಂಘ ನಿರ್ಧರಿಸಿದೆ. ವಿದ್ಯಾರ್ಥಿಗಳು ಜೂನ್ 30ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9845544318, 72044 97884 ಮತ್ತು 97393 56160 ಸಂಪರ್ಕಿಸಲು ಕೋರಲಾಗಿದೆ.

ಸಿಎಂ ಅಭಿಮಾನಿಗಳಿಂದ ಅನ್ನದಾಸೋಹ



• **ನೆಲಮಂಗಲ:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಗಳಾದ ಸಂತೋಷಕ್ಕೆ ಅಭಿಮಾನಿಗಳು ಶ್ರೀ ರಾಮಾಂಜನೇಯ ಸ್ವಾಮಿಗೆ ಅಭಿಷೇಕ ಮಾಡಿಸಿ ಅನ್ನಸಂತರ್ಪಣೆ ಮಾಡುವ ಮೂಲಕ ದೇವರ ಹರಕೆ ತೀರಿಸಿದ್ದಾರೆ.ನಗರದ ವೀವರ್ಸ್ ಕಾಲೋನಿ ಸಮೀಪದ ಶ್ರೀ ರಾಮಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದಿಂದ ಹರಕೆ ತೀರಿಸಿ ಸಂಭ್ರಮಾಚರಣೆ ಮಾಡಿದರು. ಅಖಿಲ ಕರ್ನಾಟಕ ಡಿ.ಕೆ. ಶಿವಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಗೋಪಿ ಮಾತನಾಡಿ, ಡಿ.ಕೆ.ಶಿವಕುಮಾರ್‌ರವರು ಮುಖ್ಯಮಂತ್ರಿಗಳಾಗಲು ದೇವರಲ್ಲಿ ಹರಕೆ ಮಾಡಿಕೊಂಡಿದ್ದೇವು, ನಮ್ಮ ಬೇಡಿಕೆ ಈಡೇರಿದ್ದು ಸಿಎಂ ಆಗಿದ್ದಾರೆ ಆದ್ದರಿಂದ ದೇವರಿಗೆ ಅಭಿಷೇಕ ಮಾಡಿಸಿ ಅನ್ನ ಸಂತರ್ಪಣೆ ಮಾಡಿದ್ದು ಧೀರ್ಘಕಾಲ ಮುಖ್ಯಮಂತ್ರಿಗಳಾಗಲು ಬೇಡಿ ಕೊಂಡಿದ್ದೇವೆ ಎಂದರು. ಈ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ್ ಅಭಿಮಾನಿ ಬಳಗದ ಗೌರವಾಧ್ಯಕ್ಷ ಎನ್.ಆರ್. ಕೃಷ್ಣಮೂರ್ತಿ ಸೇರಿದಂತೆ ಅನೇಕ ಡಿ.ಕೆ. ಅಭಿಮಾನಿಗಳು, ಪಕ್ಷಾತೀತವಾಗಿ ಕೆಲ ಮುಖಂಡರು ಉಪಸ್ಥಿತರಿದ್ದರು.

ನಾಳೆ ವಿಚಾರ ಸಂಕಿರಣ

• **ಬೆಂಗಳೂರು:** ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಒಬಿಸಿ ಮತ್ತು ಅಲ್ಪಸಂಖ್ಯಾತರ ಘಟಕದ ವತಿಯಿಂದ ಜ್ಞಾನಜ್ಯೋತಿ ಸಭಾಂಗಣದ ಸೆಮಿನಾರ್ ಸಭಾಂಗಣದಲ್ಲಿ ಜೂ.10 ರಂದು ಬುಧವಾರ ಬೆಳಗ್ಗೆ 10 ಗಂಟೆಯಿಂದ ಪ್ರಚಲಿತ ಭಾರತದಲ್ಲಿ ಸಾಂವಿಧಾನಿಕ ಸುರಕ್ಷತೆಗಳು ಹಾಗೂ ಸಾಮಾಜಿಕ ಪರಿವರ್ತನೆ ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

ವಿಧಾನ ಪರಿಷತ್ತಿನ ಸದಸ್ಯ ರಮೇಶ್ ಬಾಬು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್.ಕಾಂತರಾಜ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕುಲಪತಿ ಪ್ರೊ. ರಮೇಶ್ ಬಿ. ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕುಲಸಚಿವ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ ಬಿ.ಕುಡೇನಟ್ಟಿ, ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ ಹಾಗೂ ಒಬಿಸಿ ಮತ್ತು ಅಲ್ಪಸಂಖ್ಯಾತರ ಘಟಕದ ವಿಶೇಷಾಧಿಕಾರಿ ಪ್ರೊ. ಎಂ. ನಿರ್ಮಲ ಉಪಸ್ಥಿತರಿರಲಿದ್ದಾರೆ. ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ಅಂಚಿನಲ್ಲಿರುವ ಸಮುದಾಯಗಳು ಸಾಂವಿಧಾನಿಕ ರಕ್ಷಣೆ ಎಂಬ ವಿಷಯದ ಕುರಿತ ಸಂವಾದದಲ್ಲಿ ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಡಾ.ಕೆ. ಕಿರಣ್ ಗಾಜನೂರ್ ಮತ್ತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಡಾ. ಆರ್.ವಿ. ಚಂದ್ರಶೇಖರ್ ಪಾಲ್ಗೊಳ್ಳುವರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಿ.ಕೆ. ಚಿತ್ತಯ್ಯ ಪೂಜಾರ್ ಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಮಾಜಿಕ ಪರಿವರ್ತನೆಯಲ್ಲಿ ಸಮಕಾಲೀನ ಸವಾಲುಗಳು ಎಂಬ ವಿಷಯದ ಕುರಿತ ಮತ್ತೊಂದು ಸಂವಾದದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಡಾ.ಎಚ್.ಆರ್. ಜಯಪಾಲ್ ಮತ್ತು ನೈರುತ್ಯ ರೈಲ್ವೆಯ ಹಿರಿಯ ಅಧಿಕಾರಿಗಳಾದ ಡಾ.ಕುಸುಮ ಹರಿಪ್ರಸಾದ್ ಪಾಲ್ಗೊಳ್ಳಲಿದ್ದಾರೆ. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ಕೆ.ವೈ. ನಾರಾಯಣಸ್ವಾಮಿ ಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯ | ವಾಸ್ತುಶಾಸ್ತ್ರ ಕುರಿತು ಜನರಿಗೆ ಅರಿವು ಮೂಡಿಸುವ ಯತ್ನ

ವಾಸ್ತುವೆಂದರೆ ಅದೊಂದು ಅದ್ಭುತ ವಿಜ್ಞಾನ

• **ದೊಡ್ಡಬಳ್ಳಾಪುರ:** ವಾಸ್ತು ಶಾಸ್ತ್ರವೆಂದರೆ ಕೇವಲ ಕಲ್ಲು, ಮಣ್ಣುಗಳ ಕುರಿತಾದ ವಿಷಯವಲ್ಲ ಅದೊಂದು ಅದ್ಭುತ ವಿಜ್ಞಾನ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ತಾಲೂಕು ಕನಸವಾಡಿಯ ಎಲ್‌ಜಿ ಭವನದಲ್ಲಿ ಹಮ್ಮಿಕೊಂಡಿದ್ದ ವಾಸ್ತುವಿನ ನಡಿಗೆ ಗ್ರಾಮದ ಕಡೆಗೆ ಕಾರ್ಯಕ್ರಮದಲ್ಲಿ ಮಾತನಾಡಿದರು. ವಾಸ್ತು ಎಂದರೆ ಅದೊಂದು ಧನಾತ್ಮಕ ಶಕ್ತಿ. ಇದರ ಬಗ್ಗೆ ಗ್ರಾಮೀಣ ಪ್ರದೇಶಗಳ ಜನರಿಗೆ ಅರಿವು ಮೂಡಿಸುವ ಪ್ರಯತ್ನವಾಗಿ ಪೂರ್ಣಮಾನಸ ಜ್ಯೋತಿಷ್ಯಾಲಯ ವಾಸ್ತು ನಡಿಗೆ ಗ್ರಾಮದ ಕಡೆಗೆ ಎಂಬ ವಿನೂತನ ಅಭಿಯಾನ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು. ಭಾರತ ಹಳ್ಳಿಗಳ ದೇಶ, ದೇಶದ ಬೆನ್ನೆಲುಬು ರೈತ. ಹಳ್ಳಿಗಳು ಸಮೃದ್ಧವಾಗಿದ್ದರೆ ದೇಶ ಸುಭಿಕ್ಷವಾಗಿರುತ್ತದೆ. ಈ ನಿಟ್ಟಿನಲ್ಲಿ ವಾಸ್ತುಶಾಸ್ತ್ರ ಸಮಯೋಚಿತವಾಗಿದೆ. ಯೋಗ, ಆಯುರ್ವೇದ ವಿಷಯದಲ್ಲಿ ಜಗತ್ತು ಭಾರತವನ್ನು ತಿರುಗಿ ನೋಡುವಂತಾಗಿದೆ. ಜಗತ್ತಿನ ಹಲವು ದೇಶಗಳು ಇವನ್ನು ಸ್ವೀಕರಿಸಿವೆ. ಇದೇ ರೀತಿ ವಾಸ್ತುಶಾಸ್ತ್ರವನ್ನು ಗಂಭೀರವಾಗಿ ಗಮನಿಸುತ್ತಿವೆ. ಪ್ರಧಾನಿ ಮೋದಿ ಅವರೂ ವಾಸ್ತುಶಾಸ್ತ್ರದ ಬಗ್ಗೆ ಮೆಚ್ಚುಗೆಯ ಮಾತನಾಡಿದ್ದಾರೆ. ಅದರ ಮೇಲೆ ನಂಬಿಕೆ ಇಟ್ಟಿದ್ದಾರೆ ಎಂದು ಹೇಳಿದರು. ಸೂರ್ಯನ ಮೊದಲ ಕಿರಣ ಮನೆಯನ್ನು ಹೇಗೆ ಪ್ರವೇಶಿಸಬೇಕು. ಮನೆಯಲ್ಲಿ ಗಾಳಿಯ ಸಂಚಾರ ಹೇಗಿರಬೇಕು ಇತ್ಯಾದಿ ಮಹತ್ವದ ವಿಚಾರಗಳನ್ನು ಈ ಹಿಂದೆಯೇ ಋಷಿಮುನಿಗಳು ಉಲ್ಲೇಖಿಸಿದ್ದರು. ಅದರ ಆಧಾರದ ಮೇಲೆ ವಾಸ್ತುಶಾಸ್ತ್ರ ನಿಂತಿದೆ ಎಂದು ಹೇಳಿದರು.





ವಾಸ್ತುವಿನಿಂದ ಸಕಾರಾತ್ಮಕ ಶಕ್ತಿ

ವಾಸ್ತುವಿಗೆ ತನ್ನದ ಆದ ವಿಶೇಷವಿದೆ. ಯಾವ ಮನೆಯಲ್ಲಿ ವಾಸ್ತು ಸಮರ್ಪಕವಾಗಿರುತ್ತದೋ ಆ ಮನೆಯಲ್ಲಿ ಸಕಾರಾತ್ಮಕ ಶಕ್ತಿ ನೆಲೆಸಿರುತ್ತದೆ ಎಂದು ವಾಸ್ತುತಜ್ಞ ಡಾ.ಅರುಳಾಲನ್ ತಿಳಿಸಿದರು. ವಾಸ್ತುವಿಗೆ ಪ್ರಾಚೀನ ಇತಿಹಾಸವಿದೆ. ಈ ಹಿಂದಿನ ಪುರಾತನ ದೇವಾಲಯಗಳ ಈಶಾನ್ಯ ದಿಕ್ಕಿನಲ್ಲಿ ಕಲ್ಯಾಣಿ ಇರುತ್ತಿತ್ತು. ಹಾಗೇ ಗ್ರಾಮಗಳ ಈಶಾನ್ಯ ದಿಕ್ಕಿನಲ್ಲಿಯೇ ಕೆರೆ ಕುಂಟೆಗಳನ್ನು ಕಾಣಬಹುದಾಗಿತ್ತು. ಇದು ಆ ಗ್ರಾಮದ ಸುಭಿಕ್ಷತೆಯ ಸಂಕೇತವಾಗಿತ್ತು. ಅದೇ ರೀತಿ ನಾವು ನಮ್ಮ ಮನೆ ನಿರ್ಮಾಣದಲ್ಲಿ ಈಶಾನ್ಯದಲ್ಲಿಯೆ ನೀರಿನ ಸಂಪ್ ನಿರ್ಮಾಣ ಮಾಡುವುದು ಔಚಿತ್ಯಪೂರ್ಣವಾಗಿದೆ ಎಂದು ಸಲಹೆ ನೀಡಿದರು. ನಮ್ಮ ಜೀವನದಲ್ಲಿ ಸಕಾರಾತ್ಮಕ ಶಕ್ತಿ ಪಡೆಯಲು ವಾಸ್ತುವಿನ ಆವಶ್ಯಕತೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಬಗ್ಗೆ ಅರಿವು ಮೂಡಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ನೆನಪಿನಾರ್ಥ ಕಾರ್ಯಕ್ರಮ

ದೊಡ್ಡಬೆಳವಂಗಲ ಹೋಬಳಿ ಕಾರೇಪುರದಲ್ಲಿನ ಪೂರ್ಣ ಮಾನಸ ಜ್ಯೋತಿಷ್ಯಾಲಯ ವ್ಯವಸ್ಥಾಪಕ ಡಾ.ಕೆ.ಗಿರೀಶ್ ಸಾರಥ್ಯದಲ್ಲಿ ಸುಕನ್ಯಾ ಮತ್ತು ಜ್ಯೋತಿಷಿ ಕೃಷ್ಣಮೂರ್ತಿ ಸವಿನೆನಪಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತಂತ್ರಜ್ಞಾನದೊಂದಿಗೆ ವಾಸ್ತುಶಾಸ್ತ್ರವೂ ಇರಲಿ: ಯುವಪೀಳಿಗೆ ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲಿ ಜತೆಗೆ ನಮ್ಮ ಸನಾತನವಾದ ವಾಸ್ತುಶಾಸ್ತ್ರದ ಬಗ್ಗೆಯೂ ಅರಿಯುವಂತಾಗಲಿ ಎಂದು ಬಿಎಸ್‌ವೈ ತಿಳಿಸಿದರು. ವಾಸ್' ಎಂದರೆ ಸಂಸ್ಕೃತದಲ್ಲಿ 'ವಾಸ' 'ಅಸ್ತು' ಎಂದರೆ ಶಕ್ತಿ ಕೊಡುವುದು ಎಂದರ್ಥ. ವಾಸ್ತು ಎಂದರೆ ಸುಖ-ಶಾಂತಿ-ಆರೋಗ್ಯದಿಂದ ಜೀವನ ನಡೆಸುವುದು ಎಂಬರ್ಥ ಕೊಡುತ್ತದೆ. ರಾಜ್ಯ ಜ್ಯೋತಿಷ್ಯರ ಹಾಗೂ ಜ್ಯೋತಿಷ್ಯ ಬೋಧನಾ ಸಂಸ್ಥೆಗಳ ಪ್ರಧಾನ ಕಾರ್ಯದರ್ಶಿ ಗಜೇಂದ್ರಬಾಬು, ಶಾಸಕ ಧೀರಜ್ ಮುನಿರಾಜು, ಮಾಜಿ ಶಾಸಕ ಆರ್.ಜಿ.ವೆಂಕಟಾಚಲಯ್ಯ, ಟಿ.ವೆಂಕಟರಮಣಯ್ಯ, ಜಿಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಕೆಎಂಎಸ್ ಮಾಜಿ ಅಧ್ಯಕ್ಷ ಮುನೇಗೌಡ, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಚುಂಚೇಗೌಡ, ಜ್ಯೋತಿಷಿಗಳಾದ ದಿನೇಶ್ ಗುರೂಜಿ, ಡಾ.ಹರೀದಾಸ್, ಡಾ.ಅನಂತ ರಾಘವನ್, ಕುಮಾರ್ ವಶಿಷ್ಠ ಮತ್ತಿತರರು ಇದ್ದರು.

ಪರಿಸರ ರಕ್ಷಣೆ ಎಲ್ಲರ ಹೊಣೆ



• **ತಾವರೆಕೆರೆ:** ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಗ್ರಾಮದಲ್ಲಿನ ಮನೆಗಳ ಅಕ್ಕಪಕ್ಕ ಸ್ವಚ್ಛತೆ ಕಾಪಾಡಿ ಕಸವನ್ನು ಗ್ರಾಮ ಪಂಚಾಯಿತಿಯ ಕಸದ ವಾಹನಗಳಿಗೆ ತಪ್ಪದೆ ಹಾಕಿ ಎಂದು ಹೊಸಕೋಟೆ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮುನಿಗಂಗಯ್ಯ ಹೇಳಿದರು.

ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮ ಪಂಚಾಯಿತಿಯಲ್ಲಿ ನಡೆದ ಸ್ವಚ್ಛ ಗ್ರಾಮ ಸುರಕ್ಷಿತ ಹವಾಮಾನ ವಿಶೇಷ ಗ್ರಾಮಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮೆಲ್ಲರ ಆರೋಗ್ಯದ ಹಿತದೃಷ್ಟಿಯಿಂದ ಬಯಲಿನಲ್ಲಿ ಮಲಮೂತ್ರ ವಿಸರ್ಜಿಸದೆ ಶೌಚಾಲಯಗಳನ್ನೇ ಬಳಸಿ. ಸದಾ ಸ್ವಚ್ಛವಾಗಿಡಿ. ಇದರಿಂದ ಸಾಂಕ್ರಾಮಿಕ ರೋಗಗಳು ಬರದೆ ತಡೆಯಬಹುದು. ನೀರು ವ್ಯರ್ಥ ಮಾಡದೆ ಮಿತವಾಗಿ ಬಳಸಿ, ನೀರನ್ನು ಸಂರಕ್ಷಿಸಿ ಗಿಡಗಳನ್ನು ಬೆಳೆಸಿ ಪರಿಸರ ಉಳಿಸಿ. ನಮ್ಮ ಗ್ರಾಮವನ್ನು ಸ್ವಚ್ಛ ಸುಂದರವಾಗಿಸುವ ಕರ್ತವ್ಯ ಪ್ರತಿ ನಾಗರಿಕರು ಮಾಡಬೇಕು ಎಂದರು. ಬಾಲ್ಯದಿಂದಲೆ ಪರಿಸರ ಸಂರಕ್ಷಣೆಯ ಕುರಿತು ಅರಿವು ಪ್ರತಿಯೊಬ್ಬರಲ್ಲಿ ಮೂಡಬೇಕು. ಒಂದು ಮರ ನಾಶವಾದರೆ ಅದರ ಬದಲಿಗೆ ಹತ್ತು ಸಸಿ ನೆಟ್ಟು ರಕ್ಷಣೆ ಮಾಡಬೇಕು. ಪ್ರತಿಯೊಬ್ಬರು ತಮ್ಮ ಮನೆಯಂಗಳದಲ್ಲಿ ಸಸಿ ನೆಡಬೇಕು ಇದರಿಂದ ಆರೋಗ್ಯವಂತರಾಗುವ ಲಾಭ ಸಿಗುತ್ತದೆ. ನಿಮಗೆ ಸಸಿ ಬೇಕಾದಲ್ಲಿ ಗ್ರಾಮ ಪಂಚಾಯಿತಿಗೆ ತಿಳಿಸಿ ಅರಣ್ಯ ಇಲಾಖೆ ವತಿಯಿಂದ ಸಸಿಗಳನ್ನು ತರಿಸಿಕೊಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಆಡಳಿತ ಅಧಿಕಾರಿ ಎಂ.ರೇಣುಕಾ ಪ್ರಸನ್ನ, ಕಂದಾಯ ಇಲಾಖೆ ಆರ್‌ಐ ಸತ್ಯನಾರಾಯಣ್, ಕಾರ್ಯದರ್ಶಿ ಶ್ಯಾಮ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಟಿ.ನಾಗರಾಜ್, ಎಸ್‌ಡಿಸಿ ಮೀನಾಕ್ಷಿ, ಕರವಸೂಲಿಗಾರ ರಾಜಣ್ಣ, ಬಚ್ಚೇಗೌಡ ಹಾಗೂ ಸಿಬ್ಬಂದಿ ವರ್ಗದವರಿದ್ದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ನಾರಾಯಣಸ್ವಾಮಿ ಕರೆ

ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ



ವಿಜಯಪುರ ಪಟ್ಟಣದಲ್ಲಿ ದೇವನಹಳ್ಳಿ ತಾಲ್ಲೂಕು ಬಿಜೆಪಿಯಿಂದ ಬೂತ್ ಮಟ್ಟದ ಕಾರ್ಯಾಗಾರ ಹಾಗೂ ಎಸ್.ಐ.ಆರ್ ಕುರಿತ ಸಂವಾದ ಕಾರ್ಯಕ್ರಮ ನಡೆಯಿತು.

> ಶೀಘ್ರದಲ್ಲಿಯೇ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳು ಬರಲಿದ್ದು, ಇನ್ನು ಕೇವಲ 17-18 ತಿಂಗಳುಗಳಲ್ಲಿ ವಿಧಾನಸಭಾ ಚುನಾವಣೆಗಳು ಎದುರಾಗಲಿವೆ. ಕಾರ್ಯಕರ್ತರು ಈಗಿನಿಂದಲೇ ಸನ್ನದ್ಧರಾಗಬೇಕು.
>
> ■ ನೀಲೇರಿ ಅಂಬರೀಶ್ ಗೌಡ, ಬಿಜೆಪಿ ತಾಲೂಕು ಅಧ್ಯಕ್ಷ

• **ವಿಜಯಪುರ:** ಯಾವುದೇ ಒಂದು ರಾಜಕೀಯ ಪಕ್ಷ ಚುನಾವಣೆಯಲ್ಲಿ ಗೆಲುವು ಸಾಧಿಸಬೇಕಾದಲ್ಲಿ ಬೂತ್ ಮಟ್ಟದಲ್ಲಿ ಸಂಘಟನೆಯಾಗಬೇಕಿದೆ. ಬೂತ್ ಗೆದ್ದರೆ ಪಕ್ಷ ಗೆಲ್ಲಲು ಸಾಧ್ಯ, ಬೂತ್ ಗೆಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಇಲ್ಲಿನ ಶಂಕರ ಸದನ ಸಮುದಾಯ ಭವನದಲ್ಲಿ ದೇವನಹಳ್ಳಿ ತಾಲೂಕು ಬಿಜೆಪಿ ಪಕ್ಷದ ವತಿಯಿಂದ ಏರ್ಪಡಿಸಲಾಗಿದ್ದ ಬೂತ್ ಮಟ್ಟದ ಕಾರ್ಯಾಗಾರ ಹಾಗೂ ಎಸ್.ಐ.ಆರ್ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಮತದಾರರ ಪಟ್ಟಿ ಪರಿಷ್ಕರಣೆ ಜಾರಿಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಬೂತ್ ಮಟ್ಟದ ಬಿಎಲ್‌ಎ-2 ಕಾರ್ಯಕರ್ತರ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಬೇಕು. ಹೊರಗಿನಿಂದ ಬಂದವರು, ಎರಡ್ಮೂರು ಕಡೆ ಮತದಾನದ ಹಕ್ಕು ಹೊಂದಿರುವವರನ್ನು ಪತ್ತೆ ಹಚ್ಚಬೇಕು ಎಂದರು. ಈಗಾಗಲೇ ಬಿ.ಎಲ್.ಎ-2 ಕಾರ್ಯಕರ್ತರಿಗೆ ತಲುಪಿರುವ 2002 ಹಾಗೂ 2025 ರ ಮತ ಪಟ್ಟಿಯನ್ನು ಪರಿಶೀಲಿಸಿ, ಅನಧಿಕೃತ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಕ್ರಮ ಕೈಗೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಆನಂದ ಗುರೂಜಿ ಅವರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಾಜಿ ಶಾಸಕರಾದ ಜಿ.ಚಂದ್ರಣ್ಣ, ಬೆಂ.ಗ್ರಾ. ವಿಭಾಗದ ಪ್ರಭಾರಿ ಬ್ಯಾಟರಂಗೇಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಮಕೃಷ್ಣಪ್ಪ, ದೇವನಹಳ್ಳಿ ಮಂಡಲ ಬಿಜೆಪಿ ಕಾರ್ಯದರ್ಶಿ ಅನಿಲ್ ಕುಮಾರ್, ವಿಜಯಪುರ ಟೌನ್ ಬಿಜೆಪಿ ಅಧ್ಯಕ್ಷ ವೆಂಕಟೇಶ ಪ್ರಭು, ಜಿಲ್ಲಾ ಒಬಿಸಿ ಮೋರ್ಚಾ ಅಧ್ಯಕ್ಷ ಬಿ.ಕೆ.ನಾರಾಯಣಸ್ವಾಮಿ, ರವಿಕುಮಾರ್ ಇದ್ದರು.

ಚಂದಾಪುರ ಪುರಸಭೆಗೆ ಜ್ಯೋತಿ ಜಗದೀಶ್ ಆಚಾರಿ ನೂತನ ಅಧ್ಯಕ್ಷೆ



• **ಆನೇಕಲ್:** ತಾಲೂಕಿನ ಚಂದಾಪುರ ಪುರಸಭೆಯ ನೂತನ ಅಧ್ಯಕ್ಷರಾಗಿ ಜ್ಯೋತಿ ಜಗದೀಶ್ ಆಚಾರಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ವೇಳೆ ಬಿಜೆಪಿ ಮಂಡಲ ಅಧ್ಯಕ್ಷ ಎಸ್‌ಆರ್‌ಟಿ ಅಶೋಕ್‌ರೆಡ್ಡಿ ಮಾತನಾಡಿ, ಶಿಸ್ತಿನ ಪಕ್ಷವಾಗಿರುವ ಬಿಜೆಪಿಯಲ್ಲಿ ಕಾರ್ಯಕರ್ತರಿಗೆ ಹೆಚ್ಚಿನ ಮಾನ್ಯತೆ ಇದೆ. ಹಂತ ಹಂತವಾಗಿ ಎಲ್ಲ ಕಾರ್ಯಕರ್ತರಿಗೆ ಅವಕಾಶಗಳನ್ನು ದೊರಕಿಸಿಕೊಡಲಾಗುತ್ತಿದೆ ಎಂದರು. ನೂತನ ಅಧ್ಯಕ್ಷೆ ಜ್ಯೋತಿ ಜಗದೀಶ್ ಮಾತನಾಡಿ, ಚಂದಾಪುರ ಪುರಸಭೆಗೆ ಅಧ್ಯಕ್ಷೆಯಾಗಿ ಆಯ್ಕೆಯಾಗಿರುವುದರಿಂದ ಜವಾಬ್ದಾರಿ ಹೆಚ್ಚಾಗಿದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ತಿಳಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಹುಲ್ಲಹಳ್ಳಿ ಶ್ರೀನಿವಾಸ್, ಹಾಗೂ ಬಿಜೆಪಿ ಮುಖಂಡರಾದ ನಾರಾಯಣ ರೆಡ್ಡಿ, ಚಂದಾಪುರ ರಮೇಶ್‌ರೆಡ್ಡಿ, ಜಯಪ್ರಕಾಶ್, ಬಿಬಿಬಿ ಮುನಿರೆಡ್ಡಿ, ವೇಣು, ಪುರಸಭೆ ಮಾಜಿ ಅಧ್ಯಕ್ಷೆ ಶಾರದಾ ವರದರಾಜು, ಸದಸ್ಯರಾದ ಸೋಮಶೇಖರ್ ರೆಡ್ಡಿ, ಮುರಳಿ, ವೆಂಕಟಸ್ವಾಮಿ, ಕೃಷ್ಣರೆಡ್ಡಿ, ಸೌಮ್ಯಾ, ಸುಧಾಕರ್ ರೆಡ್ಡಿ ಸೇರಿದಂತೆ ಹಲವು ಮುಖಂಡರು ನೂತನ ಅಧ್ಯಕ್ಷರಿಗೆ ಶುಭಾಶಯ ಕೋರಿದರು.

ಅಂಬೇಡ್ಕರ್ ಸಾಧನೆ ಎಲ್ಲರಿಗೂ ಮಾದರಿ

• **ದೊಡ್ಡಬಳ್ಳಾಪುರ:** ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ, ಹೋರಾಟ, ಪರಿಶ್ರಮ ಮತ್ತು ಸಾಧನೆಯು ಎಲ್ಲರಿಗೂ ಮಾದರಿಯಾಗಿದೆ ಎಂದು ಅಸ್ಸಾಂ ವಿಶ್ವವಿದ್ಯಾಲ ಯದ ಪ್ರಾಧ್ಯಾಪಕ ಡಾ.ಶಶಿ ಕುಮಾರ್ ತಿಳಿಸಿದರು.

ಅವರು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಮಾದರ ಮಹಾಸಭಾ ಮತ್ತು ವಿಶ್ವಜ್ಞಾನಿ ಸೇವಾ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ಪ್ರೇರಣಾ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಮತ್ತು ಉದ್ಯೋಗ ಅಗತ್ಯವಾಗಿರುತ್ತದೆ. ವಿದ್ಯಾವಂತರು ತಮ್ಮ ಸಮುದಾಯಗಳ ಹಿತ ಕಾಪಾಡುವ ಕಡೆಗೆ ಆದ್ಯತೆ ನೀಡಬೇಕು. ತಾವು ಪಡೆದ ಜ್ಞಾನವನ್ನು ಸಮಾಜದ ಒಳಿತಿಗಾಗಿ, ವಿಶೇಷವಾಗಿ ತಳಸಮುದಾಯದವರ ಉದ್ಧಾರಕ್ಕಾಗಿ ಬಳಸಬೇಕು. ಪ್ರತಿಯೊಬ್ಬ ಸುಶಿಕ್ಷಿತರು ನೈತಿಕ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಮರೆಯಬಾರದು ಎಂದರು. ಪ್ರೇರಣಾ ಉಪನ್ಯಾಸ ನೀಡಿದ ಶಿಕ್ಷಣ ಇಲಾಖೆ ಸಂಪನ್ಮೂಲ ವ್ಯಕ್ತಿ ಕೆ.ಆರ್.ಚನ್ನಕೇಶವಮೂರ್ತಿ, ಯಶಸ್ಸು ಮತ್ತು ಸಾಧನೆಗೆ ಪರಿಶ್ರಮವೇ ಮೂಲಾಧಾರ. ಕಠಿಣ ಪರಿಶ್ರಮ, ಸತತ ಪ್ರಯತ್ನ ಮತ್ತು ಅಚಲವಾದ ಗುರಿಯಿದ್ದರೆ ಮಾತ್ರ, ಜೀವನದಲ್ಲಿ ಯಾವುದೇ ಉನ್ನತ ಶಿಖರವನ್ನು ತಲುಪಲು ಸಾಧ್ಯ. ಅಚಲವಾದ ಆತ್ಮವಿಶ್ವಾಸದಿಂದ ಸಾಧನೆಗೆ ಅಡಿಯಾಗುವ ಯಾವುದೇ ಕಷ್ಟದ ಪರಿಸ್ಥಿತಿ ಯನ್ನೂ ಮೆಟ್ಟಿ ನಿಲ್ಲಬಹುದು. ವಿದ್ಯೆಯೊಂದಿಗೆ ಮಾನವೀಯತೆಯನ್ನು ಮೈಗೂಡಿಸಿಕೊಳ್ಳಬೇಕೆಂದರು.



ಪ್ರತಿಭಾ ಪುರಸ್ಕಾರ

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ನಡೆಯಿತು.

ಕಾರ್ಯಕ್ರಮದಲ್ಲಿ ಆನಂದ ಬುದ್ಧ ವಿಹಾರದ ಜ್ಞಾನಲೋಕ ಭಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಂಜನಪ್ಪ, ನಿರ್ದೇಶಕ ಎಚ್.ವೆಂಕಟೇಶ್, ಸಮಾಜಸೇವಕ ಪುರುಷೋತ್ತಮ್, ವಿಶ್ವಜ್ಞಾನಿ ಸೇವಾ ಟ್ರಸ್ಟ್ ಗೌರವ ಅಧ್ಯಕ್ಷ ರಾಮಣ್ಣ, ಅಧ್ಯಕ್ಷ ನಾರಾಯಣಪ್ಪ, ಕಾರ್ಯದರ್ಶಿಗಳಾದ ರಾಜೇಂದ್ರ, ಎಂ.ನಾರಾಯಣಪ್ಪ, ಲೆಕ್ಕಪರಿಶೋಧಕ ಜಯರಾಮ್, ಕರ್ನಾಟಕ ಮಾದರ ಮಹಾ ಸಭಾ ಬೆಂ.ಗ್ರಾ.ಜಿಲ್ಲಾಧ್ಯಕ್ಷ ಸುಬ್ಬರಾಜು, ಕಾರ್ಯದರ್ಶಿ ಬಚ್ಚಹಳ್ಳಿ ನಾಗರಾಜು, ರಾಜ್ಯ ಸಮಿತಿ ಸದಸ್ಯ ದೊಡ್ಡ ತುಮಕೂರು ರಾಮಕೃಷ್ಣ, ಜಿಲ್ಲಾ ಸಮಿತಿ ಸದಸ್ಯ ಆರ್.ಶಿವಣ್ಣ, ದೊಡ್ಡಬಳ್ಳಾಪುರ ತಾಲ್ಲೂಕು ಅಧ್ಯಕ್ಷ ತಳಗವಾರ ನಾಗರಾಜ್, ಉಪಾಧ್ಯಕ್ಷ ಟಿ.ಡಿ.ಮುನಿಯಪ್ಪ, ಕಾರ್ಯದರ್ಶಿ ತೂಬಗೆರೆ ವೆಂಕಟೇಶ್, ಪದಾಧಿಕಾರಿಗಳಾದ ದೇವರಾಜು, ಅಪ್ಪಕಾರನಹಳ್ಳಿ ಹನುಮಯ್ಯ, ಮಾದರ ಸಭಾ ದೊಡ್ಡ ತುಮಕೂರು ವೆಂಕಟೇಶ್, ಹಸನಘಟ್ಟ ಮುನಿಯಪ್ಪ, ಮುತ್ತುರಾಜು, ಕುರುವಿಗೆರೆ ಮುನಿರಾಜು, ಚಿಕ್ಕನರಸಪ್ಪ, ವಕೀಲ ಮುನಿರಾಜು, ಮುನಿಯಪ್ಪ, ಹರ್ಷ ಮುಂತಾದವರು ಭಾಗವಹಿಸಿದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಚುರುಕುಗೊಂಡ ಕೃಷಿ ಚಟುವಟಿಕೆ | ಇಳುವರಿ ಹೆಚ್ಚಿಸಲು ರಸಗೊಬ್ಬರ ಪೂರಕ

ಕೃಷಿ ಚಟುವಟಿಕೆಯಲ್ಲಿ ಸಂಯುಕ್ತ ರಸಗೊಬ್ಬರ ಬಳಕೆಗೆ ಸಲಹೆ

• **ದೊಡ್ಡಬಳ್ಳಾಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿಚಟುವಟಿಕೆಗಳು ಬಿರುಸುಗೊಂಡಿದ್ದು, ರೈತರು ಡಿಎಪಿ ರಸಗೊಬ್ಬರ ಬದಲಿಗೆ ಸಂಯುಕ್ತ ರಸಗೊಬ್ಬರ ಬಳಕೆ ಮಾಡಲು ಕೃಷಿ ಇಲಾಖೆ ಸಲಹೆ ನೀಡಿದೆ.

ಸಸ್ಯಗಳ ಬೆಳವಣಿಗೆಗೆ 17 ಪೋಷಕಾಂಶಗಳ ಅಗತ್ಯವಿದೆ. ಅವುಗಳಲ್ಲಿ ಗಾಳಿ ಮತ್ತು ನೀರಿನ ಮೂಲಕ ಇಂಗಾಲ, ಜಲಜನಕ ಮತ್ತು ಆಮ್ಲಜನಕವು ಸ್ವಾಭಾವಿಕವಾಗಿ ದೊರೆಯಲಿದ್ದು, ಉಳಿದ 14 ಪೋಷಕಾಂಶಗಳಿಗೆ ಸಂಯುಕ್ತ ರಸಗೊಬ್ಬರ ಬಳಕೆ ಮಾಡಬೇಕು ಎಂದು ಮಾಹಿತಿ ನೀಡಿದೆ.

ಸಾರಜನಕ, ರಂಜಕ, ಪೊಟ್ಯಾಷ್, ಕ್ಯಾಲ್ಸಿಯಂ, ಮೆಗ್ನೀಷಿಯಂ, ಗಂಧಕ, ಕಬ್ಬಿಣ, ಜಿಂಕ್, ಬೋರಾನ್, ತಾಮ್ರ, ಮ್ಯಾಂಗನೀಸ್, ಮಾಲಿಬ್ಡಿನಂ ಕ್ಲೋರಿನ್ ಹಾಗೂ ನಿಕ್ಕಲ್ ಅಗತ್ಯವಿದ್ದು, ಇವುಗಳಲ್ಲಿ ಯಾವುದೇ ಒಂದು ಪೋಷಕಾಂಶದ ಕೊರತೆಯಾದರೂ ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಪರಿಣಾಮ ಬೀರಲಿದ್ದು, ಇಳುವರಿ ಕುಂಠಿತವಾಗುತ್ತದೆ. ಆದ್ದರಿಂದ ಬಿತ್ತನೆಗೆ ಕೊಟ್ಟಿಗೆ ಗೊಬ್ಬರ/ಹಸಿರೆಲೆ ಗೊಬ್ಬರ/ಹಿಂಡಿ ಇತ್ಯಾದಿ ಸಾವಯವ ಗೊಬ್ಬರ ಬಳಕೆ ಮಾಡಬೇಕು. ಇದರಿಂದ ಇಳುವರಿ ಹೆಚ್ಚಾಗಲಿದೆ.

ಬಿತ್ತನೆಸಮಯದಲ್ಲಿಬೆಳೆಗಳಿಗೆಶಿಫಾರಸ್ಸಿನಂತೆಸಮತೋಲನಾತ್ಮಕ ರಸಗೊಬ್ಬರ ಬಳಸುವುದರಿಂದ ಸರಿದೂಗಿಸಬಹುದು. ಇದಕ್ಕಾಗಿ ರೈತರು ಕೇವಲ ಒಂದೇ ಸಂಸ್ಥೆಯ ಅಥವಾ ಒಂದೇ ವಿಧದ ರಸಗೊಬ್ಬರಕ್ಕೆ ಆದ್ಯತೆ ನೀಡದೆ. ಮಾರುಕಟ್ಟೆಯಲ್ಲಿ ದೊರೆಯುವ ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಇತರೆ ಸಂಯುಕ್ತ ರಸಗೊಬ್ಬರಗಳಾದ 15:15:15, 10:26:26, 12:32:16, 22:22:11, 17:17:17, 14:28:14, 19:19:19, 20:10:10, 14:35:14 ಸಹ ಬಳಸಬಹುದು. ಬಿತ್ತನೆ ನಂತರ ನ್ಯಾನೋ ಡಿಎಪಿ ಮತ್ತು ನ್ಯಾನೋ ಯೂರಿಯಾ ಪ್ಲಸ್ ಸಹ ಅವಶ್ಯಕತೆಗೆ ಅನುಗುಣ ವಾಗಿ ಸಿಂಪರಣೆಯಾಗಿ ಬಳಸಬಹುದು ಎಂದು ತಿಳಿಸಿದೆ.





ಸಾಮಾನ್ಯವಾಗಿ 1 ಹೆಕ್ಟೇರ್ ರಾಗಿ ಬೆಳೆ ಬೆಳೆಯಲು ಯೂರಿಯಾ ಮತ್ತು ಡಿಎಪಿ ಬಳಸಿದರೆ 1,630 ರೂ. ಬೇಸಾಯ ವೆಚ್ಚವಾಗುತ್ತದೆ. ರೈತರು ಯೂರಿಯಾ ಹಾಗೂ ಡಿಎಪಿಯನ್ನು ಹೆಚ್ಚಾಗಿ ಬಳಸುತ್ತಿದ್ದು, ಇವುಗಳಲ್ಲಿ ಸಾರಜನಕ ಮತ್ತು ರಂಜಕದ ಅಂಶ ಮಾತ್ರವಿರುತ್ತದೆ. ಆದರೆ ಬೆಳೆಗಳಿಗೆ ರೋಗ ನಿರೋಧಕ ಶಕ್ತಿ ನೀಡಿ ಕಾಳಿನ ತೂಕ ಹೆಚ್ಚಿಸಲು ಅತ್ಯಂತ ಅವಶ್ಯಕವಾಗಿರುವ ಪೊಟ್ಯಾಷ್ ಲಭ್ಯವಿರುವುದಿಲ್ಲ, ಪ್ರತ್ಯೇಕವಾಗಿ ಪೊಟ್ಯಾಷ್ ಪೋಷಕಾಂಶ ಸೇರಿಸಲು 33 ಕೆ.ಜಿ ಎಂಒಪಿ ಬೇಕಾಗುತ್ತದೆ. 33 ಕೆಜಿ ಎಂಒಪಿಗೆ 1,132 ರೂ. ವೆಚ್ಚವಾಗುತ್ತದೆ. ಒಟ್ಟಾರೆ ಪ್ರತಿ ಹೆಕ್ಟೇರಿಗೆ 2,761 ರೂ. ವೆಚ್ಚವಾಗುತ್ತದೆ.

ಗುಣಮಟ್ಟ ಸುಧಾರಣೆಗೆ ಸಹಕಾರಿ

ಇತರೆ ಸಂಯುಕ್ತ ರಸಗೊಬ್ಬರಗಳಾದ 14:35:14, 11:30:14, 10:26:26 ಬಳಸಿದ್ದಲ್ಲಿ ಎಲ್ಲಾ ಎನ್.ಪಿ.ಕೆ ಪೋಷಕಾಂಶಗಳು ಲಭ್ಯವಿದೆ. ಪ್ರತಿ ಹೆಕ್ಟೇರಿಗೆ 2,500 ರೂ. ಗಿಂತ ಕಡಿಮೆ ವೆಚ್ಚವಾಗುತ್ತದೆ. ಸಂಯುಕ್ತ ರಸಗೊಬ್ಬರಗಳನ್ನು ಬಳಸುವುದರಿಂದ ಸಸಿಗಳಿಗೆ ಅವಶ್ಯವಿರುವ ಪೊಟ್ಯಾಷ್ ಪೋಷಕಾಂಶವು ಲಭ್ಯವಾಗಿ ಸಸಿಗಳಲ್ಲಿ ಕಿಣ್ವಗಳನ್ನು ಸಕ್ರಿಯಗೊಳಿಸಿ ನೀರು ಮತ್ತು ಪೋಷಕಾಂಶಗಳ ಸಾಗಣೆಗೆ ಸಹಾಯ ಮಾಡುವುದಲ್ಲದೇ ಬರ ಪರಿಸ್ಥಿತಿಯಲ್ಲೂ ಬೆಳೆಗಳನ್ನು ಹಸಿರಾಗಿಡಲು ಸಹಾಯ ಮಾಡುತ್ತದೆ ಹಾಗೂ ಬೆಳೆ ಉತ್ಪಾದಕತೆ, ಗುಣಮಟ್ಟ ಸುಧಾರಿಸಲು ಕಾರಣವಾಗುತ್ತದೆ. ಆದ್ದರಿಂದ ಜಿಲ್ಲೆಯ ಪ್ರಮುಖವಾದ ರಾಗಿ ಬೆಳೆಯ ಬೇಸಾಯ ವೆಚ್ಚ ಕಡಿಮೆ ಮಾಡಲು ಹಾಗೂ ಮಣ್ಣಿಗೆ ರಂಜಕದ ಪೋಷಕಾಂಶ ಸೇರಿಸುವ ಉದ್ದೇಶದಿಂದ ಡಿಎಪಿ ರಸಗೊಬ್ಬರದ ಬದಲಾಗಿ ಅಥವಾ ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಬಳಸಬೇಕು ಎಂದು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಸೂರಜ್ ಹೆಗ್ಡೆಗೆ ಭಾವಪೂರ್ಣ ಶ್ರದ್ಧಾಂಜಲಿ



ಮಾಗಡಿ: ರಾಜ್ಯದ ಹಿಂದುಳಿದ ವರ್ಗಗಳ ಮಾಜಿ ಮುಖ್ಯಮಂತ್ರಿ ದಿ. ಡಿ.ದೇವರಾಜು ಅರಸು ಅವರ ಮೊಮ್ಮಗ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗ್ಡೆಯವರ ಅಕಾಲಿಕ ನಿಧನ ಹಿನ್ನೆಲೆಯಲ್ಲಿ ತಾಲೂಕು ಪಂಚಾಯಿತಿ ಆವರಣದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು. ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕಲ್ಕರೆ ಶಿವಣ್ಣ ಮಾತನಾಡಿ, ಸೂರಜ್ ಹೆಗ್ಡೆ ಅವರ ನಿಧನವು ಇಡೀ ರಾಜ್ಯಕ್ಕೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ ಅವರು ಅತ್ಯಂತ ಸೌಮ್ಯಮೂರ್ತಿ ಹಾಗೂ ಶಾಂತ ಸ್ವಭಾವದ ನಾಯಕರಾಗಿದ್ದರು ಇತ್ತೀಚೆಗಷ್ಟೇ ನಡೆದ ಕನಕೋತ್ಸವದ ಸಂದರ್ಭದಲ್ಲಿ ನಾವು ಒಟ್ಟಿಗೆ ಭಾಗವಹಿಸಿ, ಸಿಎಂ ಡಿ.ಕೆ. ಶಿವಕುಮಾರ್ ಮತ್ತು ಬಮೂಲ್ ಅಧ್ಯಕ್ಷರಾದ ಡಿ.ಕೆ.ಸುರೇಶ್ ಅವರ ಸಮ್ಮುಖದಲ್ಲಿ ವಿಚಾರಗಳನ್ನು ಹಂಚಿಕೊಂಡಿದ್ದೆವು ಇಷ್ಟು ಬೇಗ ಅವರು ನಮ್ಮನ್ನು ಅಗಲುತ್ತಾರೆ ಎಂದು ಯಾರು ಊಹಿಸಿರಲಿಲ್ಲ ಎಂದು ತೀವ್ರ ಸಂತಾಪ ವ್ಯಕ್ತಪಡಿಸಿದರು. ದೇವರಾಜು ಅರಸು ಅವರು ರಾಜ್ಯಕ್ಕೆ ನೀಡಿದ ಕೊಡುಗೆಗಳಾದ ಭೂಸುಧಾರಣೆ, ಜೀತಪದ್ಧತಿ ನಿರ್ಮೂಲನೆ ಮತ್ತು ಬಡವರಿಗೆ ನಿವೇಶನ ಹಂಚಿಕೆ ಮಾಡಿದ ಐತಿಹಾಸಿಕ ಕಾರ್ಯಗಳನ್ನು ನೆನೆದ ಶಿವಣ್ಣ ಅವರು, ಸೂರಜ್ ಹೆಗ್ಡೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿದರು. ತಾಲ್ಲೂಕು ಪಂಚಾಯಿತಿಯಲ್ಲಿ ಸೂರಜ್ ಹೆಗ್ಡೆಗೆ ವಿಶೇಷ ಪೂಜೆ ಸಲ್ಲಿಸಿ ಒಂದು ನಿಮಿಷಗಳ ಕಾಲ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಅರ್ಪಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಇಒ ಜೈಪಾಲ್, ಜಿಲ್ಲಾ ಪಂಚಾಯಿತಿ ಆರ್‌ಡಿಪಿಆರ್ ಎಂಜಿನಿಯರ್ ಚರಣ್, ಕಾಂಗ್ರೆಸ್ ಮುಖಂಡರಾದ ಮಾದಿಗೊಂಡನಹಳ್ಳಿ ವೆಂಕಟೇಶ್, ಗಂಗಮಾರಯ್ಯ, ಕೆಂಪಸಾಗರದ ಯುವ ಮುಖಂಡ ಮಧುಸೂದನ್, ತಿಮ್ಮಯ್ಯ, ರಾಜು, ಗಣೇಶ್, ಪಂಚಾಯಿತಿಯ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಪರಿಸರ ದಿನಾಚರಣೆ: ಗಿಡ ನೆಡುವ ಕಾರ್ಯಕ್ರಮ

ಚನ್ನರಾಯಪಟ್ಟಣ: ತಾಲೂಕಿನ ನುಗ್ಗೇಹಳ್ಳಿಯ ಪ್ರತಿಷ್ಠಿತ ಗೋಕುಲ ವಿದ್ಯಾ ಸಂಸ್ಥೆ ಕಳೆದ 30 ವರ್ಷಗಳಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಸಮಾಜದ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಸಂಸ್ಥೆಯು 30 ವರ್ಷಗಳ ಯಶಸ್ವಿ ಪಯಣದ ಅಂಗವಾಗಿ ಹಾಗೂ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಿಶೇಷ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ನುಗ್ಗೇಹಳ್ಳಿ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಗೋಕುಲ ವಿದ್ಯಾ ಸಂಸ್ಥೆಯ ನಿರ್ದೇಶಕರಾದ ಪೃಥ್ವಿಯಾದವ್, ಮುಖ್ಯ ಶಿಕ್ಷಕರಾದ ವಿನುತಯಾದವ್, ಸಹಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಡಾ.ಸುಹಾಸ್, ಡಾ.ನವೀನ್, ಡಾ.ರಮ್ಯ, ನಾಗೇಂದ್ರ ಭಾಗವಹಿಸಿ ಸಸಿಗಳನ್ನು ವಿತರಿಸಿ ಗಿಡಗಳನ್ನು ನೆಟ್ಟರು. ಅದೇ ರೀತಿ ನುಗ್ಗೇಹಳ್ಳಿ ಪೊಲೀಸ್ ಠಾಣೆ, ನುಗ್ಗೇಹಳ್ಳಿ ಪಂಚಾಯಿತಿ, ಜಂಬೂರು ಗ್ರಾಮ ಪಂಚಾಯಿತಿ, ಕೆನರಾ ಬ್ಯಾಂಕ್ ಹಾಗೂ ನುಗ್ಗೇಹಳ್ಳಿ ಕೃಷಿ ಇಲಾಖೆ ಆವರಣಗಳಲ್ಲಿಯೂ ಸಸಿಗಳನ್ನು ವಿತರಿಸಿ ಗಿಡಗಳನ್ನು ನೆಡಲಾಯಿತು.

ಹೈಕೋರ್ಟ್: ಅರ್ಜಿ ವಜಾ, 10 ಸಾವಿರ ರೂ.ದಂಡ

ಬೆಂಗಳೂರು: ಮಹಾತ್ಮ ಗಾಂಧೀಜಿ ಹತ್ಯೆಯ ನಂತರ 17 ವರ್ಷಗಳ ಕಾಲ ಕೇಂದ್ರ ಸರ್ಕಾರವು ನ್ಯಾಯಾಂಗ ತನಿಖಾ ಆಯೋಗವನ್ನು ಏಕೆ ರಚಿಸಲಿಲ್ಲ ಎಂಬುದನ್ನು ಪತ್ತೆ ಹಚ್ಚಲು ಜಂಟಿ ಸಂಸದೀಯ ಸಮಿತಿ ರಚಿಸುವಂತೆ ಕೋರಿ ಜಾಗೃತ ಕರ್ನಾಟಕ, ಜಾಗೃತ ಭಾರತ ಸಂಸ್ಥೆಯ ಅಧ್ಯಕ್ಷ ಕೆ.ಎನ್. ಮಂಜುನಾಥ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಳಿಸಿದೆ ಜತೆಗೆ ಹತ್ತು ಸಾವಿರ ರೂ.ದಂಡ ಹೈಕೋರ್ಟ್ ವಿಧಿಸಿದೆ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಯಾವುದೇ ಸಾರ್ವಜನಿಕ ಹಿತ ಕಾಣುತ್ತಿಲ್ಲ, ನ್ಯಾಯಾಂಗದ ಅಮೂಲ್ಯ ಸಮಯವನ್ನು ಪೋಲು ಮಾಡಲು ಸಲ್ಲಿಸಿರುವ ಇದು ಪ್ರಚಾರದ ಅರ್ಜಿಯಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ. ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠ ಹೇಳಿದೆ. ವಿಚಾರಣೆ ವೇಳೆ ಅರ್ಜಿಯನ್ನು ಪರಿಶೀಲಿಸಿದ ಪೀಠವು ಈ ಹಿಂದೆಯೂ ಇದೇ ಮನವಿ ಮಾಡಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಇದೀಗ ಮತ್ತೆ ಅದೇ ಮನವಿಯೊಂದಿಗೆ ಅರ್ಜಿ ಸಲ್ಲಿಸಿದ್ದೀರಿ. ಅರ್ಜಿಯಲ್ಲಿ ಯಾವುದೇ ರೀತಿಯ ಸಾರ್ವಜನಿಕ ಹಿತಾಸಕ್ತಿ ಅಡಗಿಲ್ಲ, ನಿಮ್ಮ ನಡೆ ನ್ಯಾಯಾಂಗ ವ್ಯವಸ್ಥೆಯ ಅಮೂಲ್ಯ ಸಮಯವನ್ನು ವ್ಯರ್ಥ ಮಾಡುವ ಪ್ರಕ್ರಿಯೆಯಾಗಿದೆ ಎಂದು ಕಿಡಿಕಾರಿತು. ಇದನ್ನು ತಿರಸ್ಕರಿಸಿದ ಪೀಠವು ಅರ್ಜಿವಜಾಗೊಳಿಸಿ 10 ಸಾವಿರ ದಂಡ ವಿಧಿಸಿ ಆದೇಶಿಸಿತು.

ರೇಷ್ಮೆ ಮಾರುಕಟ್ಟೆ ದುರವಸ್ಥೆ ಕುರಿತ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್

ದುಸ್ಥಿತಿ ಕಂಡು ಸಾರ್ವಜನಿಕರ ಆಕ್ರೋಶ

ಎಸ್.ರುದ್ರೇಶ್ವರ

ರಾಮನಗರ: ನಗರದ ರೇಷ್ಮೆ ಮಾರುಕಟ್ಟೆಯ ದುರವಸ್ಥೆಯನ್ನು ಬಿಚ್ಚಿಡುವ ದೃಶ್ಯವನ್ನು ಖುದ್ದು ರೈತರೊಬ್ಬರೇ ತಮ್ಮ ಮೊಬೈಲ್ ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದು, ಅಲ್ಲಿನ ದುಸ್ಥಿತಿಯನ್ನು ಕಂಡು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಷ್ಠಿತ ರಾಮನಗರ ರೇಷ್ಮೆಗೂಡಿನ ಮಾರುಕಟ್ಟೆಗೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಮಾತ್ರವಲ್ಲ, ಹೊರರಾಜ್ಯಗಳಿಂದ ಸಹ ಗೂಡುಗಳು ಬರುತ್ತವೆ. ನಿತ್ಯ ಬರೋಬ್ಬರಿ 40-50 ಮೆಟ್ರಿಕ್ ಟನ್‌ಗಳು ಬರುತ್ತಿದ್ದು, 500-600 ಜನ ರೈತರು ಪ್ರತಿದಿನ ಈ ಮಾರುಕಟ್ಟೆಗೆ ಭೇಟಿ ನೀಡುತ್ತಾರೆ. ಇಷ್ಟೆಲ್ಲಾ ವಹಿವಾಟು ನಡೆಸುವ ರೇಷ್ಮೆ ಮಾರುಕಟ್ಟೆಯಲ್ಲಿ ಅತ್ಯಂತ ಹೈಟೆಕ್ ಮಾದರಿಯಲ್ಲಿ ನಿರ್ವಹಣೆಯಾಗಬೇಕಿತ್ತು. ಆದರೆ ಇಲ್ಲಿ ಆಗುತ್ತಿರುವುದೇ ಬೇರೆ.

ದೂರದ ಊರುಗಳಿಂದ ರಾತ್ರಿಯಿಡೀ ಪ್ರಯಾಣ ಬೆಳೆಸಿ, ತಾವು ಕಷ್ಟಪಟ್ಟು ಬೆಳೆದ ರೇಷ್ಮೆ ಗೂಡನ್ನು ಮಾರಾಟ ಮಾಡಲು ರೈತರು ಇಲ್ಲಿಗೆ ಬರುತ್ತಾರೆ. ಆದರೆ ಮುಂಜಾನೆ ಎದ್ದು ಮುಖ ತೊಳೆಯಲು ಹೋದರೆ ಅಲ್ಲಿ ಅವರನ್ನು ಗಬ್ಬೆದ್ದು ನಾರುತ್ತಿರುವ ವಾಷ್ ಬೇಸಿನ್‌ಗಳು ಸ್ವಾಗತ ಕೋರುತ್ತವೆ. ಕಸ, ಉಗುಳು, ಪಾಚಿ ಕಟ್ಟಿ ನಿಂತಿರುವ ಇಲ್ಲಿ ನೀರು ಕುಡಿಯುವುದಿರಲಿ, ನಿಲ್ಲಲೂ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ವಚ್ಛತೆಯ ಹೆಸರೇ ಇಲ್ಲದಂತಾಗಿದೆ. ಈ ವಾತಾವರಣವನ್ನು ಕಣ್ಣಿಗೆ ಕಟ್ಟುವಂತೆ ವಿಡಿಯೋ ಮಾಡಿರುವ ರೈತ, ಆ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿಕೊಂಡಿದ್ದಾರೆ. ರೈತರೊಬ್ಬರು ಮಾಡಿರುವ ವಿಡಿಯೋದಲ್ಲಿ ರಾಮನಗರ ರೇಷ್ಮೆ ಮಾರುಕಟ್ಟೆ ಆವರಣದಲ್ಲಿ ರೈತರಿಗೆ ಮುಖ ತೊಳೆಯಲು ಸಲುವಾಗಿ ಅಳವಡಿಸಲಾಗಿರುವ ವಾಷ್ ಬೇಸಿನ್‌ಗಳು ಹಾಗೂ ಅದರ ಸುತ್ತ ಗಬ್ಬೆದ್ದು ನಾರುತ್ತಿರುವ ಚಿತ್ರಣ ದಾಖಲಾಗಿದೆ.

ಮುಖ ತೊಳೆಯಲು ಇಟ್ಟಿರುವ ನಲ್ಲಿಗಳಲ್ಲಿ ನೀರೇ ಬರುತ್ತಿಲ್ಲ: ಮುಖ ತೊಳೆಯಲು ಇಟ್ಟಿರುವ ವಾಷ್ ಬೇಸಿನ್‌ನ ನಲ್ಲಿಗಳಲ್ಲಿ ನೀರೇ ಬರುತ್ತಿಲ್ಲ, ನೀರು ಬರದೇ ಇರುವುದರಿಂದ, ಆ ವಾಷ್ ಬೇಸಿನ್‌ಗಳು ಗಬ್ಬೆದ್ದು ನಾರುತ್ತಿವೆ. ಅವುಗಳಲ್ಲಿ ಕೆಲವರು ಎಲೆಅಡಿಕೆ- ಗುಟುಕಾವನ್ನು ಉಗಿದು ಇನ್ನಷ್ಟು ರಾಡಿಗೊಳಿಸಿದ್ದಾರೆ. ಇನ್ನು ಈ ವಾಷ್ ಬೇಸಿನ್‌ಗಳ ಸುತ್ತ ಕೂಡ ಗಲೀಜು ನೀರು ಹರಿಯುತ್ತಿದ್ದು, ಕೆಟ್ಟ ವಾಸನೆ ಬರುತ್ತಿರುವುದಾಗಿ ವಿಡಿಯೋದಲ್ಲಿ ರೈತ ಹೇಳಿಕೊಂಡಿದ್ದಾರೆ. ನಿತ್ಯ ಸಾವಿರಾರು ರೈತರು ಹಾಗೂ ವರ್ತಕರು ಬಂದು ಹೋಗುವ ಈ ಜಾಗದಲ್ಲಿ ಸೂಕ್ತ ನಿರ್ವಹಣೆಯಿಲ್ಲದೇ ಗಬ್ಬೆದ್ದಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಪರಿಸ್ಥಿತಿ ಇದೆ ಎಂದು ತಿಳಿಸಿದ್ದಾರೆ.

ವಿಶ್ವದ ಅತೀ ದೊಡ್ಡ ರೇಷ್ಮೆ ಮಾರುಕಟ್ಟೆ ಎನ್ನೋ ಹೆಗ್ಗಳಿಕೆ ಹೊಂದಿರುವ ರಾಮನಗರ ರೇಷ್ಮೆ ಮಾರುಕಟ್ಟೆ ಇಂತಹ ದುಸ್ಥಿತಿ ತಲುಪಿರುವುದು ನಿಜವಾಗಿಯೂ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಆದರೆ ಇದಕ್ಕೆ ನಿಜವಾಗಿಯೂ ಯಾರು ಹೊಣೆ? ಅಲ್ಲಿನ ಆಡಳಿತ ಮಂಡಳಿಯೋ? ಅಥವಾ ಅಲ್ಲಿ ಬರುವ ರೈತರು ಮತ್ತು ವರ್ತಕರು ಕಾರಣವೋ ಎನ್ನುವ ಪ್ರಶ್ನೆ ಕೂಡ ಮೂಡುತ್ತಿದೆ. ಮೊದಲಿಗೆ ಇದರಲ್ಲಿ ನೇರವಾಗಿ ಆಡಳಿತದ ಕರ್ತವ್ಯ ಲೋಪ ನೇರವಾಗಿ ಕಾಣಿಸುತ್ತಿದೆ. ಯಾಕೆಂದರೆ ನಿತ್ಯ ನೂರಾರು ರೈತರು ಬರುವ ಕಾರಣ, ಅದರಲ್ಲಿಯೂ ದೂರದ ಊರುಗಳಿಂದ ಬರುವ ಕಾರಣಕ್ಕೆ ಅವರಿಗೆ ಬಳಕೆಗೆ ಬೇಕಾದ ಶೌಚಾಲಯ ಹಾಗೂ ವಾಷ್ ಬೇಸಿನ್‌ಗಳಿಗೆ ನೀರು ಬರುವಂತೆ ನೋಡಿಕೊಳ್ಳಬೇಕಾಗಿರುವುದು, ಮತ್ತದನ್ನು ಸ್ವಲ್ಪ ಸ್ವಚ್ಛವಾಗಿಟ್ಟುಕೊಳ್ಳಬೇಕಾಗಿದ್ದದ್ದು ಅಲ್ಲಿನ ವ್ಯವಸ್ಥೆಯ ಜವಾಬ್ದಾರಿ. ಆದರೆ ಅಲ್ಲಿ ನೀರೇ ಇಲ್ಲದೇ ಇರುವುದರಿಂದ ಈ ಸ್ಥಿತಿ ಎದುರಾಗಿದೆ.

ಮತ್ತೊಂದೆಡೆ ಇದರಲ್ಲಿ ಸಾರ್ವಜನಿಕರು ಅಥವಾ ಅಲ್ಲಿ ಬರುವ ರೈತರ ಬೇಜವಾಬ್ದಾರಿಯೂ ಇದೆ. ಸರಕಾರ ನಮಗೆ ನೀಡಿರುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಜತೆಗೆ ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯ ಸೇರಿದಂತೆ ಇನ್ನಿತರ ಸೇವೆಗಳನ್ನು ಬಳಸುವಾಗ ಅವುಗಳ ಸ್ವಚ್ಛತೆಯ ಬಗ್ಗೆಯೂ ಗಮನ ನೀಡಬೇಕು. ಆದರೆ ಕೆಲವು ಪ್ರಜ್ಞಾಹೀನರು ಅಲ್ಲಿಯೇ ತಂಬಾಕು, ಎಲೆಅಡಿಕೆ, ಗುಟುಕಾ ಅಗಿದು ಉಗುಳುವ ಮೂಲಕ ಸಾರ್ವಜನಿಕ ಸ್ಥಳವನ್ನು ಗಬ್ಬೆಬ್ಬಿಸುತ್ತಿದ್ದಾರೆ.



ಆಗಸ್ಟ್ 15ರ ಹೊತ್ತಿಗೆ ಹೊಸ ಮಾರುಕಟ್ಟೆಗೆ ಸ್ಥಳಾಂತರ

ಇದು ಹಳೆಯ ಮಾರುಕಟ್ಟೆಯಾಗಿರುವುದರಿಂದ ನವೀಕರಣದ ಕಾಮಗಾರಿಗಳು ನಡೆಯುತ್ತಿವೆ. ಈ ಕೆಲಸ ನಡೆಯುವ ಸಂದರ್ಭದಲ್ಲಿ ಅಲ್ಲಿ ಸ್ವಚ್ಛಗೊಳಿಸಲು ಆಗಿರಲಿಲ್ಲ, ಮತ್ತು ಆ ದಿನ ಸ್ವಚ್ಛತಾ ಸಿಬ್ಬಂದಿ ರಜೆಯಲ್ಲಿದ್ದುದರಿಂದ ಹೀಗಾಗಿದೆ. ಅವತ್ತೇ ಯಾರೋ ವಿಡಿಯೋ ಮಾಡಿ ಹಾಕಿದ್ದಾರೆ ಎಂದು ರೇಷ್ಮೆ ಮಾರುಕಟ್ಟೆಯ ಉಪನಿರ್ದೇಶಕ ಸುಬ್ರಹ್ಮಣ್ಯ ತಿಳಿಸಿದರು. ಸದ್ಯ ಮಾರುಕಟ್ಟೆಯಲ್ಲಿ ಯಾವುದೇ ಸಮಸ್ಯೆಯಿಲ್ಲ. ಶೌಚಾಲಯ ಸೇರಿದಂತೆ ಎಲ್ಲಾ ಕಡೆ ನೀರಿನ ವ್ಯವಸ್ಥೆಯಿದೆ. ಆದರೆ ಇಲ್ಲಿ ಬರುವ ಕೆಲ ರೈತರು ಎಲ್ಲೆಂದರಲ್ಲಿ ಎಲೆಅಡಿಕೆ, ಗುಟುಕಾ ತಿಂದು ಉಗುಳುತ್ತಾರೆ. ಅದು ಕಡಿಮೆಯಾಗಬೇಕು. ಆಗಸ್ಟ್ 15ರ ಹೊತ್ತಿಗೆ ಹೊಸ ಮಾರುಕಟ್ಟೆಗೆ ಮಾರ್ಕೆಟ್ ಸ್ಥಳಾಂತರಗೊಳ್ಳಲಿದ್ದು, ಅಲ್ಲಿ ಎಲ್ಲವೂ ಹೈಟೆಕ್ ಆಗಿರಲಿದೆ ಎಂದರು.

ದಿಗಂತ ವಿಶೇಷ



ಕನಿಷ್ಠ ಸ್ವಚ್ಛತೆಯೂ ಇಲ್ಲ

ನಾವು ಕಷ್ಟಪಟ್ಟು ಉತ್ಪತ್ತಿ ಮಾಡಿ ತೆಗೆದುಕೊಂಡು ಬರುವ ಗೂಡುಗಳಿಗೆ ಇಲ್ಲಿನ ಮಾರುಕಟ್ಟೆಗೆ ಶೇ.1ರಷ್ಟು ಕಮಿಷನ್ ಕೊಡುತ್ತೇವೆ. ಪ್ರತಿನಿತ್ಯ ಕೋಟ್ಯಂತರ ರೂಪಾಯಿ ವ್ಯವಹಾರ ನಡೆಯುವ ಈ ಮಾರುಕಟ್ಟೆಯಲ್ಲಿ ಬೇಕಾದಷ್ಟು ಆದಾಯ ಸಂಗ್ರಹವಾಗುತ್ತದೆ. ಆದರೆ ಇಲ್ಲಿ ಕನಿಷ್ಠ ಸ್ವಚ್ಛತೆಯೂ ಇಲ್ಲ, ಅಧಿಕಾರಿಗಳು ತಮ್ಮ ಮನೆಯನ್ನು ಸಹ ಹೀಗೆಯೇ ಇಟ್ಟುಕೊಳ್ಳುತ್ತಾರಾ ಎಂದು ರೈತ ತುಂಬೇನಹಳ್ಳಿ ಶಿವಕುಮಾರ್ ಪ್ರಶ್ನಿಸಿದರು.

ವಿಜಯಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಸುಬ್ಬಸ್ವಾಮಿ ಕಳವಳ

ಪರಿಸರದ ಅಸಮತೋಲನಕ್ಕೆ ಮನುಷ್ಯನೇ ಕಾರಣ



ಕೋಟಿ ರೂ. ನೀಡಿದರೂ ನಾವು ಒಂದೇ ಒಂದು ಎಲೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ಸಸ್ಯ ಸಂಪತ್ತು ಬಹಳ ಅಮೂಲ್ಯವಾದ ಸಂಪತ್ತು ಅದನ್ನು ರಕ್ಷಿಸುವತ್ತ ಪ್ರತಿಯೊಬ್ಬರು ಗಮನ ಹರಿಸಬೇಕು. ರಸ್ತೆ ಬದಿಯಲ್ಲಿ ಕಸ ಹಾಕುವ ಪ್ರವೃತ್ತಿ ನಿಲ್ಲಿಸಿ ಮನೆಯಲ್ಲಿ ಕಸವನ್ನು ಸರಿಯಾಗಿ ವಿಂಗಡಿಸಿ ಕಸದಿಂದ ರಸವನ್ನಾಗಿ ಪರಿವರ್ತಿಸುವ ಕೆಲಸ ನಡೆಯಬೇಕು.
■ ತಾರಾ ಎಸ್. ಸ್ವಾಮಿ, ಶಾಲಾ ಸಂಸ್ಥಾಪಕಿ

ಹಾಸನ: ನಾಗರಿಕತೆಯ ಅಭಿವೃದ್ಧಿ ನೆಪದಲ್ಲಿ ಪರಿಸರದ ಅಸಮತೋಲನಕ್ಕೆ ಮನುಷ್ಯನೇ ಕಾರಣ ಎಂದು ಪರಿಸರ ಪ್ರೇಮಿ ಪರಿಸರ ಚಿಂತಕ ಹಾಗೂ ವಿಜಯಶಾಲಾ ಆಡಳಿತ ಮಂಡಳಿ ಅಧ್ಯಕ್ಷ ವೈ. ಎನ್.ಸುಬ್ಬಸ್ವಾಮಿ ಕಳವಳ ವ್ಯಕ್ತಪಡಿಸಿದರು.

ವಿಜಯ ಶಾಲೆಯಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ನಮಗೆ ಇರುವುದು ಒಂದೇ ಒಂದು ಭೂಮಿ, ಅದನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ರೈತರು ಹಿಂದಿನ ಕಾಲದಲ್ಲಿ ಹೊಳೆ, ಬಾವಿ ನೀರನ್ನು ಕೃಷಿ ಬಳಕೆಗೆ ಬಳಸುತ್ತಿದ್ದರು. ಆದರೆ ಈಗ ಕೊಳವೆ ಬಾವಿಯ ಮೂಲಕ ಭೂಮಿಯ ಅಂತರ್ಜಾಲ ಯಥೇಚ್ಛವಾಗಿ ಕೃಷಿ, ಕೈಗಾರಿಕೆಗಳಿಗೆ ಬಳಸಿ ನೀರಿನ ಅಭಾವಕ್ಕೆ ಕಾರಣನಾಗಿದ್ದಾನೆ.

ಅಂತರ್ಜಲ ಮಟ್ಟ ಕುಸಿದಿದ್ದು, ಅದನ್ನು ತಡೆಯಲು ಇಂದು ನಾವು ಮಳೆ ಬಂದಾಗ ಓಡುವ ನೀರನ್ನು ನಡೆಯುವಂತೆ, ನಡೆಯುವ ನೀರನ್ನು ನಿಲ್ಲುವಂತೆ, ನಿಂತ ನೀರನ್ನು ಭೂಮಿಯಲ್ಲಿ ಇಂಗುವಂತೆ ಮಾಡಬೇಕಾಗಿದೆ. ಪ್ರತಿ ಮನೆಯಲ್ಲೂ, ಕಟ್ಟಡದಲ್ಲೂ, ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಪರಿಸರ ದಿನಾಚರಣೆಯ ಅಂಗವಾಗಿ 9ನೇ ತರಗತಿಯ ವಿದ್ಯಾರ್ಥಿಗಳು ಪ್ರಕೃತಿ ಮಾನವನೊಂದಿಗೆ ಹೊಂದಿರುವ ಒಡನಾಟದ ಕುರಿತ ತಮ್ಮ ಅನುಭವಗಳನ್ನು 'ಪ್ರಕೃತಿಯ ಪಿಸುಮಾತಿನೊಂದಿಗೆ' ಎಂಬ ಸಂದೇಶವನ್ನು ಕ್ಯೂ ಆರ್ ಕೋಡ್‌ನ್ನು ರಚಿಸುವ ಮೂಲಕ ಹಂಚಿಕೊಂಡರು, 1 ನೇ ತರಗತಿಯ ವಿದ್ಯಾರ್ಥಿಗಳು 'ಭವಿಷ್ಯತ್ತಿನ ಪ್ರಕೃತಿ-2050' ಇಂದಿನ ವಿದ್ಯಮಾನಗಳಿಗೆ ಒಳಪಡುತ್ತಿರುವ ಪ್ರಕೃತಿಯು 2050ರಲ್ಲಿ ಯಾವ ಬಗೆಯ ರೂಪ ಹಾಗೂ ವೈರುಧ್ಯಗಳಿಗೆ ಒಳಪಡಬಹುದು ಎಂಬ ಚಿಂತನೆಗಳನ್ನೊಳಗೊಂಡ 'ಭವಿಷ್ಯತ್ತಿನ ಪ್ರಕೃತಿ 2050 ಮತ್ತು 2075 ಎಂಬ ಶಿರಷಿಕೆಯಲ್ಲಿ ಭಿತ್ತಿ ಪತ್ರಿಕೆಗಳನ್ನು ರೂಪಿಸಿ ಪ್ರದರ್ಶಿಸಿದರು.

ಶಾಲಾ ಶಿಕ್ಷಕ ಅನಿಲ್ ಕುಮಾರ್ ಸಿ.ಆರ್. ರಚಿಸಿ, ನಿರ್ದೇಶಿಸಿ 'ಗೂಡು ಸೇರುವ ಮುನ್ನ' ಮಕ್ಕಳ ನಾಟಕವು ಪ್ರಕೃತಿಯ ಆಗರಗಳಾದ ನದಿ, ಕೆರೆ ಮತ್ತು ಪರಿಸರಗಳನ್ನು ಮಾನವ ತನ್ನ ದುರಾಸೆಗೊಳಗಾಗಿ ಹೇಗೆ ವಿರೂಪ ಗೊಳಿಸುತ್ತಿದ್ದಾನೆ ಹಾಗೂ ಪರಿಸರ ಸಂರಕ್ಷಣೆಗಾಗಿ ನಾವು ಕೈಗೊಳ್ಳಲೇಬೇಕಾದ ಅಗತ್ಯ ಕ್ರಮಗಳ ಕುರಿತು ಅರಿವು ಮೂಡಿಸಿತು.

ಕಾರ್ಯಕ್ರಮವನ್ನು ಎಂಟನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ದಿನದ ವಿಶೇಷತೆಯೊಂದಿಗೆ ನಡೆಸಿಕೊಟ್ಟಿದ್ದು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ಮಠಾಧೀಶರಿಂದ ವಾಲ್ಮೀಕಿ ಪುತ್ಥಳಿಗೆ ವಿಶೇಷ ಪೂಜೆ

ಪಾವಗಡ: ತಾಲೂಕಿನ ರಂಗಸಮುದ್ರ ಗ್ರಾಮದಲ್ಲಿರುವ ಮಹರ್ಷಿ ಶ್ರೀವಾಲ್ಮೀಕಿ ಪುತ್ಥಳಿಗೆ ಕರ್ನಾಟಕ ರಾಜ್ಯ ದಲಿತ ಹಿಂದುಳಿದ ವರ್ಗಗಳ ಮಠಾಧೀಶ ಸ್ವಾಮೀಜಿಗಳ ತಂಡ ಸೋಮವಾರ ವಿಶೇಷ ಪೂಜೆ ಸಲ್ಲಿಸಿದರು.

ಮಾಜಿ ಸಚಿವ ದಿ.ವೆಂಕಟರಮಣಪ್ಪರವರ ವೈಕುಂಠ ಸಮಾರಾಧನೆಯಲ್ಲಿ ಭಾಗವಹಿಸಲು ಆಗಮಿಸುತ್ತಿದ್ದ ಮಠಾಧೀಶರ ತಂಡ ಡಾ.ವಾಲ್ಮೀಕಿ ಪ್ರಸನ್ನಾನಂದ ಪುರಿ ಸ್ವಾಮೀಜಿ ನೇತೃತ್ವದಲ್ಲಿ ವಾಲ್ಮೀಕಿ ಪುತ್ಥಳಿಗೆ ಪುಷ್ಪಾರ್ಚನೆಯೊಂದಿಗೆ ವಿಶೇಷ ಪೂಜೆ ಸಲ್ಲಿಸಿದೆ.


ಈ ವೇಳೆ ಕರ್ನಾಟಕ ದಲಿತ ಹಿಂದುಳಿದ ಮಠಾಧೀಶರ ಒಕ್ಕೂಟದ ಸ್ವಾಮೀಜಿಗಳಾದ ಮಾದಾರಚೆನ್ನಯ್ಯ ಸ್ವಾಮೀಜಿ, ಭೋವಿ ಗುರು ಪೀಠದ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಡಾ. ಶಾಂತ ವೀರ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ, ಕುಂಬಾರ ಗುಂಡಯ್ಯ ಸ್ವಾಮೀಜಿ, ಮಡಿವಾಳ ಮಾಚಿದೇವ ಸ್ವಾಮೀಜಿ, ಸೇವಾಲಾಲ್ ಸ್ವಾಮೀಜಿ ಸೇರಿದಂತೆ 20ಕ್ಕೂ ಹೆಚ್ಚು ಸ್ವಾಮೀಜಿಗಳ ತಂಡ ವಾಲ್ಮೀಕಿ ಪುತ್ಥಳಿಗೆ ಪೂಜೆ ನೆರವೇರಿಸಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವಘಟಕದ ಜಿಲ್ಲಾಧ್ಯಕ್ಷ ಪಾಳೇಗಾರ ಲೋಕೇಶ್, ತಾ.ಪಂ ಮಾಜಿ ಅಧ್ಯಕ್ಷ ಗಿರಿರಾಜು, ಮಾಜಿ ಸದಸ್ಯ ಅಂಜಿನನಾಯಕ, ಮುಖಂಡರಾದ ಓಬಯ್ಯ, ನಾಗರಾಜು, ತಿಮ್ಮಯ್ಯ, ಬಲರಾಮ್, ಮಹಾರಾಜು, ರಾಮಕೃಷ್ಣ, ಪಾಲಾಕ್ಷ ಸೇರಿದಂತೆ ವಾಲ್ಮೀಕಿ ಸಮುದಾಯದ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.



1.6 ಕೋಟಿ ಮೊತ್ತದ ಗಾಂಜಾ ವಶ

ಮೈಸೂರು: ಅರಮನೆ ನಗರಿ ಮೈಸೂರಿನಲ್ಲಿ ಮಾದಕವಸ್ತು ವಿರುದ್ಧ ಸಮರ ಸಾರಿರುವ ನಗರದ ಸಿಸಿಬಿ ಪೊಲೀಸರು ಸುಮಾರು 1.60 ಕೋಟಿ ರೂ. ಮೌಲ್ಯದ 280 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ಬನ್ನೂರು ಚೆಕ್‌ಪೋಸ್ಟ್ ಬಳಿ ಮೈಸೂರು ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, 1.60 ಕೋಟಿ ರೂ. ಮೌಲ್ಯದ 280 ಕೆಜಿ ಗಾಂಜಾವನ್ನು ವಶಪಡಿಸಿಕೊಂಡು ನಾಲ್ಕು ಆರೋಪಿಗಳನ್ನು ಬಂಧಿಸಿದ್ದಾರೆ.



ಮಹಮದ್ ಜುಬೇರ್, ಮುದಾಸಿರ್ ಅಹಮದ್, ಅಬೂಬಕರ್ ಸಿದ್ಧಿಕ್, ಸೈಯದ್ ಮಜರ್ ಬಂಧಿತ ಆರೋಪಿಗಳು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಅಕ್ರಮವಾಗಿ ಸಾಗಿಸುತ್ತಿದ್ದ ಬೃಹತ್ ಪ್ರಮಾಣದ ಗಾಂಜಾವನ್ನು ಪತ್ತೆ ಹಚ್ಚಿದ್ದಾರೆ.

ಕಾರ್ಯಾಚರಣೆ ವೇಳೆ ಗಾಂಜಾ ಸಾಗಣೆಗೆ ಬಳಸುತ್ತಿದ್ದ ಒಂದು ಕಾರು ಮತ್ತು ಒಂದು ಟ್ರಕ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿರುವ ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದಾರೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

41 ಸ್ವತ್ತು ಕಳವು, 2 ವಂಚನೆ ಪ್ರಕರಣ ಭೇದಿಸಿದ ಮೈಸೂರು ಪೊಲೀಸರು

ವಶಪಡಿಸಿಕೊಂಡ ಸ್ವತ್ತು ವಾರಸುದಾರರಿಗೆ ವಾಪಾಸ್

ಮೈಸೂರು: ನಗರದ ವಿವಿಧ ಠಾಣೆಯ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಕಳೆದ ಮೂರು ತಿಂಗಳಲ್ಲಿ 41 ಸ್ವತ್ತು ಕಳುವು ಮತ್ತು 3 ವಂಚನೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದರು.

ಮೈಸೂರು ನಗರ ಪೊಲೀಸ್ ಘಟಕದಿಂದ ಕಳೆದ 3 ತಿಂಗಳಲ್ಲಿ ಒಂದು ದರೋಡೆ ಸಂಚು, ಎರಡು ಸುಲಿಗೆ, 10 ಕನ್ನ ಕಳುವು, 9 ಮನೆ ಕಳ್ಳತನ, 4 ಮನೆ ಕೆಲಸದವರಿಂದ ಕಳ್ಳತನ, 10 ವಾಹನ ಕಳ್ಳತನ, 05 ಸಾಮಾನ್ಯ ಕಳ್ಳತನ ಹಾಗೂ 3 ವಂಚನೆ ಪ್ರಕರಣ ಸೇರಿದಂತೆ ಒಟ್ಟು 44 ಪ್ರಕರಣಗಳನ್ನು ಪತ್ತೆ ಮಾಡಿದ್ದು, ಸದರಿ ಪ್ರಕರಣಗಳಿಂದ ಒಟ್ಟು ರೂ. 2.09,37,645 ಮೌಲ್ಯದ 1 ಕೆ.ಜಿ 578 ಗ್ರಾಂ, 743 ಮಿಲಿ ಚಿನ್ನಾಭರಣ, 3 ಕೆ.ಜಿ 578 ಗ್ರಾಂ ಬೆಳ್ಳಿ 2,76,786 ನಗದು ಹಾಗೂ ಇತರೆ ಮಾಲುಗಳನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ. ಪತ್ತೆಯಾದ ಈ ಪ್ರಕರಣಗಳಲ್ಲಿ ಒಟ್ಟು 55 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ ಎಂದು ತಮ್ಮ ಕಚೇರಿಯಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಮಂಡಿ ಠಾಣಾ ಪೊಲೀಸರು ಇಬ್ಬರು ಆರೋಪಿಯನ್ನು ದಸ್ತಗಿರಿ ಮಾಡಿ ವಂಚನೆ ಪ್ರಕರಣಕ್ಕೆ ಸಂಬಂಧಪಟ್ಟಂತೆ 90 ಲಕ್ಷ ಮೌಲ್ಯದ ಒಟ್ಟು 660 ಗ್ರಾಂ ಚಿನ್ನದ ಗಟ್ಟಿಯನ್ನು ವಶ ಪಡಿಸಿಕೊಂಡಿದ್ದಾರೆ. ವಿಜಯನಗರ ಪೊಲೀಸ್ ಠಾಣಾ ಪೊಲೀಸರು 2 ಆರೋಪಿಗಳನ್ನು ಬಂಧಿಸಿ. 2 ಮನೆ ಕೆಲಸದವರಿಂದ ಕಳ್ಳತನ ಪ್ರಕರಣ ಗಳನ್ನು ಪತ್ತೆ ಮಾಡಿ 23,50,000 ರೂ. ಮೌಲ್ಯದ 170 ಗ್ರಾಂ ಚಿನ್ನಾಭರಣ ಮತ್ತು ಗಾರ್ಮೆಂಟ್ಸ್ ಬಟ್ಟೆಗಳನ್ನು ವಶಪಡಿಸಿ ಕೊಂಡಿದ್ದಾರೆ.

ಸಿಸಿಬಿ ಪೊಲೀಸರು ಇಬ್ಬರು ಆರೋಪಿಗಳನ್ನು ದಸ್ತಗಿರಿ ಮಾಡಿ 3 ಕನ್ನ ಕಳುವು, 1 ಮನೆಕಳ್ಳತನ ಒಟ್ಟು 4 ಪ್ರಕರಣಗಳನ್ನು ಪತ್ತೆ ಮಾಡಿ 21,00,000 ರೂ. ಮೌಲ್ಯದ 173 ಗ್ರಾಂ 260 ಮಿಲಿ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಜೊತೆಗೆ 1 ವಂಚನೆ ಪ್ರಕರಣ ಪತ್ತೆ ಮಾಡಿ 4 ಆರೋಪಿಗಳನ್ನು ವಶಕ್ಕೆ ಪಡೆದು ರೂ. 2,74,000 ನಗದು ವಶಕ್ಕೆ ಪಡೆದಿದ್ದಾರೆ. ಸರಸ್ವತಿಪುರಂ ಠಾಣಾ ಪೊಲೀಸರು ಇಬ್ಬರು ಆರೋಪಿಗಳನ್ನು ದಸ್ತಗಿರಿ ಮಾಡಿ, 4-ಮನೆ ಕಳ್ಳತನ ಪ್ರಕರಣಗಳನ್ನು ಪತ್ತೆ ಮಾಡಿ 18,40,000 ರೂ. ಮೌಲ್ಯದ 143 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಕೃಷ್ಣರಾಜ ಠಾಣಾ ಪೊಲೀಸರು ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಿ 1-ರಾತ್ರಿ ಕನ್ನ ಕಳುವು ಪ್ರಕರಣವನ್ನು ಪತ್ತೆ ಮಾಡಿ 4,65,000 ರೂ. ಮೌಲ್ಯದ 33.730 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ. ವಿದ್ಯಾರಣ್ಯಪುರಂ ಠಾಣಾ ಪೊಲೀಸರು ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಿ 1 ಸಾಮಾನ್ಯ ಕಳುವು ಪ್ರಕರಣವನ್ನು ಪತ್ತೆ ಮಾಡಿ 3 ಲಕ್ಷ ಮೌಲ್ಯದ 1576 ಗ್ರಾಂ ಬೆಳ್ಳಿ ಪದಾರ್ಥವನ್ನು ವಶಪಡಿಸಿಕೊಂಡಿದ್ದಾರೆ.

ರಾಯಲ್ ನಗರದಲ್ಲಿ 500ಕ್ಕೂ ಹೆಚ್ಚು ರಂಗೋಲಿ | ಕೆಂಪಲಿಂಗನಹಳ್ಳಿಗೆ 50ಲಕ್ಷ ಅನುದಾನ

ಕೂಲಿಪುರ ಅಭಿವೃದ್ಧಿಗೆ ₹1.50 ಕೋಟಿ ಅನುದಾನ

ನೆಲಮಂಗಲ: ಮಹಿಳೆಯರು ಗ್ರಾಮದ ಸಮಸ್ಯೆಗಳನ್ನು ತಿಳಿಸಲು ರಂಗೋಲಿ ಸ್ಪರ್ಧೆ ಉತ್ತಮ ವೇದಿಕೆಯಾಗಿದೆ. ಅಲ್ಲದೆ ಕೂಲಿಪುರ ಅಭಿವೃದ್ಧಿಗೆ 1.50 ಕೋಟಿ, ಕೆಂಪಲಿಂಗನಹಳ್ಳಿಗೆ 50 ಲಕ್ಷ, ಬ್ಯಾಡರಹಳ್ಳಿಗೆ 50 ಲಕ್ಷ ಅನುದಾನ ನೀಡಲಾಗಿದೆ ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.

ನಗರಸಭೆ ವ್ಯಾಪ್ತಿಯ ಕೆಂಪಲಿಂಗನಹಳ್ಳಿ, ರಾಯಲ್ ನಗರ, ಬ್ಯಾಡರಹಳ್ಳಿ, ಅಡೇಪೇಟೆಗಳಲ್ಲಿ ಆಯೋಜಿಸಲಾಗಿದ್ದ ರಂಗೋಲಿ ಸ್ಪರ್ಧೆಯನ್ನು ವೀಕ್ಷಣೆ ಮಾಡಿ ಮಾತನಾಡಿದರು.

ಕಾಲೋನಿಗಳಲ್ಲಿ ಚರಂಡಿಗಳು, ರಸ್ತೆಗಳ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತಿದೆ, ಹಿಂದಿನ ಕೆಲವರ ತಪ್ಪಿನಿಂದ ಬಹುವರ್ಷಗಳಿಂದ ಮೀಸಲು ವಿಧಾನಸಭಾ ಕ್ಷೇತ್ರವಾಗಿದ್ದರು ಕಾಲೋನಿಗಳ ಅಭಿವೃದ್ಧಿಯಾಗದಿರುವುದು ಬೇಸರದ ಸಂಗತಿ. ಈಗಾಗಲೇ ಸಮಾಜ ಕಲ್ಯಾಣ ಹಾಗೂ ವಿವಿಧ ಇಲಾಖೆಗಳ ಮೂಲಕ ಅನುದಾನ ತಂದು ಕಾಲೋನಿಗಳ ಅಭಿವೃದ್ಧಿಗೆ ಮುಂದಾಗಿದ್ದು, ಜನರ ಬೇಡಿಕೆಯಂತೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಮಾದರಿ ಗ್ರಾಮವಾಗಿಸುವ ಪ್ರಯತ್ನ ಮಾಡಲಾಗುತ್ತದೆ ಎಂದರು.



ರಂಗೋಲಿ ಮೂಲಕ ಮನವಿ: ನಗರಸಭೆ ವ್ಯಾಪ್ತಿಯ ಕೆಂಪಲಿಂಗನಹಳ್ಳಿ, ಹರಾವರಪಾಳ್ಯ, ಬ್ಯಾಡರಹಳ್ಳಿ, ರಾಯಲ್‌ನಗರ, ವಿಶ್ವೇಶ್ವರಪುರ, ಕೂಲಿಪುರ, ನೆಲಮಂಗಲ ಟೌನ್ ಪೇಟೆಬೀದಿ ವಾರ್ಡ್ 7ರಲ್ಲಿ ಸಾವಿರಾರು ರಂಗೋಲಿಗಳನ್ನು ಬಿಟ್ಟಿದ್ದರು. ರಾಯಲ್ ನಗರದಲ್ಲಿ ಬೀದಿಬೀದಿಗಳಲ್ಲಿ 500ಕ್ಕೂ ಹೆಚ್ಚು ರಂಗೋಲಿ ಬಿಟ್ಟರೆ ಕೆಂಪಲಿಂಗನಹಳ್ಳಿ ಗ್ರಾಮದಲ್ಲಿ 250ಕ್ಕೂ ಹೆಚ್ಚು ರಂಗೋಲಿ ಬಿಟ್ಟಿದ್ದು ವಿಶೇಷವಾಗಿತ್ತು. ಕೆಂಪಲಿಂಗನಹಳ್ಳಿಯಲ್ಲಿ ಚರಂಡಿ, ರಸ್ತೆಗೆ 50 ಲಕ್ಷ ಅನುದಾನ ನೀಡುವುದಾಗಿ ಘೋಷಣೆ ಮಾಡಿದ್ದು ಬ್ಯಾಡರಹಳ್ಳಿ, ಹರಪ್ಪನಪಾಳ್ಯದಲ್ಲಿ ಮಹಿಳೆಯರ ಬೇಡಿಕೆಯಂತೆ ಕುಡಿಯುವ ನೀರಿನ ಘಟಕ, ಚರಂಡಿ, ರಸ್ತೆಯ ಜತೆ ಬಸ್ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರು. ಕೂಲಿಪುರದಲ್ಲಿ ರಸ್ತೆ ಮಾಡಿಕೊಡುವಂತೆ ರಂಗೋಲಿ ಪಕ್ಕದಲ್ಲಿಯೇ ಬರೆದು ಮಹಿಳೆಯರು ಮನವಿ ಮಾಡಿದ್ದು ಅದಕ್ಕೆ ಸ್ಪಂದನೆ ನೀಡಿದ ಶಾಸಕರು 1.50 ಕೋಟಿ ಅನುದಾನ ಘೋಷಣೆ ಮಾಡಿ 2 ತಿಂಗಳಲ್ಲಿ ಕೆಲಸ ಮಾಡಿಸುವ ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಸದಸ್ಯನಂತೆ ತಳಮಟ್ಟಕ್ಕೆ ಹೋಗಿ ಸ್ಪಂದಿಸುವ ಕೆಲಸವನ್ನು ಶಾಸಕರು ಮಾಡುತ್ತಿದ್ದಾರೆ. ಗ್ರಾಮ, ಗ್ರಾಮಗಳ ಭೇಟಿಯಿಂದ ಜನರು ನೇರವಾಗಿ ಸಮಸ್ಯೆ ಹೇಳಿಕೊಳ್ಳುವಂತಾಗಿದೆ. ನಮ್ಮ ಗ್ರಾಮಗಳಿಗೆ ಶಾಸಕರು ಐದಾರು ಬಾರಿ ಆಗಮಿಸಿ ಜನರ ಸಮಸ್ಯೆ ಕೇಳಿದ್ದಾರೆ. ರಂಗೋಲಿಯ ಮೂಲಕ ಮಹಿಳೆಯರ ಪ್ರತಿಭೆಯನ್ನು ಗುರುತಿಸುವ ಜತೆ ಗ್ರಾಮದ ಸಮಸ್ಯೆಗಳಿಗೆ ಧ್ವನಿಯಾಗಿದ್ದಾರೆ.
■ ರಾಜಣ್ಣ, ಹೆಚ್ಚುವರಿ ಮಾಜಿ ಸದಸ್ಯ, ನಗರಸಭೆ ನೆಲಮಂಗಲ

ದೇಗುಲ ಮಠಕ್ಕೆ ಸಿಎಂ ಡಿಕೆಶಿ ಭೇಟಿ, ಪೂಜೆ

ಕನಕಪುರ: ನಗರದ ದೇಗುಲ ಮಠಕ್ಕೆ ರಾಜ್ಯದ ನೂತನ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ರವರು ಭೇಟಿ ನೀಡಿ, ಭಕ್ತಿ ಭಾವದಿಂದ ಗದ್ದುಗೆಯಲ್ಲಿ ಪೂಜೆ ಸಲ್ಲಿಸಿದರು, ಲೋಕಕಲ್ಯಾಣಕ್ಕಾಗಿ ನಡೆದ ಹೋಮ-ಯಾಗಗಳಲ್ಲಿ ಭಾಗವಹಿಸಿ, ಪೂರ್ಣಾಹುತಿ ನೀಡಿ ಕಿರಿಯ ಶ್ರೀ ಚನ್ನಬಸವ ಮಹಾಸ್ವಾಮಿ ಆಶೀರ್ವಾದ ಪಡೆದರು.

ನಂತರ ಮಾತನಾಡಿದ ಮುಖ್ಯಮಂತ್ರಿಗಳು, ನಮ್ಮ ಹಿರಿಯರಾದ ಪರಮಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಆರೋಗ್ಯದ ದೃಷ್ಟಿಯಿಂದ ಈ ದಿನ ಇಲ್ಲಿಗೆ ಬರಲು ಸಾಧ್ಯವಾಗಲಿಲ್ಲ, ಅವರು ದೈಹಿಕವಾಗಿ ಇಲ್ಲದಿದ್ದರೂ ಹಿರಿಯ ಶ್ರೀ ಗಳು ಯಾವಾಗಲೂ ನನ್ನನ್ನು ಸ್ವಂತ ಮಗನ ರೀತಿಯಲ್ಲೇ ಆಶೀರ್ವಾದ ಮಾಡಿ ಬೆನ್ನು ತಟ್ಟುತ್ತಿದ್ದರು. ಅವರ ಪಾದಪದ್ಮಗಳಿಗೆ ನಾನು ಇಲ್ಲಿಂದಲೇ ಕೋಟಿಕೋಟಿ ಪ್ರಣಾಮಗಳನ್ನು ಮತ್ತು ನಮಸ್ಕಾರಗಳನ್ನು ತಿಳಿಸುತ್ತೇನೆ, ಎಂದರು.

ದೇಗುಲ ಮಠಕ್ಕೂ ನಮ್ಮ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ನಾನು ಮತ್ತು ನನ್ನ ಸಹೋದರ ಸುರೇಶ್ ಇಬ್ಬರೂ ಹುಟ್ಟಿದ್ದು ಮಳಗಾಳು ಗ್ರಾಮದಲ್ಲಿ, ನಮ್ಮ ಮನೆಯಲ್ಲಿ ಏನೇ ಕಾರ್ಯಕ್ರಮ ಆಗಬೇಕಾದರೂ ಶ್ರೀ ಮಠದ ಗುರುಗಳ ಆಶೀರ್ವಾದ ಪಡೆದೇ ಕಾರ್ಯಕ್ರಮಗಳನ್ನು ಮುನ್ನಡೆಸುತ್ತಾ ಬಂದಿದ್ದೇವೆ. ನಮ್ಮ ಕುಟುಂಬದವರು ತಲಾತಲಾಂತರಗಳಿಂದ ಶ್ರೀ ಮಠಕ್ಕೆ ಭಕ್ತಿ ಭಾವದಿಂದ ನಡೆದುಕೊಂಡು ಬಂದಿದ್ದಾರೆ, ಹಾಗಾಗಿಯೇ ನಾನು ಇಂದು ಶ್ರೀ ಮಠಕ್ಕೆ ಆಶೀರ್ವಾದ ಪಡೆಯಲು ಬಂದೆ.



ಆದರೆ, ಈ ಮಧ್ಯರಾತ್ರಿಯಲ್ಲೂ ಇಷ್ಟೊಂದು ದೊಡ್ಡ ಅಭಿನಂದನಾ ಸಮಾರಂಭವನ್ನು ಆಯೋಜಿಸಿದ್ದೀರಿ, ನಾನು ಇಲ್ಲಿಗೆ ಬಂದಿರುವುದು ನಿಮ್ಮೆಲ್ಲರ ಋಣವನ್ನು ತೀರಿಸಲಿಕ್ಕಾಗಿ. ಈ ಅಧಿಕಾರ ನಿಮ್ಮ ಅಧಿಕಾರ, ನಾವು ಹೀಗೆ ಒಗ್ಗಟ್ಟಾಗಿರಬೇಕು, ಅಧಿಕಾರದ ಶಕ್ತಿಯೇ ನಿಮ್ಮ ಶಕ್ತಿ ಎಂದು ನಮ್ಮ ಹಿರಿಯರು ಹೇಳಿದ್ದಾರೆ, ಮಠದ ಸೇವಕನಾಗಿ ಕಾಯಲುಸುತ್ತೇನೆ, ಪೂಜ್ಯರು ಯಾವುದೇ ಸೂಚನೆ ಕೊಟ್ಟರೂ ಮಠದ ಶಾಶ್ವತವಾದ ಕಟ್ಟಡ ಕಾಮಗಾರಿಗಳನ್ನು ಮಾಡಲು ನಾನು ಸಿದ್ಧನಿದ್ದೇನೆ, ಮುಂದೆ ಮಾಡುತ್ತೇನೆ. ನಿಮ್ಮ ಆಶೀರ್ವಾದ ಸದಾ ಹೀಗೆ ಇರಲಿ, ನಿಮ್ಮನ್ನೆಲ್ಲ ನೋಡಿ ತುಂಬಾ ಸಂತೋಷವಾಯಿತು ಎಂದು ಭಾವುಕರಾಗಿ ನುಡಿದರು.

ಕಿರುಸುದ್ದಿ

ಸಸಿ ನೆಟ್ಟು ಪರಿಸರ ದಿನಾಚರಣೆ

• **ಹೊಳೆನರಸಿಪುರ:** ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಆಸ್ಪತ್ರೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಕಾರ್ಯಕ್ರಮದಲ್ಲಿ ಗಣ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಜಂಟಿಯಾಗಿ ಸಸಿಗಳನ್ನು ನೆಡುವ ಮೂಲಕ ಪರಿಸರ ಜಾಗೃತಿ ಮೂಡಿಸಿದರು. ಆಸ್ಪತ್ರೆಯ ಮುಖ್ಯಸ್ಥರಾದ ಡಾ. ಮಂಜುಳಾ ಅವರ ಅಧ್ಯಕ್ಷತೆಯಲ್ಲಿ ಈ ಅರ್ಥಪೂರ್ಣ ಕಾರ್ಯಕ್ರಮ ಜರುಗಿತು. ಸಸಿ ನೆಟ್ಟು ಮಾತನಾಡಿದ ಡಾ. ಮಂಜುಳಾ ಅವರು, ಪರಿಸರ ಸಂರಕ್ಷಣೆ ಎಂಬುದು ಕೇವಲ ಸರ್ಕಾರದ ಅಥವಾ ಜವಾಬ್ದಾರಿಯುತ ಸಂಸ್ಥೆಗಳ ಕೆಲಸವಲ್ಲ; ಅದು ನಮ್ಮೆಲ್ಲರ ಜಂಟಿ ಹೊಣೆಯಾಗಿದೆ. ಪ್ರಕೃತಿಯನ್ನು ಉಳಿಸಿದರೆ ಮಾತ್ರ ಮಾನವಕುಲದ ಆರೋಗ್ಯ ಸಾಧ್ಯ. ಆದ್ದರಿಂದ ಪ್ರತಿಯೊಬ್ಬ ನಾಗರಿಕರೂ ಕನಿಷ್ಠ ಒಂದು ಸಸಿಯನ್ನಾದರೂ ನೆಟ್ಟು, ಅದನ್ನು ಪೋಷಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವೈದ್ಯರುಗಳಾದ ಡಾ. ನಟರಾಜ್, ಡಾ. ರಮೇಶ್, ಡಾ. ಮುರುಗೇಶ್, ಡಾ. ಕುಸುಮತಿ ಹಾಗೂ ಡಾ. ಸೆಲ್ವಾ ಕುಮಾರ್ ಅವರು ಭಾಗವಹಿಸಿ ಸಸಿಗಳಿಗೆ ನೀರೆರೆಯುವ ಮೂಲಕ ಪರಿಸರ ಕಾಳಜಿ ಮೆರೆದರು. ಅಲ್ಲದೆ, ನರ್ಸಿಂಗ್ ಆಫೀಸರ್ ಗ್ರೇಡ್-1 ಮೀನಾಕ್ಷಿ, ನರ್ಸಿಂಗ್ ಆಫೀಸರ್ ಗ್ರೇಡ್-2 ರವೀಂದ್ರ ಸರ್, ನಾಗರತ್ನ ಸಿಸ್ಟರ್ ಯಶಸ್ವಿಗೊಳಿಸಿದರು.

ಸಾಲದ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಅಭಿಮತ

ಆರ್ಥಿಕತೆಗೆ ಮಹಿಳೆ ಕೊಡುಗೆ ಅಪಾರ



• **ಚನ್ನರಾಯಪಟ್ಟಣ:** ದೇಶದ ಆರ್ಥಿಕ ವ್ಯವಸ್ಥೆ ಸದೃಢವಾಗಿರಲು ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲೂಕಿನ ಶ್ರವಣಬೆಳಗೊಳ ಹೋಬಳಿ ಸುಂಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಆಯೋಜಿಸಿದ್ದ ರೈತರಿಗೆ ಸಾಲದ ಚೆಕ್ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರಲ್ಲಿರುವ ಉಳಿತಾಯದ ಮನೋಭಾವನೆ ದೂರದೃಷ್ಟಿ ಹಾಗೂ ತಾಳ್ಮೆಯಿಂದ ಕುಟುಂಬ ಆರ್ಥಿಕ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಆದ್ದರಿಂದ ಸ್ತ್ರೀಶಕ್ತಿ ಸಂಘಗಳ ಮೂಲಕ ಪ್ರತಿಸಂಘಕ್ಕೆ 7 ಲಕ್ಷ ರೂ.ಸಾಲ ಸೌಲಭ್ಯ ನೀಡಿ ಮಹಿಳಾ ಸಬಲೀಕರಣಕ್ಕೆ ಕ್ರಮವಹಿಸಲಾಗಿದೆ ತಿಳಿಸಿದರು. ಮೀಟರ್ ಬಡ್ಡಿಯಿಂದ ಜನರು ತತ್ತರಿಸಿದ್ದರು. ಇದನ್ನು ಮನಗಂಡು ಸಹಕಾರ ಸಂಘಗಳಿಂದ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಿದ್ದರಿಂದ ರೈತರಿಗೆ ಅನುಕೂಲವಾಗಿದೆ ಎಂದರು. ಎಂದು

ಈ ಸಂಘದಿಂದ 2225 ರೈತರಿಗೆ 13.5 ಕೋಟಿ ರೂ. ಕೆಸಿಸಿ ಬೆಳೆ ಸಾಲ, 23 ಮಹಿಳಾ ಸ್ವಸಹಾಯ ಸಂಘಗಳಿಗೆ 1.38 ಕೋಟಿ ರೂ.ಸಾಲ, 2.65 ಕೋಟಿ ರೂ. ಮಧ್ಯಮಾವಧಿ ಸಾಲ, 2 ಲಕ್ಷ ರೂ. ಹೈನುಗಾರಿಕೆ ಸಾಲ ನೀಡಲಾಗಿದ್ದು, ಈಗ ಹೆಚ್ಚುವರಿಯಾಗಿ 300 ಜನ ರೈತರಿಗೆ 82 ಲಕ್ಷ ರೂ. ಸಾಲ ಸೇರಿದಂತೆ ಒಟ್ಟು 18 ಕೋಟಿ ರೂ.ಸಾಲ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸಹಕಾರ ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಕಟ್ಟಬೇಕು. ಆಗ ಮಾತ್ರ ಸಹಕಾರ ಸಂಘಗಳು ಅಭಿವೃದ್ಧಿ ಹೊಂದಲು ಸಾಧ್ಯ. ಈ ಹಿಂದೆ ಹಾಸನ ಜಿಲ್ಲಾ ಕೇಂದ್ರ ಸಹಕಾರ ಸಂಘದಿಂದ ತಾಲೂಕಿನಲ್ಲಿ ಕೇವಲ 6ರಿಂದ 7 ಸಾವಿರ ರೈತರಿಗೆ ಮಾತ್ರ ಸಾಲ ನೀಡಲಾಗಿತ್ತು. ನಾನು ನಿರ್ದೇಶಕನಾದ ಬಳಿಕ 51 ಸಾವಿರ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗಿದೆ. ಜಿಲ್ಲಾ ಸಹಕಾರ ಬ್ಯಾಂಕ್ ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ, ಬ್ಯಾಂಕನ್ನು ಸದೃಢಗೊಳಿಸಲು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕೊಡುಗೆ ಅಪಾರವಾಗಿದೆ. ಅವರು ಲೋಕೋಪಯೋಗಿ ಸಚಿವರಾಗಿದ್ದ ಸಂದರ್ಭದಲ್ಲಿ ಪೈಲೆಟ್ ಯೋಜನೆ ಯಿಂದ 3 ಕೋಟಿ ರೂ. ಸಹಾಯಧನ ನೀಡಿದರ ಫಲವಾಗಿ ಇಂದು ಕೋಟ್ಯಂತರ ರೂ. ವಹಿವಾಟು ನಡೆಸಲು ಸಾಧ್ಯವಾಗಿದೆ.

ತಾಲೂಕು ಜೆಡಿಎಸ್ ಅಧ್ಯಕ್ಷ ಪರಮ ದೇವರಾಜೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪರಮ ಕೃಷ್ಣೇಗೌಡ, ತಾ.ಪಂ.ಮಾಜಿ ಸದಸ್ಯ ಎಸ್.ಎನ್.ಜಯರಾಮ್ ಸಂಘದ ಅಧ್ಯಕ್ಷ ಹರೀಶ್, ಉಪಾಧ್ಯಕ್ಷ ಎಸ್.ಎಚ್.ಮಂಜುನಾಥ್, ಬಿ. ಕೃಷ್ಣಮೂರ್ತಿ, ಎಚ್.ಎಸ್. ದಿವಾಕರ್, ಎಸ್.ಬಿ. ನಂದಕುಮಾರ್, ಅಣ್ಣಯ್ಯ, ಮಾಜಿ ಅಧ್ಯಕ್ಷರಾದ ರಮೇಶ್ ಹೊಸಹಳ್ಳಿ, ರಾಮಸ್ವಾಮಿ, ನಂಜೇಗೌಡ, ಶಾಂತರಾಜ್, ಮಂಜಣ್ಣ, ಶಿವಕುಮಾರ್, ಮಂಜೇಗೌಡ, ರವಿಕುಮಾರ್, ಪಾಲಾಕ್ಷ, ಸೋಮೇಗೌಡ, ಬ್ಯಾಂಕ್ ಮೇಲ್ವಿಚಾರಕರು ಎಸ್.ಆರ್.ಮಧು, ಎಸ್.ಎಂ.ಮಧು, ಪವಿತ್ರಾ ಇದ್ದರು.

> **ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಾಗ 150 ಕೋಟಿ ರೂ.ಇದ್ದ ಠೇವಣಿ ಯನ್ನು 500 ಕೋಟಿ ರೂ. ಠೇವಣಿ ಸಂಗ್ರಹಿಸಲಾಯಿತು. ಪ್ರಸ್ತುತ 1300 ಕೋಟಿ ರೂ. ಠೇವಣಿ ಸಂಗ್ರಹವಾಗಿದ್ದು, ಎಲ್ಲರ ಸಹಕಾರದಿಂದ 2025-26ನೇ ಸಾಲಿನಲ್ಲಿ 14 ಕೋಟಿ ರೂ.ಲಾಭಗಳಿಸಿದೆ.**
> ■ ಸಿ.ಎನ್.ಬಾಲಕೃಷ್ಣ, ಶಾಸಕ

ಮಹಿಳೆಯರ ಸೃಜನಶೀಲತೆಗೆ ಆದ್ಯತೆ



• **ಕೆಂಗೇರಿ:** ಮಹಿಳೆಯರ ಸೃಜನಶೀಲತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಕೆಂಗಲ್ ಹನುಮಂತಯ್ಯ ವಾರ್ಡ್‌ನ ಕಾಂಗ್ರೆಸ್ ಮುಖಂಡ ಚೇತನ್ ಗೌಡ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗಲ್ ಹನುಮಂತಯ್ಯ ವಾರ್ಡ್‌ನ ವಿವಿಧ ಬಡಾವಣೆಗಳಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾದ ರಂಗೋಲಿ ಸ್ಪರ್ಧೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಂಗೋಲಿ ಸ್ಪರ್ಧೆ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಜೊತೆಗೆ ಮಹಿಳೆಯರ ಸೃಜನಶೀಲತೆಗೆ ಪ್ರೋತ್ಸಾಹಿಸಿ ಹಿಂದೂತ್ವದ ಭಾಂದವ್ಯವನ್ನು ಬೆಸೆಯುವ ಸೌಹಾರ್ದತೆ ಮೂಡಿಸುವ ಸುಂದರ ಕಲೆಯ ಪ್ರತೀಕವೇ ರಂಗೋಲಿ. ಯಾವುದೇ ಜಾತಿ, ಮತ, ಧರ್ಮ, ಭಾಷೆ ಎಂಬ ಭೇದ ಭಾವ ಇಲ್ಲದೆ ನಾವೆಲ್ಲರೂ ಭಾರತೀಯರು ಒಂದೇ ಎಂಬ ಭಾವನೆಯಿಂದ ಎಲ್ಲಾ ಸಮುದಾಯದ ಜನರು ಒಗ್ಗೂಡಿದಾಗ ನಾವು ಭಾರತೀಯರು ಎಂಬ ಭಾವನೆಯಿಂದ ಜೀವಿಸಬೇಕು ಎಂದು ತಿಳಿಸಿದರು. ಕೆಂಗಲ್ ಹನುಮಂತಯ್ಯ ವಾರ್ಡ್‌ನ ಬಡಾವಣೆಗಳಲ್ಲಿ ವಿವಿಧ ಬಗೆಯ ರಂಗೋಲಿ ಕಂಗೊಳಿಸಿ ನೋಡುಗರ ಗಮನ ಸೆಳೆಯುವಂತಿದ್ದವು. ಕೆಂಗಲ್ ಹನುಮಂತಯ್ಯ ವಾರ್ಡ್ ಅಧ್ಯಕ್ಷ ಪುರುಷೋತ್ತಮ್, ಪುಷ್ಪ ದೇವರಾಜು ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಗೆ 1.63 ಕೋಟಿ ರೂ. ವಂಚನೆ

> ▸▸ ಟೆಲಿಕಾಂ ನಿಯಂತ್ರಣ ಸಂಸ್ಥೆ ಅಧಿಕಾರಿಗಳ ನೆಪದಲ್ಲಿ ಮೋಸ
> ▸▸ ಮೇಲಾಧಿಕಾರಿಯೊಂದಿಗೆ ಮಾತನಾಡುವಂತೆ ಸೂಚನೆ

• **ಬೆಂಗಳೂರು:** ಟೆಲಿಕಾಂ ನಿಯಂತ್ರಣ ಸಂಸ್ಥೆಯ ಅಧಿಕಾರಿಗಳೆಂದು ನಂಬಿಸಿ, ಮೊಬೈಲ್ ಸಂಪರ್ಕ ಹಾಗೂ ಬ್ಯಾಂಕ್ ಖಾತೆ ವಿಚಾರಣೆ ನೆಪದಲ್ಲಿ ಗೃಹಿಣಿಯೊಬ್ಬರಿಂದ ಹಂತ-ಹಂತವಾಗಿ 1.63 ಕೋಟಿ ರೂ. ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಘಟನೆ ಬೆಳಕಿಗೆ ಬಂದಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾಂಕ್ ಕಾಲೋನಿಯ ಶ್ರೀನಿವಾಸನಗರ ನಿವಾಸಿ ರಜನಿ ಎಂಬ ಗೃಹಿಣಿಗೆ ಅಪರಿಚಿತ ವ್ಯಕ್ತಿಯೊಬ್ಬ ಕರೆ ಮಾಡಿ, ತಾವು ಭಾರತದ ಟೆಲಿಕಾಂ ನಿಯಂತ್ರಣ ಸಂಸ್ಥೆಯಿಂದ ಮಾತನಾಡುತ್ತಿರುವುದಾಗಿ ಪರಿಚಯಿಸಿಕೊಂಡಿದ್ದಾನೆ. ನಿಮ್ಮ ಮೊಬೈಲ್ ಸಂಖ್ಯೆಯಿಂದ ಅಥವಾ ಅದಕ್ಕೆ ಸಂಬಂಧಿಸಿದಂತೆ ಕಾನೂನುಬಾಹಿರ ಕರೆಗಳು ನಡೆದಿವೆ ಎಂದು ಹೇಳಿ ವಿಚಾರಣೆ ನಡೆಸಬೇಕಾಗಿದೆ ಎಂದು ತಿಳಿಸಿದ್ದಾನೆ. ಆದರೆ, ಅಂತಹ ಯಾವುದೇ ಚಟುವಟಿಕೆ ನಡೆದಿಲ್ಲ ಎಂದು ಹೇಳಿ ರಜನಿ ಕರೆ ಸ್ಥಗಿತಗೊಳಿಸಿದ್ದಾರೆ.

ಆದರೂ ಮರು ಕರೆ ಮಾಡಿದ ವಂಚಕ, ಮೇಲಾಧಿಕಾರಿಯೊಂದಿಗೆ ಮಾತನಾಡುವಂತೆ ಸೂಚಿಸಿದ್ದಾನೆ. ಬಳಿಕ ಪ್ರದೀಪ್ ಸಾವಂತ್ ಎಂಬ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಕರೆ ಮಾಡಿದ ವ್ಯಕ್ತಿ, ರಜನಿ ಅವರ ವೈಯಕ್ತಿಕ ಮಾಹಿತಿಗಳನ್ನು ಪಡೆದುಕೊಂಡು ಅವರ ಕೆನರಾ ಬ್ಯಾಂಕ್ ಖಾತೆ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾಗಿದೆ ಎಂದು ಹೆದರಿಸಿದ್ದಾನೆ.

ಬಳಿಕ ಸದಾನಂದ ಎಂಬ ಮತ್ತೊಬ್ಬ ವ್ಯಕ್ತಿಗೆ ಕರೆ ವರ್ಗಾಯಿಸಲಾಗಿದ್ದು, ಆತ ವಿಚಾರಣೆ ಪೂರ್ಣಗೊಂಡ ನಂತರ ಹಣವನ್ನು ಮರಳಿ ನೀಡುವುದಾಗಿ ನಂಬಿಸಿ, ತಮ್ಮ ಸೂಚನೆಯಂತೆ ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡುವಂತೆ ತಿಳಿಸಿದ್ದಾನೆ. ಈ ರೀತಿಯಾಗಿ ವಿವಿಧ ಹಂತಗಳಲ್ಲಿ ವಂಚಕರು ಸೂಚಿಸಿದ ಖಾತೆಗಳಿಗೆ ಒಟ್ಟು 1,63,29,176 ರೂ. ಹಣವನ್ನು ವರ್ಗಾವಣೆ ಮಾಡಿದ್ದಾರೆ. ನಂತರ ಹಣವನ್ನು ಮರಳಿ ನೀಡದೇ ಸಂಪರ್ಕ ಕಡಿತಗೊಳಿಸಿದಾಗ ತಾವು ಸೈಬರ್ ವಂಚನೆಗೆ ಒಳಗಾಗಿರುವುದು ರಜನಿಗೆ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಅವರು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ತನಿಖೆ ಆರಂಭಿಸಿದ್ದಾರೆ.

ಸಾಫ್ಟ್‌ವೇರ್ ಅಳವಡಿಕೆ: ನಾಳೆಯಿಂದ ಆನ್‌ಲೈನ್ ಸೇವೆಗಳು ಸ್ಥಗಿತ

• **ಬೆಂಗಳೂರು:** ಬೆಸ್ಕಾಂ ವ್ಯಾಪ್ತಿಯ ಗ್ರಾಹಕರೇ ಗಮನಿಸಿ. ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (IPDS) ಎರಡನೇ ಹಂತದ ಸಾಫ್ಟ್‌ವೇರ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿರುವುದರಿಂದ, ಬೆಸ್ಕಾಂ ವ್ಯಾಪ್ತಿಯ ಒಟ್ಟು 20 ಪಟ್ಟಣಗಳಲ್ಲಿ ಜೂನ್ 10 ರಿಂದ ಜೂನ್ 30ರವರೆಗೆ ಆನ್‌ಲೈನ್ ಸೇವೆಗಳು ಸಂಪೂರ್ಣವಾಗಿ ಸ್ಥಗಿತಗೊಳ್ಳಲಿವೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಬೆಸ್ಕಾಂ, ಪ್ರಸ್ತುತ ಚಾಲ್ತಿಯಲ್ಲಿರುವ ಹಳೆಯ ಟಿಆರ್‌ಎಮ್ ಸಾಫ್ಟ್‌ವೇರ್ ಬದಲಿಗೆ ಅತ್ಯಾಧುನಿಕ ಐಪಿಡಿಎಸ್ ಐಟಿ ಅಪ್ಲಿಕೇಶನ್ ಅಳವಡಿಸಿಕೊಳ್ಳಲಾಗುತ್ತಿದೆ. ಈ ತಾಂತ್ರಿಕ ಬದಲಾವಣೆಯ ಸಂದರ್ಭದಲ್ಲಿ ಹಳೆಯ ದತ್ತಾಂಶಗಳನ್ನು ಹೊಸ ಸಾಫ್ಟ್‌ವೇರ್‌ಗೆ ವರ್ಗಾವಣೆ ಮಾಡುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಜೂನ್ 10 ರಿಂದ 30ರವರೆಗೆ, ಒಟ್ಟು 21 ದಿನಗಳು ಬೆಸ್ಕಾಂನ ಪ್ರಮುಖ ಆನ್‌ಲೈನ್ ಸೇವೆಗಳು ಲಭ್ಯವಿರುವುದಿಲ್ಲ ಎಂದು ತಿಳಿಸಿದೆ. ಹೊಸ ವಿದ್ಯುತ್ ಸಂಪರ್ಕ, ಹೆಸರು ವರ್ಗಾವಣೆ, ವಿದ್ಯುತ್ ಲೋಡ್ ಹೆಚ್ಚಳ, ಬೆಸ್ಕಾಂ ವೆಬ್‌ಸೈಟ್ ಮೂಲಕ ಬಿಲ್ ಪಾವತಿ ಸೇವೆಗಳು ಸಿಗುವುದಿಲ್ಲ, ಆದರೆ ಬೇರೆ ಬೇರೆ ಆ್ಯಪ್‌ಗಳಲ್ಲಿ ಬಿಲ್ ಪಾವತಿಗೆ ಅವಕಾಶವಿದೆ ಎಂದು ಬೆಸ್ಕಾಂ ಮಾಹಿತಿ ನೀಡಿದೆ. ಸೇವೆ ಸ್ಥಗಿತಗೊಳ್ಳಲಿರುವ 20 ಪಟ್ಟಣಗಳ ಪಟ್ಟಿ ಇಲ್ಲಿದೆ: ಬೆಂಗಳೂರು ಗ್ರಾಮಾಂತರ ಸುತ್ತಮುತ್ತಲಿನ ಪ್ರದೇಶಗಳಾದ ಬಾಗೇಪಲ್ಲಿ, ದೇವನಹಳ್ಳಿ, ಗುಡಿಬಂಡೆ, ಮಾಗಡಿ, ಮಾಲೂರು, ನೆಲಮಂಗಲ, ಶ್ರೀನಿವಾಸಪುರ, ವಿಜಯಪುರ, ಚಿತ್ರದುರ್ಗ, ದಾವಣಗೆರೆ ತುಮಕೂರು ವಲಯಗಳ ವ್ಯಾಪ್ತಿಗೆ ಬರುವ ಚನ್ನಗಿರಿ, ಚಿಕ್ಕನಾಯಕನಹಳ್ಳಿ, ಗುಬ್ಬಿ, ಹೊಳಲ್ಕೆರೆ, ಹೊನ್ನಾಳಿ, ಸೇವೆ ಸ್ಥಗಿತಗೊಳ್ಳಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಫಿಲಿಪ್ಪೀನ್ಸ್‌ನಲ್ಲಿ 7.8 ತೀವ್ರತೆ ಭೂಕಂಪ

ಪ್ರಬಲ ಕಂಪನಕ್ಕೆ 32 ಮಂದಿ ಸಾವು



• **ಮನಿಲಾ:** ದಕ್ಷಿಣ ಫಿಲಿಪ್ಪೀನ್ಸ್‌ನಲ್ಲಿ 7.8 ಪ್ರಬಲ ತೀವ್ರತೆಯ ಭೂಕಂಪ ಸಂಭವಿಸಿದ್ದು, 32 ಮಂದಿ ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಹಿನ್ನೆಲೆ ಕರಾವಳಿ ಪ್ರದೇಶದಲ್ಲಿ ಸುನಾಮಿ ಮುನ್ನೆಚ್ಚರಿಕೆ ನೀಡಲಾಗಿದೆ.

ಭೂಕಂಪದಿಂದ ಜನರಲ್ ಸ್ಯಾಂಟೋಸ್ ನಗರದಲ್ಲಿ ಹಲವು ಕಟ್ಟಡಗಳು ಕುಸಿದು ಬಿದ್ದಿದ್ದು, ಪ್ರಮುಖ ಮೂಲಸೌಕರ್ಯಗಳು ಹಾನಿಗೊಳಗಾಗಿದೆ. ಜನರಲ್ ಸ್ಯಾಂಟೋಸ್ ನಗರದ ಒಂದು ವಾಣಿಜ್ಯ ಸಂಕೀರ್ಣ ಸಂಪೂರ್ಣ ನೆಲಸಮವಾಗಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿವೆ.

ಭೂಕಂಪದ ನಂತರದ ಆಘಾತಗಳಿಂದಾಗಿ ಕುಸಿಯಬಹುದಾದ ಮತ್ತು ಹಾನಿಗೊಳಗಾದ ಕಟ್ಟಡಗಳು ಮತ್ತು ಮನೆಗಳಿಂದ ಹೊರಬಂದು ಸುರಕ್ಷಿತ ಸ್ಥಳದಲ್ಲಿ ರಕ್ಷಣೆ ಪಡೆಯುವಂತೆ ನಾಗರಿಕರಿಗೆ ಸೂಚಿಸಲಾಗಿದೆ. ಇಂಡೋನೇಷ್ಯಾ, ತೈವಾನ್, ಪಲಾವ್, ಪಪುವಾ ನ್ಯೂಗಿನಿಯಾ ಮತ್ತು ಜಪಾನ್ ದೇಶಗಳಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ.

ಅತೀ ಹೆಚ್ಚು ಜನಸಂಖ್ಯೆಯಿರುವ ಪ್ರದೇಶ: ಜನರಲ್ ಸ್ಯಾಂಟೋಸ್ 700,000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಬಂದರು ನಗರವಾಗಿದ್ದು, ಇದು ಟ್ಯೂನ ಮೀನು ರಫ್ತು ಉದ್ಯಮ ಮತ್ತು ಇತರ ವಾಣಿಜ್ಯದ ಪ್ರಾದೇಶಿಕ ಕೇಂದ್ರವಾಗಿದೆ. ಈ ವರ್ಷ ದೇಶವನ್ನು ಅಪ್ಪಳಿಸಿದ ಅತ್ಯಂತ ಪ್ರಬಲ ಭೂಕಂಪವು ಫಿಲಿಪ್ಪೀನ್ಸ್ ದ್ವೀಪಸಮೂಹದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದ್ವೀಪವಾದ ಮಿಂಡಾನಾವೊದ ಸಮುದ್ರದಲ್ಲಿ ಕೇಂದ್ರೀಕೃತವಾಗಿತ್ತು. ಬಾಕೋಲ್ಟೋಲ್ ಪ್ರಕಾರ, ಭೂಕಂಪವು ಸಾರಂಗಾನಿ ಪ್ರಾಂತ್ಯದ ಮಾಸಿಮ್ ಪಟ್ಟಣದಿಂದ ನೈಋತ್ಯಕ್ಕೆ ಸುಮಾರು 32 ಕಿಮೀ. (20 ಮೈಲಿ) ದೂರದಲ್ಲಿ 33 ಕಿಮೀ. (20 ಮೈಲಿ) ಆಳದಲ್ಲಿ ಸಂಭವಿಸಿದೆ.

ಫಿಲಿಪ್ಪೀನ್ಸ್ ಅಧ್ಯಕ್ಷ ಫರ್ಡಿನ್ಯಾಂಡ್ ಮಾರ್ಕೋಸ್ ಜೂನಿಯರ್ ತರಗತಿಗಳನ್ನು ರದ್ದುಗೊಳಿಸಲು ಆದೇಶಿಸಿದ್ದಾರೆ. ಭೂಕಂಪ ಪೀಡಿತ ಪ್ರಾಂತ್ಯಗಳಲ್ಲಿ ತಕ್ಷಣವೇ ದುರಸ್ತಿ ಕಾರ್ಯ ವಿಪತ್ತು-ಪ್ರತಿಕ್ರಿಯೆ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದಾರೆ.

ಶಿಕ್ಷಕರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತ : ಭೂಕಂಪನದ ವೇಳೆ ಶಾಲಾ ಶಿಕ್ಷಕರು ಮತ್ತು ಅಧಿಕಾರಿಗಳು ವಿದ್ಯಾರ್ಥಿಗಳನ್ನು ಅತ್ಯಂತ ಶಾಂತವಾಗಿ, ಶಿಸ್ತುಬದ್ಧವಾಗಿ ಮುಕ್ತ ಮೈದಾನಕ್ಕೆ ಕರೆತಂದು ಸುರಕ್ಷತೆ ಖಚಿತಪಡಿಸಿರುವುದು ಸಾರ್ವಜನಿಕರ ಶ್ಲಾಘನೆಗೆ ಪಾತ್ರವಾಗಿದ್ದು ಈ ದೃಶ್ಯವು ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ಪ್ರಶಂಸೆಗೆ ಪಾತ್ರವಾಗಿದೆ. ಸಂತ್ರಸ್ತ ಪ್ರದೇಶದ ಜನರಿಗೆ ಆಡಳಿತ ಮಂಡಳಿಯು ತಾತ್ಕಾಲಿಕ ವಸತಿ, ಆಹಾರ, ಶುದ್ಧ ನೀರು ಮತ್ತು ವೈದ್ಯಕೀಯ ಕಿಟ್‌ಗಳನ್ನು ವಿತರಿಸಲು ತುರ್ತು ಕೇಂದ್ರಗಳನ್ನು ತೆರೆದಿದೆ.

ಫಿಲಿಪ್ಪೀನ್ಸ್ ಪೆಸಿಫಿಕ್ ಮಹಾಸಾಗರದ ರಿಂಗ್ ಆಫ್ ಫೈರ್ ಅಂದರೆ ಭೂಕಂಪನ ಸೂಕ್ಷ್ಮ ವಲಯ ವ್ಯಾಪ್ತಿಯೊಳಗೆ ಇರುವುದರಿಂದ ಸಾಮಾನ್ಯವಾಗಿ ಇಲ್ಲಿನ ನಾಗರಿಕರು ಮತ್ತು ರಕ್ಷಣಾ ಪಡೆಗಳು ಇಂತಹ ಸವಾಲುಗಳನ್ನು ಎದುರಿಸಲು ಮೊದಲೇ ತರಬೇತಿ ಪಡೆದಿರುತ್ತಾರೆ. ಸರ್ಕಾರದ ತ್ವರಿತ ಸ್ಪಂದನೆ, ಡ್ರೋನ್ ತಂತ್ರಜ್ಞಾನದ ಕಣ್ಗಾವಲು ಮತ್ತು ನೆರೆರಾಷ್ಟ್ರಗಳ ಸೌಹಾರ್ದಯುತ ಬೆಂಬಲದಿಂದಾಗಿ ಮಿಂಡಾನಾವೊ ಪ್ರದೇಶವು ಅತ್ಯಂತ ವೇಗವಾಗಿ ಸಹಜ ಸ್ಥಿತಿಗೆ ಮರಳುತ್ತಿದ್ದು, ಪುನರ್ ನಿರ್ಮಾಣ ಕಾರ್ಯಗಳು ಸಶಕ್ತವಾಗಿ ಆರಂಭಗೊಂಡಿವೆ.

ಪ್ರಧಾನ್ ರಾಜೀನಾಮೆಗೆ ಇಂಡಿ ಕೂಟ ಆಗ್ರಹ

ಎಸ್‌ಐಆರ್ ಬಗ್ಗೆ ಸಿಜೆಐಗೆ ಪತ್ರ

• **ಹೊಸದಿಲ್ಲಿ:** ಇಂಡಿ ಕೂಟದ ವಿರೋಧ ಪಕ್ಷಗಳ ನಾಯಕರು ಸೋಮವಾರ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಮತ್ತು ಮತ ಅಕ್ರಮಗಳ ಕುರಿತು ಭಾರತದ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆಯಲು ತೀರ್ಮಾನಿಸಿದ್ದು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿದ್ದಾರೆ.

ದಿಲ್ಲಿಯಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಒಕ್ಕೂಟ ಐದು ವಿಷಯಗಳಲ್ಲಿ ಒಮ್ಮತಕ್ಕೆ ಬಂದಿರುವುದಾಗಿ ತಿಳಿಸಿದರು. ನೀಟ್-ಸಿಬಿಎಸ್‌ಇ ವಿವಾದದ ಹಿನ್ನೆಲೆಯಲ್ಲಿ ಧರ್ಮೇಂದ್ರ ಪ್ರಧಾನ್ ತಕ್ಷಣ ರಾಜೀನಾಮೆ ನೀಡಬೇಕು ಎಂಬುದಾಗಿ ವಿರೋಧ ಪಕ್ಷಗಳು ಸರ್ವಾನುಮತದಿಂದ ಒತ್ತಾಯಿಸಿವೆ. ದೇಶದ ಆರ್ಥಿಕ ಪರಿಸ್ಥಿತಿ, ನಿರುದ್ಯೋಗ, ಬೆಲೆ ಏರಿಕೆ, ರೈತರ ಸಮಸ್ಯೆಗಳು, ಹಿಂದುಳಿದ ವರ್ಗಗಳ ಮೇಲಿನ ದೌರ್ಜನ್ಯಗಳು ಹಾಗೂ ಜನಸಾಮಾನ್ಯರ ಸಮಸ್ಯೆಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸರ್ವಪಕ್ಷ ಸಭೆ ಕರೆಯಬೇಕು ಎಂದು ಖರ್ಗೆ ಹೇಳಿದರು.

ಇಂಡಿ ಕೂಟದ ನಾಯಕರು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಲು ತೀರ್ಮಾನಿಸಿದ್ದು, ಮುಂದಿನ ಸಭೆ ಆಗಸ್ಟ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿದೆ.

ಮಧ್ಯಪ್ರಾಚ್ಯದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವೆ ದಾಳಿ-ಪ್ರತಿದಾಳಿಗಳು ಪುನರಾರಂಭಗೊಂಡಿದ್ದು, 100 ದಿನಗಳ ಸಂಘರ್ಷದ ಹಿನ್ನೆಲೆಯಲ್ಲಿ ಭಾರತ ವ್ಯಾಪಕ ಆರ್ಥಿಕ ಆಘಾತ ಎದುರಿಸಲು ಸಜ್ಜಾಗಬೇಕಿದೆ. ಜಾಗತಿಕ ತೈಲ ಬೆಲೆಗಳು ಮತ್ತೆ ಏರಿಕೆಯಾಗಲಿವೆ ಮತ್ತು ಕೆಲವು ತಿಂಗಳುಗಳ ಕಾಲ ಸಂಘರ್ಷ ಮುಂದುವರಿದರೆ ಭಾರತದ ತೈಲ ಸಂಗ್ರಹ ಒತ್ತಡದಲ್ಲಿದೆ.



ಸವಾಲು ಎದುರಿಸಲು ಭಾರತ ಸಮಗ್ರ ಸಿದ್ಧತೆ

ಕ್ಷಿಪಣಿ ದಾಳಿ ಪುನರಾರಂಭ

ಯೆಮೆನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾಗಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಕೂಡ ಇರಾನ್ ನೆಲೆಗಳ ಮೇಲೆ ದಾಳಿ ನಡೆಸಿದೆ. ಅಮೆರಿಕಾದ ಮನವಿ ಸೇರಿದಂತೆ ಜಾಗತಿಕ ರಾಜತಾಂತ್ರಿಕ ಪ್ರಯತ್ನಗಳು ವಿಫಲವಾಗಿವೆ.ತನ್ನ ಇಂಧನ ಅಗತ್ಯಕ್ಕಾಗಿ ಈ ಪ್ರದೇಶವನ್ನು ಹೆಚ್ಚಾಗಿ ಅವಲಂಬಿಸಿರುವ ಭಾರತಕ್ಕೆ ಆತಂಕ ತಂದೊಡ್ಡಿದೆ.

ಸರ್ಕಾರದ ಮುನ್ನೆಚ್ಚರಿಕೆ

ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶೀಯ ಆರ್ಥಿಕತೆಯನ್ನು ರಕ್ಷಿಸಲು ಕೇಂದ್ರ ಸರ್ಕಾರ ಹಂತ-ಹಂತದ ನೀತಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ವರದಿಯೊಂದರ ಪ್ರಕಾರ, ದೇಶೀಯ ಬೇಡಿಕೆ ಪೂರೈಸಲು ಅಗತ್ಯ ವಸ್ತುಗಳು, ಕಚ್ಚಾ ವಸ್ತುಗಳು ಮತ್ತು ಸಿದ್ಧ ವಸ್ತುಗಳ ಲಭ್ಯತೆ ಖಚಿತಪಡಿಸಿಕೊಳ್ಳಲು ಈ ಕ್ರಮಗಳನ್ನು ತರಾತುರಿಯಲ್ಲಿ ಮಾಡದೆ, ರೂಪಾಯಿ ಮೌಲ್ಯ ಮತ್ತು ವಿದೇಶಿ ವಿನಿಮಯ ಹರಿವಿನಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಹಂತ-ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಏರ್‌ಲೈನ್ಸ್, ತೈಲ ಕಂಪನಿಗಳಿಗೆ ಸರ್ಕಾರಿ ಪ್ಯಾಕೇಜ್

ಸರ್ಕಾರ ರಿಸರ್ವ್ ಬ್ಯಾಂಕ್‌ನೊಂದಿಗೆ ಸಮನ್ವಯ ಸಾಧಿಸಿ ಸರ್ಕಾರಿ ಬಾಂಡ್‌ಗಳು ಮತ್ತು ಇತರ ಉಪಕರಣಗಳಲ್ಲಿ ವಿದೇಶಿ ಹೂಡಿಕೆಯನ್ನು ಹೆಚ್ಚಿಸಿದೆ. ಇದರೊಂದಿಗೆ, ಕಚ್ಚಾ ತೈಲ ಬೆಲೆ ಏರಿಕೆಯ ಆಘಾತದಿಂದ ರಕ್ಷಿಸಲು ವಿಮಾನಯಾನ ಸಂಸ್ಥೆಗಳಿಗೆ ವಿಶೇಷ ಪ್ಯಾಕೇಜ್ ಮಂಜೂರು ಮಾಡಲಾಗಿದೆ. ಹೆಚ್ಚುತ್ತಿರುವ ವೆಚ್ಚದ ಹೊರೆಯನ್ನು ಭಾಗಶಃ ಭರಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಆರ್ಥಿಕ ಬೆಂಬಲ ನೀಡಲಾಗುತ್ತಿದೆ. ಪೆಟ್ರೋಕೆಮಿಕಲ್ಸ್ ಮತ್ತು ಹತ್ತಿ ಕೊರತೆಯಿಂದ ಉತ್ಪಾದನಾ ವಲಯಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಸಬ್ಸಿಡಿ ಹೊರೆ ಏರಿಕೆ

ಹೆಚ್ಚುತ್ತಿರುವ ಸಬ್ಸಿಡಿಗಳು, ತೈಲ ವೆಚ್ಚ ಮತ್ತು ರೂಪಾಯಿ ಮೌಲ್ಯ ಕುಸಿತ ದೇಶದ ಬಜೆಟ್ ಲೆಕ್ಕಾಚಾರಕ್ಕೆ ಸವಾಲಾಗಿದೆ. ಪ್ರಸ್ತುತ ಬಜೆಟ್‌ನಲ್ಲಿ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ಕ್ಕೆ ಸೀಮಿತಗೊಳಿಸುವ ಗುರಿ ಹೊಂದಲಾಗಿದೆ. ಮೂಲಗಳ ಪ್ರಕಾರ, ರಸಗೊಬ್ಬರ ಸಬ್ಸಿಡಿ ಬಜೆಟ್ ಅಂದಾಜಿನ 1.7 ಲಕ್ಷ ಕೋಟಿ ರೂ. ಗಳಿಗಿಂತ ದುಪ್ಪಟ್ಟಾಗಿ 3.8 ಲಕ್ಷ ಕೋಟಿ ರೂ.ಗಳಿಗೆ ತಲುಪುವ ಸಾಧ್ಯತೆಯಿದೆ. ಕಳೆದ ವರ್ಷ 26,000 ಕೋಟಿ ರೂ. ಪಾವತಿಸಲಾಗಿದ್ದು, ಈ ವರ್ಷ ಅಡುಗೆ ಅನಿಲ ಸಬ್ಸಿಡಿ 12,085 ಕೋಟಿ ರೂ.ದಾಟುವ ನಿರೀಕ್ಷೆಯಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಯೂರಿಯಾ, ಡಿಎಪಿ ಮತ್ತು ಅಮೋನಿಯಾ ಬೆಲೆ ಏರಿಕೆಯು ಸಾರ್ವಜನಿಕ ಹಣಕಾಸಿನ ಮೇಲೆ ತೀವ್ರ ಒತ್ತಡವನ್ನು ಉಂಟುಮಾಡಿದೆ.

ಹೆಚ್ಚುತ್ತಿರುವ ವ್ಯಾಪಾರ ಕೊರತೆ

ಸರ್ಕಾರ ಈ ಹಿಂದೆ ಘೋಷಿಸಿದ್ದ ರಫ್ತು ಪ್ಯಾಕೇಜ್ ಉತ್ತಮ ಫಲಿತಾಂಶ ನೀಡುತ್ತಿದ್ದು, ಪ್ರಸಕ್ತ ಹಣಕಾಸು ವರ್ಷದ ಮೊದಲ ಎರಡು ತಿಂಗಳುಗಳಲ್ಲಿ ರಫ್ತು ವಲಯ ಎರಡಂಕಿ ಪ್ರಗತಿ ದಾಖಲಿಸಿದೆ. ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಮತ್ತು ಚಿನ್ನದ ಬೆಲೆ ಏರಿಕೆ ದೇಶದ ವ್ಯಾಪಾರ ಕೊರತೆಯ ಮೇಲೆ ತೀವ್ರ ಒತ್ತಡ ಹೇರುತ್ತಿದೆ. ಪೂರೈಕೆ ಜಾಲ ಮತ್ತು ದೇಶೀಯ ವೆಚ್ಚಗಳ ಮೇಲೆ ತೀವ್ರ ನಿಗಾ ಇಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಿಸರ್ವ್ ಬ್ಯಾಂಕ್ ಮುನ್ನೆಚ್ಚರಿಕೆ

ಭಾರತದ ಆರ್ಥಿಕತೆ, ಆರ್ಥಿಕ ವರ್ಷ 2026ರಲ್ಲಿ ಶೇ.7.7 ಮತ್ತು ಕೊನೆ ತ್ರೈಮಾಸಿಕದಲ್ಲಿ ಶೇ.7.8 ಪ್ರಗತಿ ದಾಖಲಿಸಿದ್ದರೂ, ಪ್ರಸ್ತುತ ಜಾಗತಿಕ ಮತ್ತು ದೇಶೀಯ ಒತ್ತಡಗಳನ್ನು ಎದುರಿಸುತ್ತಿದೆ. ಜೂ.6ರಂದು ನಡೆದ ಹಣಕಾಸು ನೀತಿ ಪರಾಮರ್ಶೆಯಲ್ಲಿ ಆರ್‌ಬಿಐ ರೆಪೊ ದರವನ್ನು ಶೇ.5.25 ಯಥಾಸ್ಥಿತಿಯಲ್ಲಿಟ್ಟಿದೆ.ಕೇಂದ್ರ ಬ್ಯಾಂಕ್ ಆರ್ಥಿಕ ವರ್ಷ 2027ರ ಜಿಡಿಪಿ ಬೆಳವಣಿಗೆಯ ಮುನ್ಸೂಚನೆ ಶೇ.6.9 ರಿಂದ ಶೇ.6.6 ಕ್ಕೆ ಇಳಿಸಿದೆ. ಪೂರೈಕೆ ಕೊರತೆ ಮುಂದುವರಿದರೆ ಹಣದುಬ್ಬರ ಕೇವಲ ಇಂಧನ ಮತ್ತು ಸರಕುಗಳಿಗೆ ಸೀಮಿತವಾಗದೆ ಇಡೀ ಆರ್ಥಿಕತೆಗೆ ವ್ಯಾಪಿಸಲಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.


ಭಾರತದ ಮುಂದಿರುವ ಸವಾಲುಗಳೇನು?

ತೈಲ ಬೆಲೆ ಏರಿಕೆ: ಹೂಡಿಕೆ-ಬಳಕೆಗೆ ಹಿಂಜರಿಕೆ

ಹೆಚ್ಚುತ್ತಿರುವ ತೈಲ ಬೆಲೆ ಮತ್ತು ಪೂರೈಕೆ ಜಾಲದ ಅಡಚಣೆಯಿಂದಾಗಿ ದೇಶೀಯ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಈಗಾಗಲೇ ಹೆಚ್ಚಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಂಡಿರುವುದರಿಂದ, ಇದು ಹೂಡಿಕೆ ಮತ್ತು ಬಳಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದ್ದು, ಒಟ್ಟಾರೆ ಆರ್ಥಿಕ ಪ್ರಗತಿಯ ವೇಗ ಕುಂಠಿತಗೊಳಿಸಲಿದೆ. ಆದ್ದರಿಂದ ಸದ್ಯ ಭಾರತ ಜನಸಾಮಾನ್ಯರಿಗೆ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸುತ್ತಿದೆ.

ಉದ್ಯೋಗ, ಆದಾಯ ಕುಂಠಿತ

ಸಮೀಕ್ಷೆ ಅವಧಿಯಲ್ಲಿ ಉದ್ಯೋಗ ಮಾರುಕಟ್ಟೆ ಮೇಲಿನ ವಿಶ್ವಾಸ ಮೈನಸ್ 9.1 ರಿಂದ ಮೈನಸ್ 14.4ಕ್ಕೆ ಕುಸಿದಿದೆ. ಶೇ.91.6 ರಷ್ಟು ಗ್ರಾಹಕರು ಕಳೆದ ಒಂದು ವರ್ಷದಲ್ಲಿ ಬೆಲೆಗಳು ಗಣನೀಯವಾಗಿ ಏರಿಕೆಯಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದಾಯದ ಬೆಳವಣಿಗೆ ಸ್ಥಗಿತಗೊಂಡಿದ್ದು, ಪ್ರಸ್ತುತ ಆದಾಯದ ನಿವ್ವಳ ಪ್ರತಿಕ್ರಿಯೆ 3.0 ರಿಂದ 0.9 ಕ್ಕೆ ಇಳಿದಿದೆ. ಇದರಿಂದಾಗಿ ಒಟ್ಟಾರೆ ವೆಚ್ಚ ಸಾಮರ್ಥ್ಯ 78.4 ರಿಂದ 74.0 ಕ್ಕೆ ಇಳಿಕೆಯಾಗಿದೆ.



ಕೈಗಾರಿಕಾ ವಲಯಕ್ಕೆ ಹಿನ್ನಡೆ

ವೃತ್ತಿಪರ ಮುನ್ಸೂಚನೆದಾರರು 2026-27ರ ನೈಜ ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ.6.9 ರಿಂದ ಶೇ.6.5ಕ್ಕೆ ಇಳಿಸಿದ್ದಾರೆ. ವೆಚ್ಚ ಏರಿಕೆ ಮತ್ತು ಅನಿಶ್ಚಿತ ಬೇಡಿಕೆಯಿಂದಾಗಿ ಕಂಪನಿಗಳು ತಮ್ಮ ವಿಸ್ತರಣಾ ಯೋಜನೆಗಳನ್ನು ಮುಂದೂಡುತ್ತಿವೆ. ಹೂಡಿಕೆಯಲ್ಲಿನ ಈ ದೀರ್ಘಾವಧಿಯ ಮಂದಗತಿ ಉತ್ಪಾದನಾ ಮತ್ತು ಮೂಲಸೌಕರ್ಯ ವಲಯಗಳ ಬೆಳವಣಿಗೆಗೆ ಧಕ್ಕೆ ತರಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಹಣದುಬ್ಬರ: 15 ತಿಂಗಳ ಗರಿಷ್ಠ ಮಟ್ಟಕ್ಕೆ

ಜೂನ್ 3 ರಿಂದ ಜೂನ್ 8 ರವರೆಗೆ 38 ಆರ್ಥಿಕ ತಜ್ಞರ ನಡುವೆ ನಡೆಸಿದ ಸಮೀಕ್ಷೆಯ ಪ್ರಕಾರ, ಭಾರತದ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ, ಮೇ ತಿಂಗಳಿನಲ್ಲಿ ಶೇ.4.0ಕ್ಕೆ ಏರಿದೆ. ಇದು ಏಪ್ರಿಲ್‌ನಲ್ಲಿ ಶೇ.3.48 ರಷ್ಟಿತ್ತು. ಕಳೆದ 15 ತಿಂಗಳುಗಳಿಂದ ಹಣದುಬ್ಬರ, ಆರ್‌ಬಿಐ ನಿಗದಿಪಡಿಸಿದ ಶೇ.4ರ ಮಧ್ಯಕಾಲೀನ ಗುರಿಗಿಂತ ಕೆಳಗಿತ್ತು. ತರಕಾರಿ ಮತ್ತು ಸಾರಿಗೆ ವೆಚ್ಚದ ಏರಿಕೆಯಿಂದಾಗಿ ಮೇ ತಿಂಗಳಿನಲ್ಲಿ ಗ್ರಾಹಕ ಬೆಲೆ ಸೂಚ್ಯಂಕವು ಶೇ.4ರ ಗಡಿ ದಾಟಿದೆ ಎಂದು ತಜ್ಞರು ತಿಳಿಸಿದ್ದಾರೆ.

ಕಿರುಸುದ್ದಿ

ಕಾದ ಕಬ್ಬಿಣ ಸೋರಿ ಒಂಬತ್ತು ಜನ ಸಾವು

• **ವಿಶಾಖಪಟ್ಟಣಂ:** ಆಂಧ್ರ ಪ್ರದೇಶದ ವಿಶಾಖಪಟ್ಟಣಂನಲ್ಲಿರುವ ರಾಷ್ಟ್ರೀಯ ಇಸ್ಪಾತ್ ನಿಗಮ್ ಲಿಮಿಟೆಡ್ (ವಿಜಾಗ್ ಸ್ಟೀಲ್ ಪ್ಲಾಂಟ್) ನಲ್ಲಿ ಸೋಮವಾರ ಸಂಭವಿಸಿದ ಭೀಕರ ಕೈಗಾರಿಕಾ ದುರಂತದಲ್ಲಿ ಕನಿಷ್ಠ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಪೊಲೀಸರ ಮಾಹಿತಿ ಪ್ರಕಾರ, ಕ್ರೇನ್ ಮೂಲಕ ಬಕೆಟ್‌ನಲ್ಲಿ ಸಾಗಿಸಲಾಗುತ್ತಿದ್ದ ಕರಗಿದ ಕಬ್ಬಿಣ ಆಕಸ್ಮಿಕವಾಗಿ ಕಾರ್ಮಿಕರ ಮೇಲೆ ಚೆಲ್ಲಿದ ಪರಿಣಾಮ ಈ ದುರಂತ ಸಂಭವಿಸಿದೆ. ಸುಮಾರು 1,600 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೊಂದಿದ್ದ ಕರಗಿದ ಕಬ್ಬಿಣ ಕಾರ್ಮಿಕರ ಮೇಲೆ ಬಿದ್ದ ಕಾರಣ ಸ್ಥಳದಲ್ಲೇ ಹಲವರು ಸಾವನ್ನಪ್ಪಿದ್ದಾರೆ. ಗಾಯಗೊಂಡ ಆರು ಕಾರ್ಮಿಕರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯ ತಕ್ಷಣ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ.

ಕೇರಳದ ಇಡುಕ್ಕಿಯಲ್ಲಿ ಆನೆ ತುಳಿತಕ್ಕೆ ಮಹಿಳೆ ಬಲಿ

• **ತಿರುವನಂತಪುರಂ:** ದುರಂತ ಘಟನೆಯೊಂದರಲ್ಲಿ, ಇಡುಕ್ಕಿ ಜಿಲ್ಲೆಯ ಚಿನ್ನಕನಾಲ್‌ನ ಸೂರ್ಯನೆಲ್ಲಿ ಬಳಿ ಕಾಡು ಆನೆಯ ದಾಳಿಯಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಅವರ ಪುತ್ರ ಗಂಭೀರವಾಗಿ ಗಾಯಗೊಂಡಿದ್ದಾನೆ. ಸೋಮವಾರ ಬೆಳಗ್ಗೆ ಮಾರಿ (35) ಎಂಬ ಮಹಿಳೆ ತನ್ನ ಮಗನನ್ನು ಶಾಲೆಗೆ ಬಿಡಲು ಹೊರಟಾಗ ಈ ದಾಳಿ ನಡೆದಿದೆ. ಪೊಲೀಸರ ಪ್ರಕಾರ, ಭಾರೀ ಮಂಜು ಮತ್ತು ಮಳೆಯಿಂದಾಗಿ ಆನೆ ಹಾದಿ ತಪ್ಪಿ ರಸ್ತೆ ಬದಿ ಸಂಭವಿಸಿದೆ ಎಂದು ವರದಿಯಾಗಿದೆ. ರಾಜ್ಯದ ಅರಣ್ಯ ಅಂಚಿನ ಪ್ರದೇಶಗಳಲ್ಲಿ ಮಾನವ-ಆನೆ ಸಂಘರ್ಷದ ಘಟನೆಗಳು ಹೆಚ್ಚುತ್ತಿರುವುದನ್ನು ಪ್ರತಿಭಟಿಸಿ, ಸ್ಥಳೀಯರು ಮಾರಿ ಅವರ ದೇಹವನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಅಧಿಕಾರಿಗಳಿಗೆ ಅವಕಾಶ ನೀಡಲು ನಿರಾಕರಿಸಿದ್ದು, ಇದರಿಂದಾಗಿ ಈ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿತ್ತು.

ಜೈಲು ಶಿಕ್ಷೆ ಮುಗಿದರೂ ಬಿಡುಗಡೆ ಭಾಗ್ಯವಿಲ್ಲ

• **ಢಾಕಾ:** ಕಾರ್ಯವಿಧಾನದ ವಿಳಂಬದಿಂದಾಗಿ ಸುಮಾರು 150 ಭಾರತೀಯರು ತಮ್ಮ ಜೈಲು ಶಿಕ್ಷೆ ಅವಧಿ ಪೂರ್ಣಗೊಳಿಸಿದರೂ ಬಾಂಗ್ಲಾದೇಶದ ಜೈಲುಗಳಲ್ಲಿ ನರಳುತ್ತಿದ್ದಾರೆ. 148 ಭಾರತೀಯರು ಸೇರಿದಂತೆ 152 ವಿದೇಶಿಯರು ತಮ್ಮ ಜೈಲು ಶಿಕ್ಷೆ ಪೂರ್ಣಗೊಳಿಸಿದ್ದರೂ ಬಾಂಗ್ಲಾದೇಶದ ಜೈಲಿನಲ್ಲೇ ಇದ್ದಾರೆ.

ನೇಪಾಳ ಗಡಿಯ ಬಳಿ ಅಭಿಷೇಕ್ ಆಪ್ತನ ಸೆರೆ

• **ಸಿಲಿಗುರಿ:** ಕೆಲವು ವಾರಗಳಿಂದ ತಲೆಮರೆಸಿಕೊಂಡಿದ್ದ ತೃಣಮೂಲ ಕಾಂಗ್ರೆಸ್ ನಾಯಕ, ಸಂಸದ ಅಭಿಷೇಕ್ ಬ್ಯಾನರ್ಜಿ ಆಪ್ತ ಜಹಾಂಗೀರ್ ಖಾನ್ ಅವರನ್ನು ಪಶ್ಚಿಮ ಬಂಗಾಳದ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಸೋಮವಾರ ನೇಪಾಳ ಗಡಿ ಸಮೀಪವಿರುವ ಉತ್ತರ ಬಂಗಾಳದಲ್ಲಿ ಬಂಧಿಸಿದೆ.

ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಆಪ್ತರಾಗಿರುವ ಖಾನ್ ನೇಪಾಳಕ್ಕೆ ಪಲಾಯನ ಮಾಡಲು ಯತ್ನಿಸುತ್ತಿದ್ದಾಗ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದಿದ್ದಾರೆ. ಕಲ್ಕತ್ತಾ ಹೈಕೋರ್ಟ್ ಅವರಿಗೆ ನೀಡಿದ್ದ ಮಧ್ಯಂತರ ಜಾಮೀನನ್ನು ಹಿಂಪಡೆದ ಬೆನ್ನಲ್ಲೇ ಈ ಬಂಧನ ನಡೆದಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ದಕ್ಷಿಣ 24 ಪರಗಣ ಕ್ಷೇತ್ರದಲ್ಲಾದ ವಿದ್ಯುನ್ಮಾನ ಮತಯಂತ್ರ (ಇವಿಎಂ) ಅಕ್ರಮ ಸೇರಿದಂತೆ ಖಾನ್ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿವೆ.

ಮೇ 21 ರಂದು ನಡೆದ ಫಾಲ್ಟಾ ವಿಧಾನಸಭಾ ಕ್ಷೇತ್ರದ ಮರುಚುನಾವಣೆಯಿಂದ ಖಾನ್ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದರು. ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೀಡಿದ ಅಭಿವೃದ್ಧಿ ಪ್ಯಾಕೇಜ್ ಭರವಸೆ ಕಾರಣ ತಾವು ಸ್ಪರ್ಧೆಯಿಂದ ಹಿಂದೆ ಸರಿದಿರುವುದಾಗಿ ಖಾನ್ ಪ್ರತಿಪಾದಿಸಿದ್ದರು. ಆದರೆ, ತೃಣಮೂಲ ಕಾಂಗ್ರೆಸ್ ಈ ನಿರ್ಧಾರದಿಂದ ದೂರ ಉಳಿದಿದ್ದು, ಇದು ಅವರ ವೈಯಕ್ತಿಕ ನಿರ್ಧಾರ ಎಂದು ಹೇಳಿತ್ತು.

ಏ.29 ರಂದು ನಡೆದಿದ್ದ ಮೊದಲ ಹಂತದ ಮತದಾನದಲ್ಲಿ ಚುನಾವಣಾ ಅಕ್ರಮಗಳು ನಡೆದ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮರುಚುನಾವಣೆಗೆ ಆದೇಶಿಸಿತ್ತು.

ಇಸ್ರೇಲ್ ಕಾನ್ಸುಲೇಟಲ್ಲಿ ಶಿವಾಜಿ ಪ್ರತಿಮೆ ಸ್ಥಾಪನೆ

• **ಮುಂಬೈ:** ಭಾರತ-ಇಸ್ರೇಲ್ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿರುವ ಮಹತ್ವದ ಸಾಂಸ್ಕೃತಿಕ ಸೂಚಕವಾಗಿ, ಮುಂಬೈನಲ್ಲಿರುವ ಇಸ್ರೇಲ್ ಕಾನ್ಸುಲೇಟ್ ಜನರಲ್ ಇಸ್ರೇಲ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸುವ ಯೋಜನೆ ಘೋಷಿಸಿದೆ. ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ವಾರ್ಷಿಕೋತ್ಸವದ ಶಿವರಾಜ್ಯಾಭಿಷೇಕ ದಿನದ ಶುಭ ಸಂದರ್ಭದಲ್ಲಿ ಈ ಘೋಷಣೆ ಮಾಡಲಾಗಿದೆ. ಈ ಪ್ರಸ್ತಾವಕ್ಕೆ ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಬೆಂಬಲ ದೊರೆತಿದೆ ಎಂದು ಇಸ್ರೇಲಿ ಕಾನ್ಸುಲ್ ಜನರಲ್ ಯಾನಿವ್ ರೆವಾಚ್ ತಿಳಿಸಿದ್ದಾರೆ.

ಈ ಯೋಜನೆ ಹಿಂದಿನ ಕಲ್ಪನೆ ವಿವರಿಸಿದ ರೆವಾಚ್, ಈ ಸ್ಮಾರಕ ಉಭಯ ದೇಶಗಳ ನಡುವಿನ ಬೆಳೆಯುತ್ತಿರುವ ಸಂಬಂಧವನ್ನು ಪ್ರತಿನಿಧಿಸುತ್ತದೆ. ಇಸ್ರೇಲ್‌ನಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಇಸ್ರೇಲ್ ಮತ್ತು ಭಾರತದ ನಡುವಿನ ನಿಕಟ ಸಂಬಂಧಗಳ ಪ್ರಬಲ ಸಂಕೇತವಾಗಿ ಕಾರ್ಯನಿರ್ವಹಿಸುತ್ತದೆ. ಮಹಾರಾಷ್ಟ್ರ ಮತ್ತು ಭಾರತೀಯ ಯಹೂದಿ ಸಮುದಾಯದ ನಡುವಿನ ಐತಿಹಾಸಿಕ ಸಂಪರ್ಕವನ್ನು ಗಮನದಲ್ಲಿಟ್ಟುಕೊಂಡು ಅಂತಹ ಸ್ಮಾರಕವು ವಿಶೇಷವಾಗಿ ಅರ್ಥಪೂರ್ಣವಾಗಿದೆ. ಅವರ ಅನೇಕ ವಂಶಸ್ಥರು ಇಂದು ಇಸ್ರೇಲಿ ಸಮಾಜಕ್ಕೆ ಗಮನಾರ್ಹ ಕೊಡುಗೆ ನೀಡುತ್ತಾರೆ ಎಂದು ರೆವಾಚ್ ಫಡ್ನವೀಸ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಪ್ರತಿಮೆ ಶಿವಾಜಿ ಮಹಾರಾಜರ ಪರಂಪರೆ ನಿಖರವಾಗಿ ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿಕೊಳ್ಳುವಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಬಹಿರಂಗಪಡಿಸಿದರು.

ಬಂಗಾಳದಿಂದ 4,800 ವಲಸಿಗರ ಗಡಿಪಾರು

• **ಕೋಲ್ಕತ್ತಾ:** ಪೌರತ್ವ(ತಿದ್ದುಪಡಿ) ಕಾಯ್ದೆ ವ್ಯಾಪ್ತಿಗೆ ಬಾರದ ಬಾಂಗ್ಲಾದೇಶದ 4,800 ಅಕ್ರಮ ನುಸುಳುಕೋರರನ್ನು ಕಳೆದ ಒಂದು ತಿಂಗಳಲ್ಲಿ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ದೀರ್ಘಕಾಲದಿಂದ ವಿವಾದಾತ್ಮಕ ರಾಜಕೀಯ ಮತ್ತು ಭದ್ರತಾ ಕಾಳಜಿಯಾಗಿ ಉಳಿದಿದ್ದ ಅಕ್ರಮ ವಲಸೆ ಸಮಸ್ಯೆಯನ್ನುದ್ದೇಶಿಸಿ ಮಾತನಾಡಿದ ಅಧಿಕಾರಿ, ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಗುರುತಿಸಲು, ಬಂಧಿಸಲು ಮತ್ತು ಗಡಿಪಾರು ಮಾಡಲು ತಮ್ಮ ಸರ್ಕಾರ ವ್ಯವಸ್ಥಿತ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ ಎಂದು ಪ್ರತಿಪಾದಿಸಿದರು. ಪ್ರಸ್ತುತ ನಿರಾಶ್ರಿತರ ಕೇಂದ್ರಗಳಲ್ಲಿ ಇನ್ನೂ 836 ಜನರನ್ನು ಇರಿಸಲಾಗಿದೆ. ಗಡಿಪಾರು ಪ್ರಕ್ರಿಯೆ ಪೂರ್ಣಗೊಳ್ಳಲು ಕಾಯಲಾಗುತ್ತಿದೆ ಎಂದು ಅಧಿಕಾರಿ ಹೇಳಿದರು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ರೂಪಿಸಿದ ಕಾನೂನುಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಗುರುತಿಸಿ ಮರಳಿ ಕಳುಹಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅಕ್ರಮ ನುಸುಳುಕೋರರನ್ನು ನೇರವಾಗಿ ಬಿಎಸ್‌ಎಫ್‌ಗೆ ಹಸ್ತಾಂತರಿಸಲಾಗುತ್ತಿದೆ. ಅಕ್ರಮ ವಲಸೆ ಪಶ್ಚಿಮ ಬಂಗಾಳ ಎದುರಿಸುತ್ತಿರುವ ಅತ್ಯಂತ ಗಂಭೀರ ಸಮಸ್ಯೆಗಳಲ್ಲಿ ಒಂದಾಗಿದೆ. ಕಣ್ಗಾವಲು ಬಲಪಡಿಸಲು ಮತ್ತು ಭವಿಷ್ಯದ ಒಳನುಸುಳುವಿಕೆಯನ್ನು ತಡೆಯಲು ರಾಜ್ಯ ಸರ್ಕಾರವು ಗಡಿ ಭದ್ರತಾ ಸಂಸ್ಥೆಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ತಿಂಡಿ ಪೊಟ್ಟಣಕ್ಕೆ ಸುದ್ದಿ ಪತ್ರಿಕೆ ಬಳಸುವಂತಿಲ್ಲ

• **ಹೊಸದಿಲ್ಲಿ:** ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಅಥವಾ ಸೇವಿಸಲು ಸುದ್ದಿ ಪತ್ರಿಕೆಗಳ ಬಳಕೆಯನ್ನು ತಕ್ಷಣವೇ ನಿಲ್ಲಿಸುವಂತೆ ಎಲ್ಲಾ ಆಹಾರ ವ್ಯಾಪಾರ ನಿರ್ವಾಹಕರಿಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಗಂಭೀರ ಆರೋಗ್ಯ ಅಪಾಯಗಳನ್ನು ಉಲ್ಲೇಖಿಸಿ ನಿರ್ದೇಶನ ನೀಡಿದೆ. ಮುಂಬೈನಲ್ಲಿ ಇತ್ತೀಚೆಗೆ ವಡಾ ಪಾವ್ ಮಾರಾಟಗಾರರೊಬ್ಬರು ಆಹಾರ ಪ್ಯಾಕ್ ಮಾಡಲು ಪತ್ರಿಕೆ ಬಳಸಿದ ಘಟನೆ ನಂತರ ಈ ಸಲಹೆ ನೀಡಲಾಗಿದೆ. ಅದರ ನಂತರ ಎಫ್‌ಎಸ್‌ಎಸ್‌ಎಐ ಮತ್ತು ಮುಂಬೈ ನಾಗರಿಕ ಸಂಸ್ಥೆ, ಬೃಹನ್ ಮುಂಬೈ ಮಹಾನಗರ ಪಾಲಿಕೆ ಜಂಟಿ ಕ್ರಮ ಕೈಗೊಂಡಿವೆ. ಪತ್ರಿಕೆಗಳು ಅಥವಾ ಅಂತಹುದೇ ಅನುಮೋದಿಸದ ವಸ್ತುಗಳನ್ನು ಆಹಾರ ಪ್ಯಾಕ್ ಅಥವಾ ಸೇವಿಸಲು ಬಳಸುವುದಕ್ಕೆ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ತೈಲ ಟ್ಯಾಂಕರ್‌ನಲ್ಲಿ ಅವಘಡ | 24 ನಾವಿಕರಿದ್ದ ಹಡಗಿನಲ್ಲಿ ಬೆಂಕಿ

ಎಲ್ಲ ಭಾರತೀಯ ನಾವಿಕರು ಸುರಕ್ಷಿತ

• **ಹೊಸದಿಲ್ಲಿ:** ಒಮನ್ ಕರಾವಳಿ ಸಮೀಪ ಸಂಚರಿಸುತ್ತಿದ್ದ ತೈಲ ಟ್ಯಾಂಕರ್‌ನಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿದ್ದು, ಅದರಲ್ಲಿದ್ದ 24 ಭಾರತೀಯ ನಾವಿಕರು ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗ ಸಚಿವಾಲಯ ತಿಳಿಸಿದೆ.

ಮಡಗಾಸ್ಕರ್ ಧ್ವಜ ಹೊಂದಿದ್ದ ಎಂಟಿ ಮ್ಯಾರಿವೆಕ್ಸ್ ಎಂಬ ತೈಲ ಟ್ಯಾಂಕರ್‌ನಲ್ಲಿ ಮಧ್ಯಾಹ್ನ ಸುಮಾರು 1.30 ಗಂಟೆ ವೇಳೆಗೆ ಬೆಂಕಿ ಕಾಣಿಸಿಕೊಂಡಿರುವ ಮಾಹಿತಿ ಲಭಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯದ ನಿರ್ದೇಶಕ ಒಪೇಶ್ ಕುಮಾರ್ ಶರ್ಮಾ, ಹಡಗಿನಲ್ಲಿ 24 ಭಾರತೀಯ ಸಿಬ್ಬಂದಿ ಇದ್ದರು ಎಂದು ತಿಳಿಸಿದರು.

ಬೆಂಕಿಗೆ ಕಾರಣವೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ, ಆದರೆ ಹಡಗು ಖಾಲಿಯಾಗಿದ್ದು, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹೋರ್ಮುಜ್ ಜಲಸಂಧಿಯಿಂದ ಸಾಕಷ್ಟು ದೂರದಲ್ಲಿತ್ತು ಎಂದು ಅವರು ಹೇಳಿದರು.

ಪ್ರಮುಖ ಅಂಶಗಳು

- ಭಾರತೀಯ ನೌಕಾಪಡೆ, ವಿದೇಶಾಂಗ ಸಚಿವಾಲಯದೊಂದಿಗೆ ಸಮನ್ವಯ
- ಇಸ್ರೇಲ್‌ಇರಾನ್ ಉದ್ವಿಗ್ನತೆಯ ನಡುವೆಯೇ ಘಟನೆ ಸಂಭವನೆ

ನಮಗೆ ಲಭ್ಯವಾಗಿರುವ ಪ್ರಾಥಮಿಕ ಮಾಹಿತಿಯ ಪ್ರಕಾರ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ. ಅವರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ, ವಿದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು, ಭಾರತೀಯ ನೌಕಾಪಡೆ ಹಾಗೂ ರಕ್ಷಣಾ ಸಚಿವಾಲಯದೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಶರ್ಮಾ ಹೇಳಿದರು. ಹಡಗುಗಳ ಸಂಚಾರದ ಮಾಹಿತಿ ನೀಡುವ ವ್ಯವಸ್ಥೆಯ ಪ್ರಕಾರ, ಟ್ಯಾಂಕರ್ ಮಸ್ಕಟ್‌ನ ದಕ್ಷಿಣ ಭಾಗದಲ್ಲಿ ಲಂಗರು ಹಾಕಿಕೊಂಡಿತ್ತು. ಒಮಾನ್‌ನ ದುಕ್ಮ್ ಬಂದರಿನತ್ತ ತೆರಳುತ್ತಿದ್ದ ವೇಳೆ ಹಡಗು ಮೇಲೆ ದಾಳಿ ನಡೆದಿರುವ ಶಂಕೆಯೂ ವ್ಯಕ್ತವಾಗಿದ್ದು, ಅದರ ಬಳಿಕ ತುರ್ತು ಸಹಾಯಕ್ಕಾಗಿ ಸಂದೇಶ ರವಾನಿಸಲಾಗಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಈ ಘಟನೆ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲೇ ಸಂಭವಿಸಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಮತ್ತೆ ದಾಳಿ-ಪ್ರತಿದಾಳಿ ಆರಂಭವಾಗಿದ್ದು, ಇಸ್ರೇಲ್ ಇರಾನ್‌ನ ಪೆಟ್ರೋಕೆಮಿಕಲ್ ಘಟಕಗಳ ಮೇಲೆ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್‌ನ ಹೈಫಾ ಪ್ರದೇಶದ ಗುರಿಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ವರದಿಯಾಗಿದೆ.

ಭದ್ರತಾ ಪಡೆ-ಪ್ರತಿಭಟನಾಕಾರರ ನಡುವೆ ಘರ್ಷಣೆ

ಪಿಒಕೆ ಸಂಘರ್ಷದಲ್ಲಿ 11 ಸಾವು

• **ರಾವಲಕೋಟ್:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ(ಪಿಒಕೆ) ರಾವಲಕೋಟ್‌ನಲ್ಲಿ ನಾಗರಿಕ ಸಮಾಜದ ಒಕ್ಕೂಟದ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಹಿಂಸಾತ್ಮಕ ಘರ್ಷಣೆಯಲ್ಲಿ ಭಾನುವಾರ 11 ಮಂದಿ ಮೃತಪಟ್ಟಿದ್ದಾರೆ. ಇತರೆ 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಜಂಟಿ ಅವಾಮಿ ಆಕ್ಷನ್ ಕಮಿಟಿ(ಜೆಎಎಸಿ) ಸದಸ್ಯರನ್ನು ಚದುರಿಸಲು ಪೊಲೀಸ್ ಮತ್ತು ಅರೆಸೇನಾ ಪಡೆಗಳು ಯತ್ನಿಸಿದಾಗ ಈ ಘಟನೆ ಸಂಭವಿಸಿದೆ. ಪೂಂಚ್ ವಲಯದ ಕಮಿಷನರ್ ಸರ್ದಾರ್ ವಹೀದ್ ಖಾನ್ ಪ್ರಕಾರ, ಮೃತರ ಪೈಕಿ ನಾಲ್ಕು ಪೊಲೀಸ್ ಅಧಿಕಾರಿಗಳು ಮತ್ತು ಒಬ್ಬ ದಾರಿಹೋಕ ಸೇರಿದಂತೆ ಏಳು ನಾಗರಿಕರು ಸೇರಿದ್ದಾರೆ. ಪ್ರಾದೇಶಿಕ ಪೊಲೀಸ್ ಮುಖ್ಯಸ್ಥ ಲಿಯಾಖತ್ ಮಲಿಕ್ ಮಾತನಾಡಿ, 23 ಭದ್ರತಾ ಸಿಬ್ಬಂದಿ ಮತ್ತು 50 ಪ್ರತಿಭಟನಾಕಾರರು ಗಾಯಗೊಂಡಿದ್ದು, ಅಧಿಕಾರಿಗಳು 30 ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ತಿಳಿಸಿದ್ದಾರೆ.



ಇಂದು ಲಾಕ್‌ಡೌನ್

ಜುಲೈ 27ರಂದು ನಡೆಯಲಿರುವ ಶಾಸನಸಭೆ ಚುನಾವಣೆಯಲ್ಲಿ ನಿರಾಶ್ರಿತರಿಗಾಗಿ 12 ಸ್ಥಾನಗಳನ್ನು ಕಾಯ್ದಿರಿಸಿರುವುದನ್ನು ವಿರೋಧಿಸಿ ಜಂಟಿ ಅವಾಮಿ ಕ್ರಿಯಾ ಸಮಿತಿ ಈ ಪ್ರತಿಭಟನೆಗೆ ಕರೆ ನೀಡಿತ್ತು. ಪ್ರಾದೇಶಿಕ ಸರ್ಕಾರ ಶುಕ್ರವಾರ ಈ ಒಕ್ಕೂಟವನ್ನು ಭಯೋತ್ಪಾದನಾ ವಿರೋಧಿ ಕಾಯ್ದೆಯಲ್ಲಿ ನಿಷೇಧಿತ ಗುಂಪು ಎಂದು ಘೋಷಿಸಿತ್ತು. ಅಲ್ಲದೆ, ಜೂನ್ 9 ರಂದು ನಿಗದಿಯಾಗಿದ್ದ ಲಾಕ್‌ಡೌನ್‌ಗಿಂತ ಮುಂಚಿತವಾಗಿ ಈ ಪ್ರದೇಶವನ್ನು ತೊರೆಯುವಂತೆ ಪ್ರವಾಸಿಗರಿಗೆ ಸಲಹೆ ನೀಡಿತ್ತು.

IN THE COURT OF THE PRINCIPAL CIVIL JUDGE & JMFC AT ANEKAL

C. MIS. No. 893/2026

BETWEEN: 1. Smt.Shanthamma W/o. Late Chenna Reddy, aged about 62 Years. **2. Sri.Jayapal Reddy** S/o Late Chennareddy, aged about 42 Years. **3. Sri.Nandish Reddy** S/o Late Chenna Reddy, aged about 38 Years, All are R/at- D No. 1/67, Muduganapalli Village, Hosuru Taluk, Krishnagiri District ...**PETITIONERS**

AND: The TMC, Anekal Taluk, Anekal ...**RESPONDENT**

PUBLIC NOTICE

Whereas the petitioners here in have filed the above petition Seeking a direction to the respondent to make the necessary entry relating to the death of the husband of Petitioner No. I and father of petitioners Nos.2 and 3, namely Sri. Chenna Reddy S/o Late Nanja Reddy Who expired on 17-08-2020 at ward No.8, Behind court, Manjunatha layout, Anekal Town, Bangalore urban District. the petitioners have filed the present proceeding in C.Misc. No.893/2026 before the Hon'ble Principal civil judge and JMFC at Anekal. Anybody having any objection to the relief sought in the petition may appear before the Hon'ble court either in person or through a duly authorized Advocate duly instructed on **10-07-2026** at 11:00 A.M. take a notice that default of appearance on the day above mentioned the matter will be heard and decided in your absence as per law.

Given under my hand and seal of the court on 08-06-2026.

By order of the Court, Sheristedar, Civil Judge, Jr Dvn & JMFC Court, Anekal.

M. NAGARAJU, Advocate
Office at: 2nd Floor Sri Dharma Shasta complex, Attibele Main Road, Anekal Town, Anekal.

[illegible]

ಕ್ರಿಮಿನಲ್ ಮಿಸ್ ನಂ.4922/2026

[illegible]

[illegible]

ಸಿ.ಮಿಸ್. ನಂ: 276/2026

[illegible]

ದಿನಾಂಕ: 05-06-2026

PUBLIC NOTICE

My client proposes to purchase agricultural land bearing Survey No.**119/2** measuring 1 Acres 36 Gunta, situated at Ponnasamudra Village, Y.N. Hosakote Hobli, Pavagada Taluk, Tumkuru District, more fully described in the **Schedule** herein below and hereinafter referred to as 'Schedule Property' from its owner/s **Jyothi P M W/o Nagaraju P S, ('Owner/s')**, residing at Ponnasamudra village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.119/2 measuring 1 Acres 36 Gunta land situated at Ponnasamudra Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.119/8,
West by : Land bearing Sy No.119/14,
North by : Land bearing Sy No. 119/4 & 119/12
South by : Land bearing 119/6, 119/7

THIRUMALESH.A BA, LL.B.,
Advocate & Legal Adviser
Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299,
Place: Pavagada. Date:9-6-2026

PUBLIC NOTICE

My client proposes to purchase agricultural land bearing Survey No.**116/5** measuring **2** Acres **00** Gunta, situated at Ponnasamudra Village, Y.N. Hosakote Hobli, Pavagada Taluk, Tumkuru District, more fully described in the Schedule herein below and hereinafter referred to as 'Schedule Property' from its owner/s **Julappa S/o Late Nalla Chittappa, ('Owner/s')**, residing at Ponnasamudra village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.116/5 measuring 2 Acres 00 Gunta land situated at Ponnasamudra Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.116/6,
West by : Land bearing Sy No.116/4,
North by : Land bearing Sy No. 116/7
South by : Land bearing 117/1 & 117/4

THIRUMALESH.A BA, LL.B.,
Advocate & Legal Adviser
Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299,
Place: Pavagada. Date:9-6-2026

PUBLIC NOTICE

My client proposes to purchase agricultural land bearing Survey No.**113/4** measuring **2** Acres **18** Gunta, situated at Ponnasamudra Village, Y.N. Hosakote Hobli, Pavagada Taluk, Tumkuru District, more fully described in the **Schedule** herein below and hereinafter referred to as **'Schedule Property'** from its owner/s **Kariyanna S/o Late Nagappa, ('Owner/s')**, residing at Ponnasamudra village, Y. N. Hosakote Hobli, Pavagada Taluk, Tumkuru District.

Owner/s has/have represented that he/she/they are the absolute owner/s of the Schedule Property & that the Schedule Property is not the subject matter of any subsisting & valid mortgages (apart from Rural bank), lien or charges in favour of anyone & that there are no litigations disposed/pending &/or any subsisting & valid agreements for sale or the like executed by the Owner/s in respect of the Schedule Property.

If any person/s, entity, firm, institution (corporate or otherwise) has any claims, any right, title or interest, upon the Schedule Property or any part thereof, the same may be brought to the notice of the undersigned in writing accompanied with the requisite details and supporting documents within Seven (7) days from the date of this notice, failing which, it shall be presumed that there are no encumbrances, charges, lien or any valid & subsisting agreements for sale or the like or any litigations, or any other claim, right, title or interest in respect of the Schedule Property.

Schedule:

All that piece and parcel of agricultural land bearing Survey No.113/4 measuring 2 Acres 18 Gunta land situated at Ponnasamudra Village, Y. N. Hosakote Hobli, Pavagada Taluk, Tumkuru District and bounded on the:

East by : Land bearing Sy No.114,
West by : Land bearing Sy No.113/2,
North by : Land bearing Sy No.60/1
South by : Land bearing Sy No.113/3

THIRUMALESH.A BA, LL.B.,
Advocate & Legal Adviser
Beside Vyshya Co-Operative Bank, Padmashree Complex, Bellary Road, Pavagada-561202, Mob: 7022695299,
Place: Pavagada. Date:9-6-2026

[illegible]

ಸಿ.ಮಿಸ್.ನಂ. 425/2026

[illegible]

[illegible]

ಸಿ.ಮಿಸ್.ನಂ. 421/2026

[illegible]

[illegible]

ಓ.ಎಸ್. ಸಂಖ್ಯೆ: 824/2022

[illegible]

[illegible]

ಪಿ ಅಂಡ್ ಎಸ್.ಸಿ 30/2026

[illegible] ಮೊ: 9448551873, ಆಧಾರ್ ನಂ: 664516553444 [illegible]

[illegible]

BEFORE SMT. SHILPA. R. NAYAK NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESHWARAM, AT BENGALURU

DISPUTE NO. DRB-1/CFS/ 141 /2025-2026

DISPUTANT: M/s. Margadarsi Chits (K) Pvt. Ltd., NO.717, "Poorna Shashi Complex",1st Floor, Modi Hospital Road, 2nd Stage, Basaveshwaranagar, Bengaluru - 560 086.

Rep. by its Foreman and Branch Manager, **Sri. G. Govinda Rao**

OPPONENTS:

Mrs. Sabiha Banu and Others

03. Mr. Mohammed Vahid S/o Mohammed Yasin Prop: Suhaib Transport No.93 Jamiya Masjid Road, M. S. Playa, Vidyaranyapura Bengaluru-560 097.

05. Mrs. Mubaleeqa Shain W/o P. Muzammil Ahmed No.493, Balaji Layout, 7th Cross, R.K. Hegde Nagar, Bengaluru-560 077.

06. Mr. Mohammed Aslam S/o Mohammed Yasin Prop: M. F. Store No.68, 1st Cross, Jamiya Masjid Road, M S Playa Vidyaranyapura Bengaluru-560 097.

"NOTICE TO THE OPPONENT's NO. 03, 05 & 06"

Whereas, the Disputant has filed the above dispute under Section 64 of the Chit Funds Act 1982, before the Deputy Registrar of Chits, First Zone, Bengaluru for recovery of **Rs.17,39,982/-** along with interest at 24% per annum and the Court Costs from the Opponent's.

Whereas, the Deputy Registrar of Chits - First Zone, Bangalore, has appointed me as his nominee and referred the above dispute to me for adjudication and disposal. The Opponent's No.03, 05 & 06 named above are therefore, hereby directed to appear before this authority in the Office of Disputant **"Basaveswara Nagar Branch office of the Disputant Company which is situated at No.717, Poorna Shashi Complex, 1st Floor, Modi Hospital Road, 2nd Stage, Basaveshwarnagar, Bengaluru - 560 086, on 25 -06-2026 at 03.00 P.M,** if they wish to contest the above case, with all relevant documents failing which the above dispute will be decided as per law in their absence.

Given under my hand and seal on **04-06-2026** at Bengaluru.

[SMT. SHILPA. R. NAYAK]
NOMINEE OF THE DEPUTY REGISTRAR OF CHITS-FIRST ZONE, BENGALURU

BEFORE SMT. P. ANURADHA NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESHWARAM, AT BENGALURU

DISPUTE NO. DRB-1/CFS/ 145 /2025-2026

DISPUTANT: M/s. Margadarsi Chits (K) Pvt. Ltd., NO.717, "Poorna Shashi Complex",1st Floor, Modi Hospital Road, 2nd Stage, Basaveshwaranagar, Bengaluru-560 086. Rep. by its Foreman and Branch Manager, **Sri. G. Govinda Rao**

OPPONENTS:

Mr. K. T. Karthik and Others

01. Mr. K.T. Karthik S/o K. Thimmappa, No.421-2-10, 2nd Main, 7th Cross, Amarajyothinagar, Vijayanagar, Bengaluru-560 040

03. Mr. N. Harish S/o Nagaraju. C Prop of Change Over Fitness Studio No. 40/11, 2nd and 3rd Floor, RR Plaza, KHB colony, 5th Main Road, Govindaraja Nagar, Vijayanagar, Bengaluru-560 040.

05. Mrs. B Rohini W/o K. Thimmappa No.421-2-10, 2nd Main, 7th Cross, Amarajyothinagar, Vijayanagar, Bengaluru-560 040

"NOTICE TO THE OPPONENT's NO. 01,03 & 05"

Whereas, the Disputant has filed the above dispute under Section 64 of the Chit Funds Act 1982, before the Deputy Registrar of Chits, First Zone, Bengaluru for recovery of **Rs.1,08,140/-** along with interest at 24% per annum and the Court Costs from the Opponent's.

Whereas, the Deputy Registrar of Chits - First Zone, Bangalore, has appointed me as his nominee and referred the above dispute to me for adjudication and disposal.

The Opponent's No.01, 03 & 05 named above are therefore, hereby directed to appear before this authority in the Office of Disputant **"Basaveswara Nagar Branch office of the Disputant Company which is situated at No.717, Poorna Shashi Complex, 1st Floor, Modi Hospital Road, 2nd Stage, Basaveshwarnagar, Bengaluru - 560 086, on 24-06-2026 at 03.00 P.M,** if they wish to contest the above case, with all relevant documents failing which the above dispute will be decided as per law in their absence.

Given under my hand and seal on **03-06-2026** at Bengaluru.

SMT. P. ANURADHA
NOMINEE OF THE DEPUTY REGISTRAR OF CHITS FIRST ZONE, BENGALURU

BEFORE SMT. SHILPA. R. NAYAK NOMINEE OF THE DEPUTY REGISTRAR OF CHITS, FIRST ZONE, MARGOSA ROAD, MALLESHWARAM, AT BENGALURU

DISPUTE NO. DRB-1/CFS/ 140 /2025-2026

DISPUTANT: M/s. Margadarsi Chits (K) Pvt. Ltd., NO.717, "Poorna Shashi Complex", 1st Floor, Modi Hospital Road, 2nd Stage, Basaveshwaranagar, Bengaluru-560 086. Rep. by its Foreman and Branch Manager, **Sri. G. Govinda Rao**

OPPONENTS:

Mrs. Sabiha Banu and Others

06. Mr. Mohammed Vahid S/o Mohammed Yasin Prop: Suhaib Transport No.93 Jamiya Masjid Road, M. S. Playa, Vidyaranyapura Bengaluru-560 097.

07. Mrs. Mubaleeqa Shain W/o P. Muzammil Ahmed No.493, Balaji Layout, 7th Cross, R.K. Hegde Nagar, Bengaluru-560 077.

"NOTICE TO THE OPPONENT's NO. 06 & 07"

Whereas, the Disputant has filed the above dispute under Section 64 of the Chit Funds Act 1982, before the Deputy Registrar of Chits, First Zone, Bengaluru for recovery of **Rs.18,30,976/-** along with interest at 24% per annum and the Court Costs from the Opponent's.

Whereas, the Deputy Registrar of Chits - First Zone, Bangalore, has appointed me as his nominee and referred the above dispute to me for adjudication and disposal.

The Opponent's No.06 & 07 named above are therefore, hereby directed to appear before this authority in the Office of Disputant **"Basaveswara Nagar Branch office of the Disputant Company which is situated at No.717, Poorna Shashi Complex, 1st Floor, Modi Hospital Road, 2nd Stage, Basaveshwarnagar, Bengaluru - 560 086, on 25-06-2026 at 03.00 P.M,** if they wish to contest the above case, with all relevant documents failing which the above dispute will be decided as per law in their absence.

Given under my hand and seal on **04-06-2026** at Bengaluru.

[SMT. SHILPA. R. NAYAK]
NOMINEE OF THE DEPUTY REGISTRAR OF CHITS-FIRST ZONE, BENGALURU

CHANGE OF NAME

I, **MOHAMMED ISMAIL**, aged about 61 years, residing at # 19/1/98, Mahaboob Nagar, Ramanagara-562159, formerly Ramanagara District, presently Bengaluru South District, Karnataka State, India, do hereby declare that I have changed my name from **MOHAMMED ISMAIL PASHA** to **MOHAMMED ISMAIL,** vide affidavit dated 08.06.2026, sworn to before T.V. Indira, Advocate & Notary Public, Govt. of India, Ramanagara District.

CHANGE OF NAME

I, **VIJENDRA JAIN** S/o PRAKASH MAL aged 27 years, residing at NO 9, BDG Lane, 12th Cross, Police Road Cross, Ranasinghpet, Cottonpet, Bengaluru-560053, do hereby declare that I have changed my name from **VIJENDRA KUMAR JAIN** TO **VIJENDRA JAIN**, henceforth, and I shall be known and called as **VIJENDRA JAIN** for all purposes, vide affidavit dated 08TH JUNE 2026, sworn before Advocate and Notary R **VISHWANATH** at Bangalore.

AFFIDAVIT

I, **Nasira Khanum**, Wife of Syed Nisar Ahmed, Aged 61 years, Residing at No. 21, 7th Cross, 34th Main, TMCS Layout, Sarakki, JP Nagar, Bengaluru - 560 078, do hereby declare that, I am holding Indian Passport bearing No. P0440227 in my said passport my name is wrongly spelt as **Nasira Khanum Nisar** instead of **Nasira Khanum** only. All my documents disclose my correct name as **Nasira Khanum** inadvertently suffix is added to my name as **Nasira Khanum Nisar.** I request you to correct my name as **NASIRA KHANUM** in my said passport. Vide affidavit dated 06.06.2026 sworn before Dr. R.S. Vijay, Notary Public, Govt. of India, Bengaluru.

ಜಿಲ್ಲಾ ಪಂಚಾಯತ್ ಬೆಂಗಳೂರು ನಗರ ಜಿಲ್ಲೆ
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ
ಬೆಂಗಳೂರು ದಕ್ಷಿಣ ತಾಲ್ಲೂಕು
ಸರ್ಕಾರಿ ಮಂಜುಗಡ್ಡೆ ಕಾರ್ಖಾನೆ ಕಟ್ಟಡ, ಕೆ.ಆರ್.ಸರ್ಕಲ್, ಬೆಂಗಳೂರು - 560001

ಸಂಖ್ಯೆ:ಹಗುಪ/01/2026-27 ದಿನಾಂಕ:08-06-2026

ಕೆರೆಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಪ್ರಕಟಣೆ

2026-27ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಪೂರ್ವ ತಾಲ್ಲೂಕುಗಳ ಈ ಕೆಳಗಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಸರ್ಕಾರಿ ನಿಯಮಾನುಸಾರ ವಿಲೇವಾರಿ ಮಾಡಲು ಉದ್ದೇಶಿಸಲಾಗಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಕೆರೆಗಳು: 1) ಕೆಂಗೇರಿ ಕೆರೆ, 2) ಚಿಕ್ಕ ಬೇಗೂರು ಕೆರೆ, 3) ಅರಕೆರೆ ಕೆರೆ, 4) ಹೊಸಕೆರೆಹಳ್ಳಿ ಕೆರೆ, 5) ಕೆಂಬತ್ತಹಳ್ಳಿ ಕೆರೆ, 6) ಪರಪ್ಪನ ಅಗ್ರಹಾರ ಕೆರೆ, 7) ಗುಬ್ಬಲಾಳ ಕೆರೆ, 8) ಸಿಂಗಸಂದ್ರ ಕೊಡಗಿ ಕೆರೆ, 9) ಹುಳಿಮಾವು ಕೆರೆ, 10) ಗಂಗಶೆಟ್ಟಿ ಕೆರೆ, 11) ಕೊತ್ತನೂರು ಕೆರೆ, 12) ಜರಗನಹಳ್ಳಿ ಕೆರೆ, 13) ಅಂಜಲೀಪುರ ಮೇಲಿನ ಕೆರೆ, 14) ಸುಬೇದಾರ್ ಕೆರೆ, 15) ಸುಬ್ಬರಾಯನ ಕೆರೆ.

ಬೆಂಗಳೂರು ಪೂರ್ವ ತಾಲ್ಲೂಕು ಕೆರೆಗಳು: 1) ಸಿದ್ದಾಪುರ ಕೆರೆ, 2) ರಾಂಪುರ ಕೆರೆ, 3) ವಾರಣಾಸಿ ಕೆರೆ, 4) ಬೇಳಕೆರೆ ಕೆರೆ, 5) ಕೌದೇನಹಳ್ಳಿ ಗಂಗಾಧರನ ಕೆರೆ, 6) ಶೀಲವಂತನ ಕೆರೆ, 7) ಮಹದೇವಪುರ ಕೆರೆ-2, 8) ಗುಂಜೂರು ಮಾವಿನಕೆರೆ.

ಸದರಿ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆಯಲು ಅರ್ಹ ಮೀನುಗಾರಿಕೆ ಸಹಕಾರ ಸಂಘ / ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರರ ಉತ್ಪಾದಕರ ಸಂಸ್ಥೆಗಳು (FFPOs) ಮಾತ್ರ ಅರ್ಜಿ (ಅನುಬಂಧ-9) ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:29-06-2026**. ಹೆಚ್ಚಿನ ಮಾಹಿತಿ ಮತ್ತು ಅರ್ಜಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆ.ಆರ್.ಸರ್ಕಲ್, ಕಬ್ಬನ್‌ಪಾರ್ಕ್, ಬೆಂಗಳೂರು-01 ರವರನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು
ಬೆಂಗಳೂರು ದಕ್ಷಿಣ ತಾಲ್ಲೂಕು

ವಾಪಿಆರ್/ಸಿಸಿ/1037/ಸಿಎಲ್/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎಸ್‌ಯುಪಿ(2)2/2026-27 ದಿನಾಂಕ: 08-06-2026

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ equipments (DHFWS/2026-27/IND2504) ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 19-06-2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/DK/KSMCA/029/ 26-27 dt. 08.06.2026

IN THE COURT OF THE XLI ADDL. CITY CIVIL & SESSIONS JUDGE AT BENGALURU (CCH-42)

P & SC No. 228/2026

BETWEEN : 1. Anuradha Y.K. Wife of Late K.G. Panduranga, Aged about 50 years, **: Petitioner No. 1**
2. Vasuki P. Son of Late K.G. Panduranga, Aged about 29 years, **: Petitioner No. 2**
3. Neha P. Daughter of Late K.G. Panduranga, Aged about 24 years, **: Petitioner No. 3**
All are residing at : R/at. No. 77, 34th Cross, 11th Main, 4th T Block, Jayanagar, Bangalore - 560041.

AND : Nil : Respondent

WHEREAS, the above named petitioners have presented a petition in this court under Section 372 of Indian Succession Act, praying for issue Succession Certificate in their favor in respect of the suit schedule properties as mentioned below left by the deceased Late Mr. K.G. Panduranga. Interested parties are hereby warned to appear in this court in person by their pleader duly instructed **on 24.6.2026 in the forenoon at 11 AM** to show cause against the petition, failing which the matter will be heard and determined as per law, considering as no claim by any person.

SCHEDULE

Sl. No.	Name of Share Holder	Company	Folio No.	No. of Shares	Certificate Nos.	Distinctive Nos.
1.	Late K.G. Panduranga	Reliance Industries Ltd.	072368304	210	66801912	6887782465 to 6887782674
2.	Late K.G. Panduranga	Reliance Industries Ltd.	072368304	105	62530906	6221277446 to 62212774570
3.	Late K.G. Panduranga	Reliance Industries Ltd.	072368304	25	14878005	396125600 to 396125624
4.	Late K.G. Panduranga	Reliance Industries Ltd.	072368304	5	14878006	396125625 to 396125629
5.	Late K.G. Panduranga	Reliance Industries Ltd.	072368304	20	53074150	1243938640 to 1243938659
6.	Late K.G. Panduranga	Reliance Industries Ltd.	072368304	10	53074151	1243938660 to 1243938669
7.	Late K.G. Panduranga	Reliance Industries Ltd.	072368304	45	58402168	1622538287 to 1622538331
			TOTAL	420 shares		

Given under my hand and seal of the Court on this 6th day of June 2026.

ADVOCATE FOR PETITIONER : **Legal Aid Trust** By **Vidya Selvamony**
Unit No.201, 2nd Floor, MSR Complex, No.11, Horamavu Main Road, Bangalore-560043.

By order of the Court, Senior Sheristedar, City Civil Court, Bengaluru.

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಮುಖ್ಯ ಸಂಶೋಧನಾಧಿಕಾರಿಯವರ ಕಛೇರಿ,
ಕರಾವಳಿ ಇಂಜಿನಿಯರಿಂಗ್ ವಿಭಾಗ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ.

ಐ.ಎಫ್.ಟಿ.ಸಂ:02/2026-27 ದಿನಾಂಕ : 05-06-2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕರಾವಳಿ ಇಂಜಿನಿಯರಿಂಗ್ ವಿಭಾಗದ ಮುಖ್ಯ ಸಂಶೋಧನಾಧಿಕಾರಿಯವರಿಂದ ಐ.ಎಫ್.ಟಿ ಸಂ: 02/2026-27 ರನ್ವಯ ಅಲ್ಪಾವಧಿ ಟೆಂಡರ್ ನಮೂದಿಸಿರುವ ಸೇವೆಗಳಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರಗಳನ್ನು ಕರ್ನಾಟಕ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರಲ್ಲಿನ ಷರತ್ತುಗಳಿಗೆ ಅನುಗುಣವಾಗಿ ಆಹ್ವಾನಿಸಲಾಗಿದೆ ಹಾಗೂ ದಿನಾಂಕದಿಂದ 05-06-2026ರಿಂದ ಡೌನ್‌ಲೋಡ್ ಮಾಡಬಹುದಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ವಿದ್ಯುನ್ಮಾನ ಜಾಲದಲ್ಲಿ ಪ್ರಕಟಣೆ ದಿನಾಂಕದಿಂದ 20-06-2026ರ 16.00 ಗಂಟೆವರೆಗೆ ಅನ್ನು ಸಲ್ಲಿಸತಕ್ಕದ್ದು, ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು ಅಥವಾ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆಯಬಹುದಾಗಿದೆ.

ಸಹಿ/-ಮುಖ್ಯ ಸಂಶೋಧನಾಧಿಕಾರಿ ಕರಾವಳಿ ಇಂಜಿನಿಯರಿಂಗ್ ವಿಭಾಗ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ

[illegible]/186/2026-27

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/877 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಸಂಖ್ಯೆ: ಕಹಾಮ/ಖರೀದಿ/ಟೆಂಡರ್-918/2026-27 ದಿನಾಂಕ. 08.06.2026

ಟೆಂಡರ್ ಪ್ರಕಟಣೆ (KMF/2026-27/SE5273)

ಕಹಾಮದ ನಂದಿನಿ ಪೆಟ್ ಉತ್ಪನ್ನ ಘಟಕ., ಚನ್ನರಾಯಪಟ್ಟಣ ಘಟಕದಿಂದ ಕರ್ನಾಟಕ ಹಾಗೂ ಇತರೆ ರಾಜ್ಯಗಳಿಗೆ ಯು.ಹೆಚ್.ಟಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಸಾಗಾಣಿಕಾ ಸೇವೆಗೆ 02 ವರ್ಷದ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಸಹಾಯವಾಣಿ ಸಂ.8046010000/ 8068948777.

ಟೆಂಡರ್ ಶುರುವಾಗುವ ದಿನಾಂಕ - 08.06.2026, ಪೂರ್ವಭಾವಿ ಸಭೆ - 16.06.2026 ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ -07.07.2026 ಸಂಜೆ 5.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ-08.07.2026 ಸಂಜೆ 5.05 ಘಂಟೆಗೆ, ವಾಣಿಜ್ಯ ಬಿಡ್ ತೆರೆಯುವ ದಿನಾಂಕ- ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.

ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ-01/2026-27/361
ದಿನಾಂಕ:04.06.2026

ಟೆಂಡರ್ ಪ್ರಕಟಣೆ ಸಂಖ್ಯೆ:01/2026-27/361 ದಿನಾಂಕ:04.06.2026 (ಏಕ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ ಇವರು ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿಗೆ ಶೇಕಡಾವಾರು ಟೆಂಡರ್‌ನ್ನು ಏಕ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ. ಕ್ರ.ಸಂ.ಕಾಮಗಾರಿ ವಿವರ 1)Providing manpower service through Out-source to office of the Executive Engineer, VJNL, Yettinahole project Division No-03 Arasikere, Assistant Executive Engineer, VJNL, Yettinahole project Sub Division No-10 Belur & Assistant Executive Engineer, VJNL, Yettinahole project Sub Division No-11 Arasikere, Hassan district for the year 2026-27 Pkg Work ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) ಅಂತರ್ಜಾಲ ತಾಣ, https://kppp.karnataka. gov.in ರಲ್ಲಿ ಪಡೆಯಬಹುದಾಗಿದೆ. ಗುತ್ತಿಗೆದಾರರ ದರ್ಜೆ ನೋಂದಾಯಿತ ಮ್ಯಾನ್‌ಪವರ್ ಏಜೆನ್ಸಿ. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಷರತ್ತುಗಳು/ ಬಿಡ್ಡುದಾರರ ಅರ್ಹತೆ/ಪೂರ್ವಭಾವಿ ಸಭೆಯ ವಿವರ/ಟೆಂಡರ್ ನಿಬಂಧನೆಗಳು/ ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ:10.06.2026 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ-ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174-233111 e-mail: eeypd3ask@gmail.com

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ,
ನಂ.3 ಅರಸೀಕೆರೆ

ವಾಸಾಸಂಇ/ಸಿಸನಿ/ಹಾಸನ/205/ಕೆಎಸ್‌ಎಂಸಿಎ/2026-27

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು.

ಸಂಖ್ಯೆ : 06/2026-27 ದಿನಾಂಕ: 06.06.2026

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು **ಕೆ.ಡಬ್ಲ್ಯು-3ರ ಮತ್ತು 2ರ ರೀತ್ಯ ಒಟ್ಟು 02** ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ **ರೂ.25.00 ಲಕ್ಷಗಳು** ಮತ್ತು ಗರಿಷ್ಠ **ಮೊತ್ತ ರೂ. 75.00 ಲಕ್ಷಗಳಾಗಿರುತ್ತದೆ.** ಇ.ಎಂ.ಡಿ ಕನಿಷ್ಠ **ರೂ 0.50 ಲಕ್ಷಗಳು** ಮತ್ತು ಗರಿಷ್ಠ **ರೂ 1.50 ಲಕ್ಷಗಳಾಗಿರುತ್ತದೆ.**

ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್" ನಲ್ಲಿ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

1)ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ: **ದಿನಾಂಕ 16.06.2026, ಸಂಜೆ 5-30 ಗಂಟೆ**

2)ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: **17.06.2026, ಸಂಜೆ 5-30 ಗಂಟೆ**

3) ಬಿಡ್ ತೆರೆಯುವ ದಿನಾಂಕ : **19.06.2026 ರ ಬೆಳಿಗ್ಗೆ 11-00 ಗಂಟೆ ನಂತರ.**

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು, ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಗಳನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/276/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ನಗರ ಜಿಲ್ಲೆ, ಕೆ. ಜಿ. ರಸ್ತೆ, ಬೆಂಗಳೂರು.
(ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಂಗಳೂರು)
E-Mail:- ka.bengaluru.urban.dudc@gmail.com Phone No: 08022211372/352

ಕ್ರ.ಸಂ: ಜಿನಕೋ/ಶಾ.ಶಾ/ನಗರೋತ್ಥಾನ ಹಂತ-04/01/2025-26 ದಿನಾಂಕ: 05-06-2026

ಟೆಂಡರ್ ಪ್ರಕಟಣೆ

ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿನ ಹುಣಸಮಾರನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಅಮೃತ್ ನಗರೋತ್ಥಾನ ಹಂತ 4.0 ನಿಧಿ ಅನುದಾನದಡಿ ಕಾಮಗಾರಿಗಳನ್ನು ನಿರ್ವಹಿಸಲು ನೋಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಮೊಹರಾದ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: **Construction of Auditorium on Second Floor of Hunasamaranahalli Municipal Office. Construction of Sports Club for Physically Disabled Person in Hunasamaranahalli Municipality, Construction of Sports Club and Toilet for Specially abled People in Hunasamaranahalli Municipality.** ವರ್ಗ: ಸಾಮಾನ್ಯ.

Indent Number: DMA/2025-26/BD/WORK_INDENT19831/ CALL-5. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.75.56. ಇಎಂಡಿ ಮೊತ್ತ ರೂ.127,840/-.

1. ಅರ್ಜಿ/ಮಾಹಿತಿಯನ್ನು ಸಲ್ಲಿಸುವ, ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ, ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕದ ವಿವರಗಳನ್ನು https://kppp.karnataka.gov.in ಪೋರ್ಟಲ್ ಮೂಲಕ ಪಡೆಯಬಹುದಾಗಿದೆ.
2. ಹೆಚ್ಚಿನ ಮಾಹಿತಿಯನ್ನು KPP Portal ನಲ್ಲಿ ಪಡೆಯಬಹುದಾಗಿದೆ.
3. ದೂರವಾಣಿ ಸಂಖ್ಯೆ 08022211372 / 352 ಇ-ಮೇಲ್: ka.bengaluru.urban.dudc@gmail.com

ಸಹಿ/- ಕಾರ್ಯಪಾಲಕ ಅಭಿಯಂತರರು.
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ.

DIPR/CP/RO1044/AAPL/2026-27

ಕರ್ನಾಟಕ ಸರಕಾರ
ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ 582101
ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂರವಾಣಿ: 08372-259932 ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ಕಾಂ.ವಿ/ವಹಿ/ಟೆಂಡರ್/2026-27 ದಿನಾಂಕ: 08-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2026-27 ನೇ ಸಾಲಿನ ನಗರಸಭೆ ಅನುದಾನದಲ್ಲಿ **ಒಟ್ಟು 02** ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.23.56 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, **ಇಂಡೆಂಟ್‌ನಂ:- 1)DMA/2026-27/OW/WORK_INDENT-59326 2) DMA/2026-27/OW/WORK_INDENT-59325 http://kppp.karnataka.gov.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಆದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	22-06-2026 Upto 16.00 hours
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	23-06-2026 Upto 16.30 hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

ವಾ.ಸಾ.ಇ./ಗದಗ/112/ಜಾಹೀರಾತು/2026-27

ಮರ ಕಡಿಯುವ ನಿರ್ಧಾರಕ್ಕೆ ಆಡಳಿತಾತ್ಮಕ ತಡೆ

• **ಬೆಂಗಳೂರು:** ನಗರದ ಹಸಿರು ಹೊದಿಕೆಗೆ ಕೊಡಲಿ ಪೆಟ್ಟು ನೀಡುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದ ನಿರ್ಧಾರಕ್ಕೆ ಕೊನೆಗೂ ಪರಿಸರ ಪ್ರೇಮಿಗಳ ಜನಾಂದೋಲನ ಹಾಗೂ ಆಡಳಿತಾತ್ಮಕ ಎಚ್ಚರಿಕೆಯಿಂದಾಗಿ ತಡೆ ಬಿದ್ದಿದೆ.

ಎಚ್‌ಎಸ್‌ಆರ್ ಲೇಔಟ್‌ನ ಬಿಡಿಎ ವಾಣಿಜ್ಯ ಸಂಕೀರ್ಣದ ಪುನರಾಭಿವೃದ್ಧಿ ಯೋಜನೆಗಾಗಿ ಬರೋಬ್ಬರಿ 184 ಹೆಮ್ಮರಗಳನ್ನು ಧರೆಗುರುಳಿಸಲು ಮುಂದಾಗಿದ್ದ ಬಿಡಿಎ, ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಮಣಿದು ತನ್ನ ಪ್ರಸ್ತಾವನೆಯನ್ನು ಅಧಿಕೃತವಾಗಿ ಹಿಂಪಡೆದಿದೆ.

ಖಾಸಗಿ ಸಹಭಾಗಿತ್ವದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣದ ಕಾಮಗಾರಿಗೆ ಅಡ್ಡಿಯಾಗುತ್ತವೆ ಎಂಬ ನೆಪವೊಡ್ಡಿ, ಅಲ್ಲಿನ ಹಸಿರು ಪರಿಸರವನ್ನು ನಿರ್ನಾಮ ಮಾಡಲು ಬಿಡಿಎ ಇಂಜಿನಿಯರ್‌ಗಳು ಯೋಜನೆ ರೂಪಿಸಿದ್ದರು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ '(ಜಿಬಿಎ) ಅರಣ್ಯ ವಿಭಾಗಕ್ಕೆ ಮರ ಕತ್ತರಿಸುವಂತೆ ಕೋರಿ ಪತ್ರವನ್ನೂ ಬರೆಯಲಾಗಿತ್ತು. ಆದರೆ, ಈ ವಿವಾದಾತ್ಮಕ ಪ್ರಸ್ತಾವನೆಯು ಬಿಡಿಎ ಅಧ್ಯಕ್ಷರ ಗಮನಕ್ಕೇ ಬಂದಿರಲಿಲ್ಲ ಎಂದು ಸಹ ಹೇಳಲಾಗುತ್ತಿದೆ. ವಿಷಯ ತಿಳಿಯುತ್ತಿದ್ದಂತೆ ಎಚ್ಚೆತ್ತುಕೊಂಡ ಬಿಡಿಎ ಅಧ್ಯಕ್ಷರು, ತಕ್ಷಣವೇ



ಯೋಜನೆಯ ನೀಲನಕ್ಷೆಯನ್ನು ಮರುರೂಪಿಸುವಂತೆ ಗುತ್ತಿಗೆದಾರರಿಗೆ ಮತ್ತು ಅಧಿಕಾರಿಗಳಿಗೆ ಕಡಕ್ ಆದೇಶ ನೀಡಿದ್ದಾರೆ. ಜಾಲ್ತಿಯಲ್ಲಿ ರುವ ಯಾವುದೇ ಮರಕ್ಕೂ ಒಂದಿಂಚೂ ಹಾನಿಯಾಗದಂತೆ ಕಟ್ಟಡ ವಿನ್ಯಾಸ ಬದಲಿಸಲು ಸೂಚಿಸಿದ್ದಾರೆ.

ಬೆಂಗಳೂರಿನ ಹಸಿರು ವಲಯವನ್ನು ರಕ್ಷಿಸಲು ಪ್ರಾಧಿಕಾರ ಬದ್ಧವಾಗಿದೆ. 184 ಮರಗಳನ್ನು ಕತ್ತರಿಸುವ ಪ್ರಸ್ತಾವನೆಯನ್ನು ಅಧ್ಯಕ್ಷರ ಗಮನಕ್ಕೆ ತರದೆ ಸಲ್ಲಿಕೆಯಾಗಿತ್ತು. ಈಗ ಪರಿಸರಕ್ಕೆ ಧಕ್ಕೆಯಾಗದಂತೆ ಯೋಜನೆ ಬದಲಿಸಲು ನಿರ್ದೇಶಿಸಲಾಗಿದೆ.ಮರ ಕಡಿಯುವ ಯಾವುದೇ ಪ್ರಸ್ತಾವನೆಗೂ ಅಧ್ಯಕ್ಷರ ಲಿಖಿತ ಅನುಮತಿ ಕಡ್ಡಾಯವಾಗಿದೆ ಎಂದು ಬಿಡಿಎ ತಿಳಿಸಿದೆ.

ಸಕಾಲಿಕ ನಿರ್ಧಾರಕ್ಕೆ ಸಂದ ಜಯ

ಬಿಡಿಎ ಪತ್ರದ ಬೆನ್ನಲ್ಲೇ ಮರ ಕಡಿಯುವಿಕೆಗೆ ಸಂಬಂಧಿಸಿದ ಅರ್ಜಿಯ ಕಡತವನ್ನು ಅಧಿಕೃತವಾಗಿ ಮುಚ್ಚಿರುವುದಾಗಿ ಜಿಬಿಎ ತಿಳಿಸಿದೆ. ಬೆಂಗಳೂರಿನ ಹಸಿರು ದಿನೇದಿನೆ ಕ್ಷೀಣಿಸುತ್ತಿರುವಾಗ ಬಿಡಿಎ ತೆಗೆದುಕೊಂಡಿರುವ ಈ ನಿರ್ಧಾರ ಸ್ವಾಗತಾರ್ಹ. ಅಭಿವೃದ್ಧಿ ಎಂಬುದು ಮರಗಳನ್ನು ಕಡಿಯುವುದಲ್ಲ, ಮರಗಳ ಸುತ್ತಲೂ ವಿನ್ಯಾಸ ರೂಪಿಸುವುದೇ ನಿಜವಾದ ಸುಸ್ಥಿರ ಅಭಿವೃದ್ಧಿ. ಕಾಂಕ್ರೀಟ್ ಕಾಡಾಗುತ್ತಿರುವ ಸಿಲಿಕಾನ್ ಸಿಟಿಯಲ್ಲಿ 184 ಜೀವಂತ ಮರಗಳು ಉಸಿರಾಡುವಂತಾಗಿದ್ದು, ನಾಗರಿಕರ ಜಾಗೃತಿ ಮತ್ತು ಆಡಳಿತದ ಸಕಾಲಿಕ ನಿರ್ಧಾರಕ್ಕೆ ಸಂದ ಜಯವಾಗಿದೆ ಎಂದು ಪರಿಸರ ಪ್ರೇಮಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- 184 ಹೆಮ್ಮರಗಳನ್ನು ಧರೆಗುರುಳಿಸಲು ಮುಂದಾಗಿದ್ದ ಬಿಡಿಎ
- ಪ್ರಸ್ತಾವನೆಯನ್ನು ಅಧಿಕೃತವಾಗಿ ಹಿಂಪಡೆದ ಪ್ರಾಧಿಕಾರ

ಅಭಿನಂದನೆ



ಕ್ರೆಡಾಯ್ ಕರ್ನಾಟಕದ ಪದಾಧಿಕಾರಿಗಳು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಅಭಿನಂದಿಸಿದರು. ಬೆಂಗಳೂರು ಕ್ರೆಡಾಯ್ ಅಧ್ಯಕ್ಷ ಜೈದ್ ನೋಮ್ಯಾನ್, ಕಾರ್ಯದರ್ಶಿ ನಿಶ್ಚಯ್ ಜಯಶಂಕರ್, ಮೆಂಟರ್ ಇರ್ಫಾನ್ ರಜಾಕ್, ಸಲಹೆಗಾರ ಶಂಕರ್ ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಅರ್ಜಿ ಆಹ್ವಾನ

• **ಬೆಂಗಳೂರು:** ಕರ್ನಾಟಕ ಕೃಷಿ ಇಲಾಖೆಯಲ್ಲಿ ಕೇಂದ್ರ ಪುರಸ್ಕೃತ ಆತ್ಮ ಯೋಜನೆಯಡಿ ನೇರಗುತ್ತಿಗೆ ಆಧಾರದ ಮೇಲೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ ತಾಂತ್ರಿಕ ವ್ಯವಸ್ಥಾಪಕರು ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕೃಷಿ ಸಂಬಂಧಿತ ವಲಯದಲ್ಲಿ ಸ್ನಾತಕೋತ್ತರ ಪದವಿ ಕಂಪ್ಯೂಟರ್ ಕೌಶಲ ಹೊಂದಿರುವವರು ಅಥವಾ ಕೃಷಿ ಪದವೀಧರರು ಕನಿಷ್ಠ 5 ವರ್ಷಗಳ ತಾಂತ್ರಿಕ ವ್ಯವಸ್ಥಾಪಕರಾಗಿ ಕೆಲಸ ಮಾಡಿದ ಅನುಭವ ಹೊಂದಿರಬೇಕು. ಕನಿಷ್ಠ 02 ವರ್ಷಗಳ ಕೃಷಿ ಅಥವಾ ಕೃಷಿ ಸಂಬಂಧಿತ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು. ಅಭ್ಯರ್ಥಿಗಳು ತಮ್ಮ ಬಯೋಡೇಟಾ ಮತ್ತು ಸಂಬಂಧಿತ ದಾಖಲಾತಿಗಳೊಂದಿಗೆ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಕೃಷಿ ಸಂಕೀರ್ಣ, ಬನಶಂಕರಿ ಇಲ್ಲಿ ತಮ್ಮ ಅರ್ಜಿಗಳನ್ನು ಸಲ್ಲಿಸಲು ಜೂ.15 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಕೃಷಿ ಸಂಕೀರ್ಣ, ಬನಶಂಕರಿ, ಬೆಂಗಳೂರು ನಗರ ಜಿಲ್ಲೆ – 560070 ಅಥವಾ ದೂರವಾಣಿ ಸಂಖ್ಯೆ 080.26711594 ಅನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಜೂ.14ಕ್ಕೆ ನೇತ್ರ ತಪಾಸಣಾ ಉಚಿತ ಶಿಬಿರ

• **ಬೆಂಗಳೂರು:** ಸ್ನೇಹ ಸಮ್ಮಿಲನ ಫೌಂಡೇಷನ್ ಹಾಗೂ ನಾರಾಯಣ ನೇತ್ರಾಲಯದ ಸಹಯೋಗದೊಂದಿಗೆ ಜೂ.14ರಂದು ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ಮತ್ತು ಕನ್ನಡಕ ವಿತರಣಾ ಶಿಬಿರವನ್ನು ಆಯೋಜಿಸಲಾಗಿದೆ. ಕಣ್ಣಿನ ಪೊರೆ ಸಮಸ್ಯೆಗಳಿಗೆ ಉಚಿತ ತಪಾಸಣೆ ಮಾಡಲಾಗುವುದು. ಕಣ್ಣಿನ ತಪಾಸಣೆಯ ನಂತರ ಶಸ್ತ್ರ ಚಿಕಿತ್ಸೆಗೆ ಒಳಪಡುವವರನ್ನು (ಬಿಪಿಎಲ್ ಕಾರ್ಡ್‌ದಾರರಾಗಿದ್ದಲ್ಲಿ) ಅಂದಿನ ದಿನವೇ ನಾರಾಯಣ ನೇತ್ರಾಲಯಕ್ಕೆ (ಬೊಮ್ಮಸಂದ್ರ)ಕರೆದೊಯ್ಯಲಾಗುವುದು. ವೈದ್ಯರು ಸೂಚಿಸಿದವರಿಗೆ ಕನ್ನಡಕಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಶಿಬಿರವು ಕಲಾಸಂಗಮ, ನಂ. 17 ಮತ್ತು 18, ಜಿಗಳ ರಸ್ತೆ, ಅತ್ತಿಬೆಲೆ (ಸೇಂಟ್ ಡಾಮಿನಿಕ್ಸ್ ಶಾಲೆ ಹತ್ತಿರ). ಬೆಳಗ್ಗೆ 8.30 ರಿಂದ ಮಧ್ಯಾಹ್ನ 12.30ರವರೆಗೆ ತಪಾಸಣೆ ನಡೆಯಲಿದೆ. ಮೊಬೈಲ್: 98459 19905, 97423 63334.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

• **ಬೆಂಗಳೂರು:** 2026–27ನೇ ಶೈಕ್ಷಣಿಕ ಸಾಲಿನ ಡಿ.ಇಎಲ್.ಇಡಿ, ಡಿ.ಪಿ.ಇಡಿ ಹಾಗೂ ಡಿ.ಪಿ.ಎಸ್.ಇ ಕೋರ್ಸ್‌ಗಳ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆಯು ಅವಧಿ ವಿಸ್ತರಿಸಿದೆ. ಶಾಲಾ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕದ ಜಂಟಿ ನಿರ್ದೇಶಕರು ಈ ಕುರಿತು ಪ್ರಕಟಣೆ ಹೊರಡಿಸಿದ್ದು, ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಮೇ.6 ರಿಂದ ಜೂ.1ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳ ಕೋರಿಕೆ ಮತ್ತು ಅನುಕೂಲತೆಯನ್ನು ಪರಿಗಣಿಸಿ, ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕವನ್ನು ಜೂ. 12 ರವರೆಗೆ ವಿಸ್ತರಿಸಲಾಗಿದೆ.

ಜೂ.21ಕ್ಕೆ ವಾರ್ಷಿಕ ಓಟ

• **ಬೆಂಗಳೂರು:** ಆರೋಗ್ಯಕರ ಜೀವನಶೈಲಿ ಹಾಗೂ ಸಮಾಜಮುಖಿ ಚಟುವಟಿಕೆಗಳ ಉತ್ತೇಜನಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ರಾಜರಾಜೇಶ್ವರಿ ನಗರದ ರನ್ ಅಡಿಕ್ಟ್ ಸಂಸ್ಥೆಯು ತನ್ನ 10ನೇ ವಾರ್ಷಿಕ ಓಟ ಕಾರ್ಯಕ್ರಮವನ್ನು ಜೂ.21ರಂದು ಆಯೋಜಿಸಲಿದೆ. ರಾಜರಾಜೇಶ್ವರಿ ನಗರದ ಬಾಲಕೃಷ್ಣ ಬಯಲು ರಂಗಮಂದಿರದಲ್ಲಿ ಭಾನುವಾರ ಬೆಳಗ್ಗೆ 6 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, 5 ಕಿ.ಮೀ. ಮತ್ತು 3 ಕಿ.ಮೀ. ವಿಭಾಗಗಳಲ್ಲಿ ಓಟ ಸ್ಪರ್ಧೆಗಳು ನಡೆಯಲಿವೆ. ಸುಮಾರು 4 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು, ಓಟಗಾರರು ಹಾಗೂ ವಿವಿಧ ವಲಯಗಳ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ವಿಶೇಷವೆಂದರೆ, ಸಂಸ್ಥೆಯು ಪ್ರತಿ ವರ್ಷ ತನ್ನ ಕಾರ್ಯಕ್ರಮಗಳನ್ನು ಸಂಪೂರ್ಣ ಪರಿಸರ ಸ್ನೇಹಿಯಾಗಿ ನಡೆಸುತ್ತಿದ್ದು, ಪ್ಲಾಸ್ಟಿಕ್ ಹಾಗೂ ಇತರ ಪರಿಸರಕ್ಕೆ ಹಾನಿಕಾರಕ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ತೊರೆದು ದೊಡ್ಡ ಪ್ರಮಾಣದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸುತ್ತಿದೆ. ರನ್ ಅಡಿಕ್ಟ್ ಸಂಸ್ಥೆಯು ಸ್ವಯಂಸೇವಕರಿಂದ ಮುನ್ನಡೆಸಲ್ಪಡುವ ಲಾಭರಹಿತ ಸಂಘಟನೆಯಾಗಿದ್ದು, ಸಮಾಜದ ವಿವಿಧ ಕ್ಷೇತ್ರಗಳ ಪರಿಣತರು ಸ್ವಯಂಪ್ರೇರಣೆಯಿಂದ ಸಂಸ್ಥೆಯ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿದ್ದಾರೆ. ಕಳೆದ ಹಲವು ವರ್ಷಗಳಿಂದ ಸಂಸ್ಥೆಯು ಗ್ರಾಮೀಣ ಸರ್ಕಾರಿ ಶಾಲೆಗಳ ಮಕ್ಕಳಿಗೆ ಮೂರು ಲಕ್ಷಕ್ಕೂ ಹೆಚ್ಚು ನೋಟ್ ಪುಸ್ತಕಗಳು, ಸಾವಿರಕ್ಕೂ ಅಧಿಕ ಡೆಸ್ಕ್‌ಗಳು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸಿದೆ. ಓಟದಲ್ಲಿ ಭಾಗವಹಿಸಲು ಆಸಕ್ತರು 9886673223 ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ. ನೋಂದಣಿಗಾಗಿ https://www.runaddicts.in/annualrun-reg ಜಾಲತಾಣಕ್ಕೆ ಭೇಟಿ ನೀಡಬಹುದು.

ಜಿಬಿಎ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಪರಾಮರ್ಶನಾ ಸಭೆಯಲ್ಲಿ ತೀರ್ಮಾನ

ನಗರದ ಅನುಪಯುಕ್ತ ಕೆರೆಗಳಲ್ಲಿ ಪ್ರಯೋಗ



• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನಗರದಲ್ಲಿ ಪ್ರವಾಹ ನಿಯಂತ್ರಣ ಮತ್ತು ಪರಿಸರ ಸಂರಕ್ಷಣೆಗಾಗಿ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೆತ್ತಿ ಕೊಂಡಿದೆ. ನಗರದ ಬಳಕೆಯಾಗದ ಕೆರೆಗಳನ್ನು ಪ್ರವಾಹ ನಿರೋಧಕ ಭೂದೃಶ್ಯಗಳನ್ನಾಗಿ ಪರಿವರ್ತಿಸುವ ಕುರಿತು ವಿಸ್ತಾರವಾದ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ಈ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದ ಮೇರೆಗೆ ಜಿಬಿಎ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದಪರಾಮರ್ಶನಾಸಭೆಯನ್ನುನಡೆಸಲಾಗಿದೆ.ಬೆಂಗಳೂರಿನಲ್ಲಿ ಮಳೆಗಾಲದಲ್ಲಿ ಉಂಟಾಗುವ ಪ್ರವಾಹದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮತ್ತು ಹವಾಮಾನ ವೈಪರೀತ್ಯಕ್ಕೆ ತಕ್ಕಂತೆ ನಗರವನ್ನು ಸಜ್ಜುಗೊಳಿಸಲು ಪ್ರಕೃತಿ ಆಧಾರಿತ ಪರಿಹಾರಗಳಿಗೆ ಜಿಬಿಎ ಮುಂದಾಗಿದೆ. ಜಿಬಿಎ ವ್ಯಾಪ್ತಿಯಲ್ಲಿರುವ ಸಮೀಕ್ಷೆ ಮಾಡಲಾದ 19 ಬಳಕೆಯಾಗದ ಕೆರೆಗಳ ಪ್ರಸ್ತುತ ಸ್ಥಿತಿಗತಿಯನ್ನು ಸಭೆಯಲ್ಲಿ ಚರ್ಚಿಸಲಾಗಿದೆ. ಇವುಗಳ ಮರುಬಳಕೆಗಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ

ಲಭ್ಯವಿರುವ ಎಲ್ಲ ಮುಕ್ತ ಕೆರೆ ಜಾಗಗಳನ್ನು ತಕ್ಷಣವೇ ಸಮೀಕ್ಷೆ ನಡೆಸಿ, ಸುತ್ತಲೂ ಬೇಲಿ ಹಾಕಬೇಕು. ಗುರುತಿಸಲಾದ ಪ್ರವಾಹ ನಿರೋಧಕ ಭೂದೃಶ್ಯಗಳ ಅಭಿವೃದ್ಧಿಗಾಗಿ ಒಂದು ತಿಂಗಳ ಒಳಗಾಗಿ ವಿವರವಾದ ಯೋಜನಾ ವರದಿ ಸಿದ್ಧಪಡಿಸಬೇಕು. ರಕ್ಷಣೆ ಮತ್ತು ಅರಣ್ಯ ಇಲಾಖೆಗಳಂತಹ ವಿವಿಧ ಸಂಸ್ಥೆಗಳ ಅಧೀನದಲ್ಲಿರುವ, ಇದುವರೆಗೆ ಅಭಿವೃದ್ಧಿಗೊಳ್ಳದ ಜೀವಂತ ಕೆರೆಗಳನ್ನು ಗುರುತಿಸಿ, ಅವುಗಳನ್ನು ಜಿಬಿಎಗೆ ಹಸ್ತಾಂತರಿಸುವ ಮತ್ತು ಅಭಿವೃದ್ಧಿಪಡಿಸುವ ಸಾಧ್ಯತೆಗಳ ಬಗ್ಗೆ ವರದಿ ನೀಡಬೇಕೆಂದು ಅಧಿಕಾರಿಗಳಿಗೆ ಜಿಬಿಎ ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ.



19 ಕೆರೆಗಳ ಪ್ರಸ್ತುತ ಸ್ಥಿತಿ

ಸಮೀಕ್ಷೆ ಮಾಡಲಾದ 19 ಕೆರೆಗಳಲ್ಲಿ 8 ಕೆರೆಗಳನ್ನು ಈಗಾಗಲೇ ವಿವಿಧ ವಸತಿ ಬಡಾವಣೆಗಳು ಮತ್ತು ವಸತಿ ಯೋಜನೆಗಳಿಗಾಗಿ ಮಾರ್ಪಡಿಸಲಾಗಿದೆ. 5 ಕೆರೆಗಳು ಆಟದ ಮೈದಾನಗಳು, ಉದ್ಯಾನವನಗಳು ಮತ್ತು ಕ್ರೀಡಾಂಗಣಗಳಾಗಿ ಬದಲಾಗಿವೆ. ಇದಕ್ಕೆ ಉದಾಹರಣೆಯಾಗಿ ಹೆಬ್ಬೂರು ಕೆರೆಯನ್ನು ವೃಕ್ಷ ಉದ್ಯಾನವನವನ್ನಾಗಿ ಹಾಗೂ ಸಂಪಂಗಿರಾಮ ಕೆರೆಯನ್ನು ಕಂಠೀರವ ಕ್ರೀಡಾಂಗಣವನ್ನಾಗಿ ಪರಿವರ್ತಿಸಲಾಗಿದೆ. ಇನ್ನುಳಿದ 6 ಕೆರೆಗಳು ಪ್ರಸ್ತುತ ಒತ್ತುವರಿಯಾಗಿದ್ದು, ಇವುಗಳಲ್ಲಿ ಕೆಲವು ಭಾಗಗಳಲ್ಲಿ ಮಾತ್ರ ಮರುಸ್ಥಾಪನೆಗೆ ಯೋಗ್ಯವಾದ ಮುಕ್ತ ಭೂಮಿ ಲಭ್ಯವಿದೆ ಎಂದು ಸರ್ಕಾರದ ವರದಿಯ ಮೂಲಕ ತಿಳಿದು ಬಂದಿದೆ.

ಪರಿವರ್ತಿಸಲು ಗುರುತಿಸಲಾದ ಕೆರೆಗಳು

ಕೆರೆ ಹೆಸರು	ಅಭಿವೃದ್ಧಿಪಡಿಸುವ ತಂತ್ರಜ್ಞಾನ-ಪರಿಕಲ್ಪನೆ
ಲಿಂಗರಾಜಪುರ ಕೆರೆ	ಪ್ರವಾಹ ನಿರೋಧಕ ಭೂದೃಶ್ಯ ಮತ್ತು ಬಯೋಸ್ವೇಲ್ಸ್
ದ್ಯಾಟಗುಂಟೆಪಾಳ್ಯ ಕೆರೆ	ಪ್ರಕೃತಿ ಆಧಾರಿತ ನೀರು ಶೇಖರಣಾ ತಾಣ
ಚಿಕ್ಕಲಸಂದ್ರ ಕೆರೆ	ತಾತ್ಕಾಲಿಕ ಮಳೆನೀರು ನಿಯಂತ್ರಣ ಜಾಗ
ಇಟ್ಟಮಡು ಕೆರೆ	ಪರಿಸರ ಸ್ನೇಹಿ ಜಲಾನಯನ ಪ್ರದೇಶ

- ಜಿಬಿಎ ವ್ಯಾಪ್ತಿಯ ಸಮೀಕ್ಷೆ ಮಾಡಲಾದ ಹತ್ತೊಂಬತ್ತು ಬಳಕೆಯಾಗದ ಕೆರೆಗಳ ಪ್ರಸ್ತುತ ಸ್ಥಿತಿಗತಿ ಚರ್ಚೆ

ಪ್ರವಾಹ ನಿರೋಧಕ ಭೂದೃಶ್ಯ ಪರಿಕಲ್ಪನೆ

ಜಿಬಿಎಯ ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ (ಎಫ್‌ಇಸಿ) ವಿಭಾಗವು ಅಭಿವೃದ್ಧಿಪಡಿಸಿರುವ ನೂತನ ಪರಿಕಲ್ಪನೆಯಡಿ, ಭಾರಿ ಮಳೆಯ ಸಂದರ್ಭದಲ್ಲಿ ಹೆಚ್ಚುವರಿ ಮಳೆನೀರನ್ನು ತಾತ್ಕಾಲಿಕವಾಗಿ ಹಿಡಿದಿಟ್ಟುಕೊಳ್ಳುವ ಪ್ರಕೃತಿ ಆಧಾರಿತ ಜಾಗಗಳನ್ನು ನಿರ್ಮಿಸಲಾಗುತ್ತದೆ. ಈ ಯೋಜನೆಯ ಮೊದಲ ಹಂತವಾಗಿ ನಗರದ ಪ್ರಮುಖ ನಾಲ್ಕು ಕೆರೆಗಳನ್ನು ಗುರುತಿಸಲಾಗಿದೆ. ಇದರೊಂದಿಗೆ ನಗರದಾದ್ಯಂತ ತಾತ್ಕಾಲಿಕ ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳನ್ನು ಗುರುತು ಮಾಡಲಾಗುತ್ತಿದ್ದು, ತೀವ್ರ ಮಳೆಯ ಸಮಯದಲ್ಲಿ ಮಳೆನೀರನ್ನು ಹಿಡಿದಿಟ್ಟುಕೊಳ್ಳಲು ಸೂಕ್ತವಾದ ಸ್ಥಳವಾಗಿ ಮಾರ್ಪಡಿಸಲು ಚಿಂತಿಸಲಾಗುತ್ತಿದೆ.

ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟ

• **ಬೆಂಗಳೂರು:** ಕರ್ನಾಟಕ ಲೇಖಕಿಯರ ಸಂಘವು 2025ನೇ ಸಾಲಿನ ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟಿಸಿದೆ. ಪ್ರಶಸ್ತಿಯು ಮೂರು ವಿಭಾಗಗಳನ್ನು ಒಳಗೊಂಡಿದ್ದು, ಆಯಾ ವಿಭಾಗದಲ್ಲಿ ಸಾಧನೆಗೈದ ಲೇಖಕಿಯರಿಗೆ ಪ್ರಶಸ್ತಿ ನೀಡಲಾಗುತ್ತದೆ. ಕಾವ್ಯ ವಿಭಾಗದಲ್ಲಿ ಮಾಧವಿ ಭಂಡಾರಿ ಕೆರೆಕೋಣ, ಗದ್ಯ ವಿಭಾಗದಲ್ಲಿ ಬಿ.ಟಿ.ಜಾಹ್ನವಿ ಹಾಗೂ ಸಂಕೀರ್ಣ ವಿಭಾಗದಲ್ಲಿ ಶಿಕ್ಷಣ ಕ್ಷೇತ್ರ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಜು.11 ರಂದು, ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ನಡೆಯಲಿದೆ. ಪ್ರಶಸ್ತಿಯು ತಲಾ 10 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ. ನಾಡೋಜ ಮನು ಬಳಿಗಾರ್, ಸುಮಾ ಸತೀಶ್ ಇದ್ದರು ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಆರ್.ಸುನಂದಮ್ಮ ತಿಳಿಸಿದ್ದಾರೆ.



ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ

• **ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆಯ ಕೆಂಚೇನಹಳ್ಳಿಯಲ್ಲಿ ರಸ್ತೆ ನಿರ್ಮಾಣ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸಲು ಕಂದಾಯ ಇಲಾಖೆಯು ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿದೆ.

ಬೆಂಗಳೂರು ನಗರದ ವಾರ್ಡ್ ನಂ. 160ರ (ಹೊಸ ವಾರ್ಡ್ ನಂ. 45) ವ್ಯಾಪ್ತಿಯಲ್ಲಿ ಮೈಸೂರು–ಬೆಂಗಳೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಯೋಜನೆಗೆ ಸರ್ಕಾರ ಚಾಲನೆ ನೀಡಿದೆ. ಈ ಸಾರ್ವಜನಿಕ ಉದ್ದೇಶಕ್ಕಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಕೆಂಚೇನಹಳ್ಳಿ ಗ್ರಾಮದ ಸರ್ವೆ ನಂ. 26/1ಎ2 ಮತ್ತು 26/1ಬಿ2 ರ ವ್ಯಾಪ್ತಿಯಲ್ಲಿ ಬರುವ ರಾಜಕುಮಾರ್ ಟಿ.ಎಂ ಅವರಿಗೆ ಸೇರಿದ ಒಟ್ಟು 5 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವುದಾಗಿ ಸರ್ಕಾರ ಅಧಿಕೃತವಾಗಿ ಘೋಷಿಸಿದೆ.

ಈ ಭೂಸ್ವಾಧೀನ ಪ್ರಕ್ರಿಯೆಯ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತರನ್ನು ಸಕ್ಷಮ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

- 5 ಗುಂಟೆ ಜಮೀನನ್ನು ಸ್ವಾಧೀನಕ್ಕೆ ಸರ್ಕಾರ ಅಧಿಕೃತ ಘೋಷಣೆ
- ಸಕ್ಷಮ ಅಧಿಕಾರಿ ನೇಮಕ

ಗಿಡ ನೆಟ್ಟು ಪರಿಸರ ಉಳಿಸಿ: ಸಂಸದ ಡಾ.ಮಂಜುನಾಥ್



• **ಬೆಂಗಳೂರು:** ಈ ಭೂಮಿ ಮೇಲೆ ಜೀವರಾಶಿ, ಮಾನವ ಬದುಕುತ್ತಿರುವುದು ನೀರು, ಆಮ್ಲಜನಕ, ಪರಿಸರದಿಂದ. ನಾವೆಲ್ಲರೂ ಗಿಡ ನೆಡುವ ಮೂಲಕ ಪರಿಸರ ಉಳಿಸಬೇಕಾಗಿದೆ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ಮಲ್ಲತ್ತಹಳ್ಳಿ ಕೆರೆ ಬಳಿ ಗಿಡ ನೆಡುವ ಮೂಲಕ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭೂ ಒತ್ತುವರಿಯಿಂದ ಕೆರೆಗಳ ಸಂಖ್ಯೆ ಕಡಿಮೆಯಾಗುತ್ತಿವೆ. ಜತೆಗೆ ಇರುವ ಕೆರೆಗಳ ವಿಸ್ತೀರ್ಣ ಕಡಿಮೆಯಾಗುತ್ತಿದೆ. ಭೂಮಿಯ ಆರೋಗ್ಯ ಚೆನ್ನಾಗಿರಬೇಕಾದರೆ ಕೊಳಚೆ ನೀರು ಭೂಮಿಗೆ ಸೇರದಂತೆ ನೋಡಿಕೊಳ್ಳಬೇಕು. ಪ್ರತಿಯೊಬ್ಬ ನಾಗರೀಕರು, ಸಂಘ–ಸಂಸ್ಥೆ, ಸರ್ಕಾರಗಳ ಕರ್ತವ್ಯವಾಗಿದೆ ಎಂದರು. ಶಾಸಕ ಮುನಿರತ್ನ ಮಾತನಾಡಿ, ಮಲ್ಲತ್ತಹಳ್ಳಿ ಕೆರೆ ಅಭಿವೃದ್ಧಿಗೆ ಹಿಂದಿನ ಸಿ.ಎಂ. ಆಗಿದ್ದ ಬಸವರಾಜ್ ಬೊಮ್ಮಾಯಿ ಅವರು ಅನುದಾನ ಬಿಡುಗಡೆ ಮಾಡಿ ಕೆರೆ ಅಭಿವೃದ್ಧಿ ಸೇರಿ ನಾನಾ ಕಾಮಗಾರಿಗೆ ಚಾಲನೆ ನೀಡಿದರು. ಅವುಗಳು ಸ್ಥಗಿತಗೊಂಡಿದ್ದು, ಶೀಘ್ರದಲ್ಲಿಯೇ ಸಂಸದರ ಜತೆಗೂಡಿ ಮತ್ತಷ್ಟು ಅನುದಾನ ತಂದು ಚಾಲನೆ ನೀಡಲಾಗುವುದು ಎಂದರು. ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಮುಖಂಡರಾದ ಮಲ್ಲತ್ತಹಳ್ಳಿ ಎಂ. ಮಂಜುನಾಥ್, ವಿ.ಸಿ.ಚಂದ್ರು, ರವಿಗೌಡ, ಶ್ರೀನಿವಾಸ್, ಜ್ಞಾನಭಾರತಿ ವಾರ್ಡ್‌ನ ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಜಯರಾಮಯ್ಯ ಇತರರಿದ್ದರು.

ಸರ್ಕಾರಿ ಜಾಗ ಸರ್ವೇ ಮಾಡಲು ಸೂಚನೆ

- ಕಸ ವರ್ಗಾವಣೆ ಕೇಂದ್ರಕ್ಕೆ ಅಪರ ಆಯುಕ್ತರ ಭೇಟಿ



• **ಬೆಂಗಳೂರು:** ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ವಿಟ್ಟಸಂದ್ರದ ಕಸ ವರ್ಗಾವಣೆ ಕೇಂದ್ರಕ್ಕೆ ಅಪರ ಆಯುಕ್ತ ಡಾ.ನವೀನ್ ಕುಮಾರ್ ರಾಜು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸಂಪೂರ್ಣ ಸರ್ಕಾರಿ ಜಾಗ ಸರ್ವೇ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಟ್ಟಸಂದ್ರ ಗ್ರಾಮದಲ್ಲಿ ಸುಮಾರು 65 ಎಕರೆ ವಿಸ್ತೀರ್ಣದ ಸರ್ಕಾರಿ ಜಾಗವಿದ್ದು, ಇದರಲ್ಲಿ 4 ಎಕರೆ ಪ್ರದೇಶವನ್ನು ಕಸ ವರ್ಗಾವಣೆ ಕೇಂದ್ರಕ್ಕಾಗಿ ಗುರುತಿಸಬೇಕಾಗಿದೆ. ಹಾಗಾಗಿ ಇಡೀ ಪ್ರದೇಶಕ್ಕೆ ತಕ್ಷಣವೇ ಗಡಿ ಗುರುತಿಸಿ, ಸರ್ವೇ ಕಾರ್ಯ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಕಸ ವರ್ಗಾವಣೆ ಕೇಂದ್ರದ ಸುತ್ತ ಮುತ್ತಲಿನ ಪ್ರದೇಶದಲ್ಲಿ ಹೂಳು ಹಾಗೂ ವಾಣಿಜ್ಯ ಮಳಿಗೆಗಳ ತ್ಯಾಜ್ಯವನ್ನು ಇತರ ವ್ಯಕ್ತಿಗಳು ಅಕ್ರಮವಾಗಿ ಸುರಿಯುತ್ತಿದ್ದು, ಅನ್ಯ ವ್ಯಕ್ತಿಗಳ ಪ್ರವೇಶ ನಿಷೇಧಿಸಲು ಸದರಿ ಜಾಗಕ್ಕೆ ರಕ್ಷಣೆ ವ್ಯವಸ್ಥೆ ಕಲ್ಪಿಸಿ. ಅನಧಿಕೃತವಾಗಿ ಹೂಳು ಹಾಗೂ ವಾಣಿಜ್ಯ ತ್ಯಾಜ್ಯಗಳನ್ನು ಸುರಿಯುವವರ ವಿರುದ್ಧ ಕ್ರಮ ಜರುಗಿಸಲು ಸೂಚನೆ ನೀಡಿದ್ದಾರೆ.

ಕಾಂಪೋಸ್ಟ್ ಸೆಂಟರ್ ಸ್ಥಾಪಿಸಲು ಚಿಂತನೆ

ಕಸ ವರ್ಗಾವಣೆ ಕೇಂದ್ರದಲ್ಲಿ ಸುಸಜ್ಜಿತ ಪ್ಲಾಂಟ್ ಮತ್ತು ಕಾಂಪೋಸ್ಟ್ ಸೆಂಟರ್ ನಿರ್ಮಾಣ ಮಾಡಲು ಸುಮಾರು 2 ಎಕರೆ ಜಾಗದ ಅಗತ್ಯವಿದ್ದು, ಅದಕ್ಕೆ ಪೂರಕವಾದ ಸಿದ್ಧತೆಗಳನ್ನು ಮಾಡಿಕೊಳ್ಳಲು ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಕಾಂಪೋಸ್ಟ್ ಕೇಂದ್ರ ನಿರ್ಮಾಣ ಸಂಬಂಧ ತುರ್ತಾಗಿ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಮನೆಗೆ ಬಣ್ಣ ಬಳಿಯುವ ನೆಪ ಚಿನ್ನಾಭರಣ ದೋಚಿ ಪರಾರಿ

• **ಬೆಂಗಳೂರು:** ಮನೆಗೆ ಬಣ್ಣ ಬಳಿಯುವ ನೆಪದಲ್ಲಿ ಬಂದ ಪೇಂಟರ್‌ಗಳು ಮಾಲೀಕರ ನಂಬಿಕೆಯನ್ನೇ ಬಂಡವಾಳವಾಗಿಸಿಕೊಂಡು ಬರೋಬ್ಬರಿ 25 ಲಕ್ಷ ರೂ.ಮೌಲ್ಯದ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿರುವ ಘಟನೆ ಬೆಂಗಳೂರು ಉತ್ತರ ತಾಲೂಕಿನ ದಾಸನಪುರ ಹೋಬಳಿಯ ರಾಮಾಂಜನೇಯ ಬಡಾವಣೆಯಲ್ಲಿ ನಡೆದಿದೆ.

ನಿತ್ಯಾ ಮತ್ತು ಚಂದ್ರಶೇಖರ್ ದಂಪತಿಗಳ ಮನೆಯಲ್ಲೇ ಈ ದರೋಡೆ ನಡೆದಿದ್ದು, ನಿತ್ಯಾ ಹಾಗೂ ಚಂದ್ರಶೇಖರ್ ದಂಪತಿಗಳು ರಾಮಾಂಜನೇಯ ಬಡಾವಣೆಯಲ್ಲಿ ಎರಡು ಅಂತಸ್ತಿನ ಮನೆ ಕಟ್ಟಿಸಿದ್ದರು. ಕಳೆದ ಒಂದು ತಿಂಗಳ ಹಿಂದೆಯಷ್ಟೇ ಇವರ ಮನೆಯ ಮೊದಲ ಮಹಡಿಯಲ್ಲಿದ್ದ ಬಾಡಿಗೆದಾರರು ಖಾಲಿ ಮಾಡಿದ್ದರು. ಇದನ್ನು ಗಮನಿಸಿದ್ದ ಪೇಂಟರ್ ಲಿಂಗರಾಜು ಎಂಬಾತ, ಮನೆ ಮಾಲೀಕ ಚಂದ್ರಶೇಖರ್ ಅವರನ್ನು ಭೇಟಿಯಾಗಿ, ನಿಮ್ಮ ಮನೆಗೆ ನಾವೇ ಕಡಿಮೆ ದರದಲ್ಲಿ ಪೇಂಟ್ ಮಾಡಿಕೊಡುತ್ತೇವೆ ಎಂದು ನಂಬಿಸಿ ತನ್ನ ಮೊಬೈಲ್ ನಂಬರ್ ನೀಡಿದ್ದನು. ಎರಡು ದಿನಗಳ ಬಳಿಕ ಚಂದ್ರಶೇಖರ್ ಅವರು ಲಿಂಗರಾಜುವಿಗೆ ಕರೆ ಮಾಡಿ ಬಣ್ಣ ಬಳಿಯಲು ಒಪ್ಪಿಗೆ ನೀಡಿದ್ದರು.

ಇನ್ನು ಕೆಲಸ ಆರಂಭಿಸಬೇಕು ಎಂದು ಲಿಂಗರಾಜು ತನ್ನ ಜೊತೆಗೆ ಪವನ್ ಕುಮಾರ್, ಮಂಜುನಾಥ್ ಮತ್ತು ವೆಂಕಟೇಶ್ ಎಂಬ ಮೂವರು ಕೆಲಸಗಾರರನ್ನು ಕರೆತಂದು ಮೊದಲ ಮಹಡಿಗೆ ಪೇಂಟ್ ಮಾಡಿಸಿದ್ದನು. ಕೆಲಸ ಚೆನ್ನಾಗಿ ಮಾಡಿದ್ದರಿಂದ, ಮಾಲೀಕರು ತಾವು ವಾಸವಿದ್ದ ಕೆಳಮಹಡಿಯ ಕಿಟಕಿಗಳಿಗೂ ಬಣ್ಣ ಬಳಿಯುವಂತೆ ತಿಳಿಸಿದರು. ನಂತರ ಪೇಂಟರ್‌ಗಳು ನಿತ್ಯಾ ದಂಪತಿಗಳು ವಾಸವಿದ್ದ ಬೆಡ್ರೂಂಗೆ ಪೇಂಟ್ ಮಾಡಲು ಹೋಗಿದ್ದಾರೆ. ಈ ವೇಳೆ ಬೆಡ್ ರೂಮ್ ಒಳಗಡೆ ಪೇಂಟ್ ನಡೆಯುತ್ತಿದ್ದಾಗ ಹೊರಗಡೆ ಮಗು ಜೋರಾಗಿ ಅಳುವ ಶಬ್ದ ಕೇಳಿಸಿದೆ. ತಾಯಿ ನಿತ್ಯಾ ಅವರು ಮಗುವನ್ನು ಸಮಾಧಾನಪಡಿಸಲು ರೂಮ್ನಿಂದ ಹೊರಗೆ ಹೋಗಿ ವಾಪಸ್ ಬರುವಷ್ಟರಲ್ಲಿ, ಪೇಂಟರ್‌ಗಳು ತಮ್ಮ ಕೈಚಳಕ ತೋರಿಸಿದ್ದರು. ಬೀರುವಿನಲ್ಲಿದ್ದ ಸುಮಾರು 254 ಗ್ರಾಂ ತೂಕದ ಚಿನ್ನಾಭರಣಗಳನ್ನು ದೋಚಿ ಜಾಗ ಖಾಲಿ ಮಾಡಿದ್ದಾರೆ.

ಪೊಲೀಸ್ ಸಿಬ್ಬಂದಿಗೆ ಶಿಬಿರ



• **ಬೆಂಗಳೂರು:** ಬೆಂಗಳೂರು ನಗರ ಪೊಲೀಸ್ ಸಿಬ್ಬಂದಿಯ ಆರೋಗ್ಯ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಆಶೀರ್ವಾದ್ ಬೈ ಅಲಿಯಾಕ್ಸಿಸ್ ಹಾಗೂ ಸ್ಮೈಲ್ ಫೌಂಡೇಶನ್ ಸಹಯೋಗದಲ್ಲಿ ವಿಶೇಷ ಉಚಿತ ಆರೋಗ್ಯ ತಪಾಸಣಾ ಶಿಬಿರಗಳ ಸರಣಿಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಸಮಾಜದ ಸುರಕ್ಷತೆಗಾಗಿ ಹಗಲಿರುಳು ಶ್ರಮಿಸುವ ಪೊಲೀಸ್ ಸಿಬ್ಬಂದಿಗೆ ಮುಂಜಾಗ್ರತಾ ಆರೋಗ್ಯ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ 80 ಮಹಿಳಾ ಸಿಬ್ಬಂದಿ ಸೇರಿದಂತೆ ಸುಮಾರು 650 ಮಂದಿ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದು, ಒಟ್ಟು 4,000ಕ್ಕೂ ಹೆಚ್ಚು ಆರೋಗ್ಯ ತಪಾಸಣೆಗಳನ್ನು ನಡೆಸಲಾಯಿತು. ಎಲೆಕ್ಟ್ರಾನಿಕ್ ಸಿಟಿ, ಜಿಗಣಿ, ಅತ್ತಿಬೆಲೆ, ಹೆಬ್ಬಗೋಡಿ ಹಾಗೂ ಪರಪ್ಪನ ಅಗ್ರಹಾರ ಸೇರಿದಂತೆ ಬೆಂಗಳೂರಿನ ಐದು ಪ್ರಮುಖ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರದೇಶಗಳಲ್ಲಿ ಶಿಬಿರಗಳನ್ನು ಆಯೋಜಿಸಲಾಗಿತ್ತು. ಸಾಮಾನ್ಯ ಆರೋಗ್ಯ ತಪಾಸಣೆ, ಹೃದ್ರೋಗ ಪರೀಕ್ಷೆ, ಶ್ವಾಸಕೋಶ ಸಾಮರ್ಥ್ಯ ಪರೀಕ್ಷೆ, ಶ್ರವಣ ದೋಷ ತಪಾಸಣೆ, ಕಣ್ಣಿನ ಪರೀಕ್ಷೆ, ಪ್ರಯೋಗಾಲಯ ಪರೀಕ್ಷೆಗಳು ಹಾಗೂ ಮಹಿಳಾ ಸಿಬ್ಬಂದಿಗಾಗಿ ಸ್ತ್ರೀರೋಗ ತಜ್ಞರ ಸಮಾಲೋಚನೆ ಸೇರಿದಂತೆ ವಿವಿಧ ವೈದ್ಯಕೀಯ ಸೇವೆಗಳನ್ನು ಒದಗಿಸಲಾಯಿತು. ಆಶೀರ್ವಾದ್ ಬೈ ಅಲಿಯಾಕ್ಸಿಸ್ ಸಂಸ್ಥೆಯ ಸಿಎಫ್‌ಒ ಸುದೀಪ್ ಅಗರ್ವಾಲ್ ಮಾತನಾಡಿ, ಸಾರ್ವಜನಿಕರ ಸುರಕ್ಷತೆಗಾಗಿ ತಮ್ಮ ಆರೋಗ್ಯವನ್ನೇ ಕಡೆಗಣಿಸಿ ಸೇವೆ ಸಲ್ಲಿಸುವ ಪೊಲೀಸ್ ಸಿಬ್ಬಂದಿಗೆ ಆರೋಗ್ಯ ಸೇವೆ ತಲುಪಿಸುವುದು ಅಗತ್ಯ ಎಂದರು.

ಇಂದು ನಗರದಲ್ಲಿ...

- ಅಧಿಕ ಮಾಸ ಹಿನ್ನೆಲೆಯಲ್ಲಿ ವಿಶೇಷ ಉಪನ್ಯಾಸ
- ಸ್ಥಳ: ಪೂರ್ಣ ಪ್ರಜ್ಞಾ ವಿದ್ಯಾಪೀಠ
- ಬೆಳಗ್ಗೆ 8

- ಇನ್ನರ್ ವೀಲ್ ಕ್ಲಬ್ ಅಸೋಸಿಯೇಶನ್ ಕಾರ್ಯಕ್ರಮ
- ಸ್ಥಳ: ಆದರ್ಶ ಹ್ಯಾಮಿಲ್ಟನ್
- ಮಧ್ಯಾಹ್ನ 12

- ಶಾಂತವೇರಿ ಗೋಪಾಲಗೌಡರ ಕೃತಿ ಬಿಡುಗಡೆ
- ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ
- ಸಂಜೆ 5

- ವಿದ್ವಾನ್ ಶ್ರೀಧರಾಚಾರ್ಯರಿಂದ ವಿಧುರ ನೀತಿ ಕುರಿತು ಉಪನ್ಯಾಸ
- ಸ್ಥಳ: ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ದೇವಸ್ಥಾನ
- ಸಂಜೆ 6

ಕಿರುಸುದ್ದಿ

ಆವೆಮಣ್ಣಿನ ರಾಜ ಜ್ವೆರೆವ್ ಚೊಚ್ಚಲ ಸ್ಲಾಮ್ ಗೆದ್ದ ವೀರ



• **ಪ್ಯಾರಿಸ್:** ಫ್ರೆಂಚ್ ಓಪನ್ 2026ರಲ್ಲಿ ಪುರುಷರ ಚಾಂಪಿಯನ್ ಆಗಿ ಹೊರಹೊಮ್ಮಿದ ಜರ್ಮನಿಯ ಅಲೆಗ್ಸಾಂಡರ್ ಜ್ವೆರೆವ್ ತಮ್ಮ ಚೊಚ್ಚಲ ಪ್ರಶಸ್ತಿಯನ್ನು ಗೆದ್ದಿದ್ದಾರೆ. 2020ರ ಯುಎಸ್ ಓಪನ್, 2024ರ ಫ್ರೆಂಚ್ ಓಪನ್ ಮತ್ತು 2025ರ ಆಸ್ಟ್ರೇಲಿಯನ್ ಓಪನ್ ಫೈನಲ್‌ಗಳಲ್ಲಿ ಸೋತಿದ್ದ ಜ್ವೆರೆವ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆದ್ದುಕೊಂಡಿದ್ದಾರೆ. ಬೋರಿಸ್ ಬೆಕರ್ 1996ರ ಆಸ್ಟ್ರೇಲಿಯನ್ ಓಪನ್ ಗೆದ್ದ ಬಳಿಕ ಗ್ರ್ಯಾಂಡ್ ಸ್ಲಾಮ್ ಗೆದ್ದ ಮೊದಲ ಜರ್ಮನ್ ಪುರುಷ ಆಟಗಾರನೆಂಬ ದಾಖಲೆಯನ್ನೂ ಬರೆದಿದ್ದಾರೆ. ಭಾನುವಾರ ನಡೆದ ರೋಚಕ ಫೈನಲ್‌ನಲ್ಲಿ ಜ್ವೆರೆವ್ ತಮ್ಮ ಎದುರಾಳಿ ಇಟಲಿಯ ಫ್ಲೇವಿಯೋ ಕೊಬೊಲಿ ಅವರನ್ನು 6-1, 4-6, 6-4, 6-7(5/7), 6-1 ಸೆಟ್‌ಗಳ ಅಂತರದಿಂದ ಸೋಲಿಸಿದರು. ನಾಲ್ಕನೇ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿ ನಿರ್ಭೀತ ಆಟವಾಡಿ ಗೆದ್ದ ಫ್ಲೇವಿಯೋ, ಜ್ವೆರೆವ್ ನಿರ್ಣಾಯಕ ಐದನೇ ಸೆಟ್ ಆಡುವಂತೆ ಮಾಡಿದರು. ಆದರೆ ಕೊನೆಗೂ ಜ್ವೆರೆವ್ ಐದನೇ ಸೆಟ್ ಸುಲಭದಲ್ಲಿ ಗೆದ್ದರು. ಮೊದಲ ಸೆಟ್‌ನಲ್ಲಿ ಜ್ವೆರೆವ್ ಸಂಪೂರ್ಣ ಮೇಲುಗೈ ಸಾಧಿಸಿದರು. ಆದರೆ ಕೊಬೊಲಿ ಅದ್ಭುತವಾಗಿ ಪುಟಿದೇಳುವ ಮೂಲಕ ದ್ವಿತೀಯ ಸೆಟ್ ತಮ್ಮದಾಗಿಸಿದರು. ಮೂರನೇ ಸೆಟ್ ಗೆದ್ದ ಜ್ವೆರೆವ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಯತ್ತ ಹೆಜ್ಜೆಯಿಟ್ಟರು. ಒತ್ತಡ ಮತ್ತು ಉದ್ವಿಗ್ನತೆಯ ನಡುವೆ ನಡೆದ ಈ ಪಂದ್ಯದಲ್ಲಿ ಮುನ್ನಡೆ ಹಲವು ಬಾರಿ ಬದಲಾಗುತ್ತಾ, ಅಭಿಮಾನಿಗಳನ್ನು ಕೊನೆಯ ಕ್ಷಣದವರೆಗೂ ಕುತೂಹಲದಲ್ಲಿ ಇಟ್ಟಿತು.

ವೈಭವ್ ವಿಶೇಷ ಪ್ರತಿಭೆ, ಅತಿಯಾದ ನಿರೀಕ್ಷೆ ನ್ಯಾಯವಲ್ಲ

• **ಮುಂಬೈ:** ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ವಿಶೇಷವಾದ ಪ್ರತಿಭೆ. ಆದರೆ ಈ ಹಂತದಲ್ಲಿ ಅವರಿಂದ ಅತಿಯಾದ ನಿರೀಕ್ಷೆ ಇಟ್ಟುಕೊಳ್ಳುವುದು ನ್ಯಾಯೋಚಿತವಲ್ಲ ಎಂದು ಕ್ರಿಕೆಟ್ ದಂತಕತೆ ಕಪಿಲ್ ದೇವ್ ಸೋಮವಾರ ಅಭಿಪ್ರಾಯಿಸಿದ್ದಾರೆ.



ಯುವ ಪ್ರತಿಭೆಯಿಂದ ಇಷ್ಟೊಂದು ನಿರೀಕ್ಷಿಸುವುದು ನ್ಯಾಯೋಚಿತವಲ್ಲ, ಅವರಿಗೆ ಕ್ಲಬ್ ಕ್ರಿಕೆಟ್‌ನಿಂದ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಹೊಂದಿಕೊಳ್ಳಲು ಅವರಿಗೆ ಸಮಯ ಬೇಕಾಗುತ್ತದೆ. ಸಮಯ ನೀಡಿ. ಆದರೆ ಖಂಡಿತವಾಗಿ ತನ್ನಲ್ಲಿ ಪ್ರತಿಭೆಯಿದೆ ಎಂದು ತೋರಿಸಿದ್ದಾರೆ. ನಂಬಲಸಾಧ್ಯ ಪ್ರತಿಭೆಯನ್ನು ಸೂರ್ಯವಂಶಿ ಹೊಂದಿದ್ದಾರೆ ಎಂದು ಕಪಿಲ್ ಎಚ್ಚರಿಸಿದ್ದಾರೆ.

ಪಿ.ವಿ. ಸಿಂಧು ನೇತೃತ್ವದಲ್ಲಿ ಭಾರತ ಸ್ಪರ್ಧೆ

• **ಹೊಸದಿಲ್ಲಿ:** ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜೂ.9ರಿಂದ 14ರವರೆಗೆ ಸಿಡ್ನಿ ನಗರದಲ್ಲಿ ನಡೆಯಲಿದ್ದು, ಪಿವಿ ಸಿಂಧು ನೇತೃತ್ವದ ಭಾರತ ತಂಡ ಸ್ಪರ್ಧಿಸಲಿದೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಈ ಋತುವಿನಲ್ಲಿ ಮೊದಲ ಪ್ರಶಸ್ತಿ ಗೆಲ್ಲುವ ಗುರಿ ಹೊಂದಿದ್ದಾರೆ.

ಅಂಪೈರ್ ವಿಕ್ರಮ್ ನಿಧನ

• **ಬೆಂಗಳೂರು:** ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಪೈರ್ ವಿಕ್ರಮ್ ರಾಜು(92) ಭಾನುವಾರ ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು 1986ರ ಸೆಪ್ಟೆಂಬರ್‌ನಲ್ಲಿ ಮದ್ರಾಸ್‌ನಲ್ಲಿ (ಇಂದಿನ ಚೆನ್ನೈ) ನಡೆದ ಭಾರತ-ಆಸ್ಟ್ರೇಲಿಯಾ ಟೆಸ್ಟ್‌ನಿಂದ ಪ್ರಸಿದ್ಧಿ ಪಡೆದಿದ್ದು, ಟೆಸ್ಟ್ ರೋಚಕ ಟೈ ಆಗಿತ್ತು. ಇವರು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಪ್ರಸರಣ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದರು.



ಇಂದಿನಿಂದ ಆರ್ಚರಿ ವಿಶ್ವಕಪ್ 3ನೇ ಹಂತ

• **ಅಂಟಲ್ಯಾ:** ಆರ್ಚರಿ ವಿಶ್ವಕಪ್ 2026ರ ಮೂರನೇ ಹಂತ ಟರ್ಕಿಯ ಅಂಟಲ್ಯಾದಲ್ಲಿ ಜೂ.9ರಿಂದ 14ರವರೆಗೆ ನಡೆಯಲಿದ್ದು, ದೀಪಿಕಾ ಕುಮಾರಿ ಸಹಿತ ಭಾರತದ 16 ಸದಸ್ಯರ ತಂಡ ಸ್ಪರ್ಧಿಸಲಿದೆ. ಯುವ ಕೀರ್ತಿ ಶರ್ಮಾ ಮತ್ತು ಗಣೇಶ್ ಮಣಿರತ್ನಂ ವಿಶ್ವಕಪ್ ಪದಾರ್ಪಣೆ ಮಾಡಲಿದ್ದಾರೆ.

ಕನಸಿನ ಪದಾರ್ಪಣೆಗೈದ ಎಡಗೈ ಸ್ಪಿನ್ನರ್ ಮಾನವ್ ಸುಥಾರ್ | ಭಾರತಕ್ಕೆ ಅತಿ ದೊಡ್ಡ ಇನ್ನಿಂಗ್ಸ್ ಗೆಲುವು

ಮುಲ್ಲಾನ್‌ಪುರದಲ್ಲಿ ಆಫ್ಘನ್ ತಂಡದ ಕಬ್ಜ





• **ಮುಲ್ಲಾನ್‌ಪುರ:** ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ಕನಸಿನ ಪದಾರ್ಪಣೆಯು ಭಾರತದ ಅತಿ ದೊಡ್ಡ ಟೆಸ್ಟ್ ಜಯದೊಂದಿಗೆ ಸಂಪನ್ನಗೊಂಡಿದೆ. ಅಫ್ಘಾನಿಸ್ತಾನ ಎದುರಿನ ಏಕೈಕ ಟೆಸ್ಟ್‌ನಲ್ಲಿ ಭಾರತ ಇನ್ನಿಂಗ್ಸ್ ಮತ್ತು 300 ರನ್ ಭಾರೀ ಅಂತರದ ಗೆಲುವು ಸಾಧಿಸಿದೆ.

ಪ್ರಥಮ ಇನ್ನಿಂಗ್ಸ್‌ನಲ್ಲಿ 113ಕ್ಕೆ 5 ಎಂಬಲ್ಲಿಂದ ಮೂರನೇ ದಿನದಾಟ ಆರಂಭಿಸಿದ ಆಫ್ಘನ್ ಪರ ಆಸರೆಯಾಗಿದ್ದ ರೆಹಮತ್ ಶಾ (60) ಅವರನ್ನು ಸುಥಾರ್ ತಮ್ಮ ಸ್ಪಿನ್ ಮೋಡಿಗೆ ಸಿಲುಕಿಸಿ 5ನೇ ಬಲಿ ಪಡೆದರು. ಇದರೊಂದಿಗೆ ತಮ್ಮ ಪದಾರ್ಪಣಾ ಟೆಸ್ಟ್‌ನಲ್ಲಿ 5 ವಿಕೆಟ್ ಕಬಳಿಸಿದ ಸುಥಾರ್, ಈ ಸಾಧನೆಗೈದ ಎಲೈಟ್ ಬೌಲರ್‌ಗಳ ಯಾದಿಗೆ ಸೇರಿದ್ದಾರೆ. ಮೂರನೇ ದಿನದಾಟ ಆರಂಭವಾದ ಅರ್ಧ ಗಂಟೆಯೊಳಗೆ ಅಜ್ಮತುಲ್ಲಾ ಒಮರ್‌ಝಾಯಿ ಅವರನ್ನು ಕರ್ನಾಟಕ ವೇಗಿ ಪ್ರಸಿದ್ಧ ಕೃಷ್ಣ ಕ್ಲೀನ್‌ಬೌಲ್ಡ್ ಮಾಡಿದ್ದರು. ಇದಾದ ಬಳಿಕ ಆಫ್ಘನ್ ಪತನ ಆರಂಭವಾಗಿದ್ದು, 152 ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 412 ರನ್‌ಗಳ ಭಾರೀ ಮುನ್ನಡೆ ಪಡೆಯಿತು.

ಆಫ್ಘನ್ 112ಕ್ಕೆ ಆಲೌಟ್: ಅಫ್ಘಾನಿಸ್ತಾನದ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಸೆದಿಕುಲ್ಲಾ ಅಟಲ್ ಅವರ 80 ಎಸೆತಗಳ 42 ರನ್ ಆಟವೊಂದನ್ನು ಬಿಟ್ಟರೆ ನೋಡುವಂತದ್ದು ಏನೂ ಇರಲಿಲ್ಲ. 23 ಓವರ್‌ಗಳಲ್ಲಿ 87ಕ್ಕೆ 2 ವಿಕೆಟ್ ಕಳೆದುಕೊಂಡಿದ್ದ ಆಫ್ಘನ್ ಇನ್ನೂ 12 ಓವರ್ ಆಗುವಷ್ಟರಲ್ಲಿ 112 ರನ್‌ಗಳಿಗೆ ಆಲೌಟಾಗಿತ್ತು. ಪ್ರಥಮ ಇನ್ನಿಂಗ್ಸ್‌ನಲ್ಲಿ ಯುವ ಸ್ಪಿನ್ನರ್ ಸುಥಾರ್ ಅದ್ಭುತ ಪ್ರದರ್ಶನ ನೀಡಿದ್ದರಿಂದ ಒತ್ತಡಕ್ಕೊಳಗಾದ ಕುಲ್ದೀಪ್ ಮತ್ತು ವಾಷಿಂಗ್ಟನ್ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ಜೂ.13ರಿಂದ ಏಕದಿನ ಸರಣಿ: ಏಕೈಕ ಟೆಸ್ಟ್‌ನಲ್ಲಿ ಅತಿ ದೊಡ್ಡ ಇನ್ನಿಂಗ್ಸ್ ಸೋಲುಂಡ ಅಫ್ಘಾನಿಸ್ತಾನ ಏಕದಿನ ಸರಣಿಯಲ್ಲಿ ಉತ್ತಮ ಹೋರಾಟ ನೀಡುವ ಸಾಧ್ಯತೆಯಿದೆ. ಇದೇ ಶನಿವಾರ ಧರ್ಮಶಾಲಾದಲ್ಲಿ ಮೊದಲ ಏಕದಿನ ಪಂದ್ಯ ನಡೆಯಲಿದೆ.

ಪದಾರ್ಪಣಾ ಟೆಸ್ಟ್‌ನಲ್ಲಿ ಅತ್ಯುತ್ತಮ ಬೌಲಿಂಗ್ (ಭಾರತೀಯರು)

ಬೌಲರ್	ಎದುರಾಳಿ	ಮೈದಾನ	ವರ್ಷ	ವಿಕೆಟ್	ಫಲಿತಾಂಶ
ನರೇಂದ್ರ ಹೀರ್ವಾನಿ	ವೆಸ್ಟ್ ಇಂಡೀಸ್	ಚೆನ್ನೈ	1988	61ಕ್ಕೆ 8	ಗೆಲುವು
ನರೇಂದ್ರ ಹೀರ್ವಾನಿ	ವೆಸ್ಟ್ ಇಂಡೀಸ್	ಚೆನ್ನೈ	1988	75ಕ್ಕೆ 8	ಗೆಲುವು
ಮಾನವ್ ಸುಥಾರ್	ಅಫ್ಘಾನಿಸ್ತಾನ	ಮುಲ್ಲಾನ್‌ಪುರ	ಜೂ.8, 2026	33ಕ್ಕೆ 6	ಗೆಲುವು
ರವಿಚಂದ್ರನ್ ಅಶ್ವಿನ್	ವೆಸ್ಟ್ ಇಂಡೀಸ್	ಕೋಟ್ಲಾ, ದಿಲ್ಲಿ	ನ.6, 2011	47ಕ್ಕೆ 6	ಗೆಲುವು
ಸೈಯದ್ ಆಬಿದ್ ಅಲಿ	ಆಸ್ಟ್ರೇಲಿಯಾ	ಅಡಿಲೇಡ್, ಅಡಿಲೇಡ್	ಡಿ.23, 1967	55ಕ್ಕೆ 6	ಸೋಲು

ಯಾವುದೇ ಪರಿಸ್ಥಿತಿಯಲ್ಲಿ 20 ವಿಕೆಟ್‌ಗಳನ್ನು ಕಬಳಿಸಬಲ್ಲ ಬೌಲಿಂಗ್ ವಿಭಾಗವನ್ನು ನಾವು ಹೊಂದಿದ್ದೇವೆ. ಪ್ರಥಮ ಇನ್ನಿಂಗ್ಸ್‌ನಲ್ಲಿ ನಿರಂತರ 350ರಿಂದ 400 ರನ್ ಮೊತ್ತ ಕಲೆಹಾಕುವ ಅಗತ್ಯವಿದೆ. ತ್ರಿವಳಿ ಸ್ಪಿನ್ನರ್‌ಗಳು ಗುಣಮಟ್ಟದ ಬೌಲಿಂಗ್ ಪ್ರದರ್ಶನ ನೀಡಿದ್ದಾರೆ. ಇದೊಂದು ಪೂರ್ಣ ಗೆಲುವು.
■ ಶುಭ್ಮನ್ ಗಿಲ್, ಭಾರತ ನಾಯಕ

ಕ್ರಿಕೆಟ್ ವೃತ್ತಿಜೀವನದ ನಂಬಲಸಾಧ್ಯ ಅನುಭವ. ಭಾರತವನ್ನು ಪ್ರತಿನಿಧಿಸಿ ಟೆಸ್ಟ್ ಕ್ರಿಕೆಟ್ ಆಡುವುದು ಆರಂಭದಿಂದಲೂ ನನ್ನ ಕನಸಾಗಿತ್ತು. ಟೆಸ್ಟ್‌ನಲ್ಲಿ ತಾಳ್ಮೆ ಹಾಗೂ ಸ್ಥಿರ ಪ್ರದರ್ಶನ ನೀಡುವುದು ಬಹಳ ಮುಖ್ಯ ಎಂದು ಕಲಿತಿದ್ದೇನೆ.
■ ಮಾನವ್ ಸುಥಾರ್, ಎಡಗೈ ಸ್ಪಿನ್ನರ್

ಭಾರತದ ಅತಿ ದೊಡ್ಡ ಇನ್ನಿಂಗ್ಸ್ ಗೆಲುವು

ಗೆಲುವು	ಎದುರಾಳಿ
ಇನ್ನಿಂಗ್ಸ್ ಮತ್ತು 300 ರನ್	ಅಫ್ಘಾನಿಸ್ತಾನ, ಮುಲ್ಲಾನ್‌ಪುರ, 2026
ಇನ್ನಿಂಗ್ಸ್ ಮತ್ತು 272 ರನ್	ವೆಸ್ಟ್ ಇಂಡೀಸ್, ರಾಜ್‌ಕೋಟ್, 2018
ಇನ್ನಿಂಗ್ಸ್ ಮತ್ತು 262 ರನ್	ಅಫ್ಘಾನಿಸ್ತಾನ, ಬೆಂಗಳೂರು, 2018
ಇನ್ನಿಂಗ್ಸ್ ಮತ್ತು 239 ರನ್	ಬಾಂಗ್ಲಾದೇಶ, ಮಿರ್‌ಪುರ್, 2007
ಇನ್ನಿಂಗ್ಸ್ ಮತ್ತು 239 ರನ್	ಶ್ರೀಲಂಕಾ, ನಾಗ್ಪುರ, 2017

ಆಫ್ಘನ್‌ನ ಇನ್ನಿಂಗ್ಸ್ ಸೋಲುಗಳು

ಸೋಲು	ಎದುರಾಳಿ
ಇನ್ನಿಂಗ್ಸ್ ಮತ್ತು 300 ರನ್	ಭಾರತ, ಮುಲ್ಲಾನ್‌ಪುರ, 2026
ಇನ್ನಿಂಗ್ಸ್ ಮತ್ತು 262 ರನ್	ಭಾರತ, ಬೆಂಗಳೂರು, 2018
ಇನ್ನಿಂಗ್ಸ್ ಮತ್ತು 73 ರನ್	ಜಿಂಬಾಬ್ವೆ, ಹರಾರೆ, 2025
112 ರನ್ ಅಫ್ಘಾನಿಸ್ತಾನದ 3ನೇ ಅತಿ ಕಡಿಮೆ ಮೊತ್ತ	

ಸ್ಕೋರ್ ಬೋರ್ಡ್

ಭಾರತ ಪ್ರಥಮ ಇನ್ನಿಂಗ್ಸ್: 564/8 ಡಿ.
ಅಫ್ಘಾನಿಸ್ತಾನ ಪ್ರಥಮ ಇನ್ನಿಂಗ್ಸ್: 152/10

ರೆಹಮತ್ ಶಾ	ಬಿ ಸುಥಾರ್	60
ಒಮರ್‌ಝಾಯಿ	ಬಿ ಪ್ರಸಿದ್ಧ	0
ಅಶ್ರಫ್	ಸಿ ಪಂತ್ ಬಿ ಸುಥಾರ್	11
ಖರೋಟೆ	ಔಟಾಗದೆ	4
ಸಲೀಮ್	ಎಲ್‌ಬಿ ಸುಥಾರ್	0
ಜೆಯಾವುರ್	ಸಿ ಪಂತ್ ಬಿ ಸುಂದರ್	6
ಇತರೆ		3

ಬೌಲಿಂಗ್ ವಿವರ

ಸಿರಾಜ್	9-2-29-0
ಪ್ರಸಿದ್ಧ	11-2-37-3
ಸುಥಾರ್	22-10-33-6
ಕುಲ್ದೀಪ್	10-1-32-0
ಸುಂದರ್	6.4-1-21-1

ಅಫ್ಘಾನಿಸ್ತಾನ ದ್ವಿತೀಯ ಇನ್ನಿಂಗ್ಸ್: 112/10

ಸೆದಿಕುಲ್ಲಾ	ಸಿ ಪ್ರಸಿದ್ಧ ಬಿ ಸುಂದರ್	42
ಮಲಿಕ್	ಎಲ್‌ಬಿ ಸಿರಾಜ್	8
ಗುರ್ಬಾಜ್	ಸಿ ಪ್ರಸಿದ್ಧ ಬಿ ಕುಲ್ದೀಪ್	24
ರೆಹಮತ್	ಶಾ ಸಿ ಸುಥಾರ್ ಬಿ ಸುಂದರ್	13
ಶಾಹಿದಿ	ಸಿ ಗಿಲ್ ಬಿ ಸುಂದರ್	5
ಅಫ್ಸರ್	ಎಲ್‌ಬಿ ಸುಥಾರ್	8
ಒಮರ್‌ಝಾಯಿ	ಸಿ ಕುಲ್ದೀಪ್ ಬಿ ಸುಂದರ್	4
ಖರೋಟೆ	ಸಿ ಸುಥಾರ್ ಬಿ ಕುಲ್ದೀಪ್	6
ಜೆಯಾವುರ್ ಔಟಾಗದೆ		0
ಸಲೀಮ್	ಸಿ ಸಾಯಿ ಬಿ ಕುಲ್ದೀಪ್	0
ಶರಾಫುದ್ದೀನ್	ಗಾಯಾಳು	-
ಇತರೆ		2

ಬೌಲಿಂಗ್ ವಿವರ

ಸುಥಾರ್	10-2-29-1
ಪ್ರಸಿದ್ಧ	3-0-6-0
ಕುಲ್ದೀಪ್	7.5-1-30-3
ಸಿರಾಜ್	4-1-11-1
ಸುಂದರ್	11-4-36-4

ಶ್ರೇಯಾಂಕಾಗೆ 4 ವಿಕೆಟ್ | ರಾಧಾಗೆ 3 ವಿಕೆಟ್

ಕನ್ನಡತಿ ಸ್ಪಿನ್ ದಾಳಿ: ನಡುಗಿದ ವಿಂಡೀಸ್



ಸಂಕ್ಷಿಪ್ತ ಸ್ಕೋರ್
ಭಾರತ 179/8(20): ಭಾರ್ತಿ 56(40), ಮಂದನಾ 39(23), ಯಸ್ತಿಕಾ 36(26), ಶೆಫಾಲಿ 29(13), ಫ್ಲೆಚರ್ 23ಕ್ಕೆ 4.
ವೆಸ್ಟ್ ಇಂಡೀಸ್ 153/8(20): ಡೊಟಿನ್ 49(44), ಕ್ಯಾಂಪಬೆಲ್ ಗಾಯಾಳಾಗಿ ನಿವೃತ್ತಿ 25(22), ಹೆಕ್ಟರ್ 19(11), ಶ್ರೇಯಾಂಕಾ 36ಕ್ಕೆ 4, ರಾಧಾ 25ಕ್ಕೆ 3.

• **ಕಾರ್ಡಿಫ್:** ವೆಸ್ಟ್ ಇಂಡೀಸ್ ವನಿತೆಯರ ವಿರುದ್ಧದ ಐಸಿಸಿ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಭಾರತ ತಂಡ 26 ರನ್‌ಗಳ ಗೆಲುವು ದಾಖಲಿಸಿದೆ. ಭಾರತ ನೀಡಿದ 180 ರನ್‌ಗಳ ಸವಾಲನ್ನು ಬೆನ್ನತ್ತುವಲ್ಲಿ ವಿಂಡೀಸ್ ವಿಫಲವಾಗಿದ್ದು, 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 153 ರನ್‌ಗಳಿಸಲಷ್ಟೇ ಶಕ್ತವಾಯಿತು.

ಸೋಮವಾರ ಕಾರ್ಡಿಫ್‌ನಲ್ಲಿ ನಡೆದ ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ಪರ ಭಾರ್ತಿ ಫುಲ್ಮಾಲಿ ಅರ್ಧಶತಕ ದಾಖಲಿಸಿದರು. ನಾಯಕ ಹರ್ಮನ್‌ಪ್ರೀತ್ ಅನುಪಸ್ಥಿತಿಯಲ್ಲಿ ಸ್ಮೃತಿ ತಂಡ ಮುನ್ನಡೆಸಿದ್ದು, ನಾಯಕಿ ಮಂದನಾ ಮತ್ತು ಶೆಫಾಲಿ ಮೊದಲ ವಿಕೆಟ್‌ಗೆ 5.2 ಓವರ್‌ಗಳಲ್ಲಿ 59 ರನ್ ಪೇರಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ಶೆಫಾಲಿ ಎಂದಿನಂತೆ ಸ್ಫೋಟಕ ಆರಂಭವನ್ನು ನೀಡಿದ್ದರು. ಸ್ಮೃತಿ 23 ಎಸೆತಗಳಲ್ಲಿ 39 ರನ್ ಹೊಡೆದರು. ಉತ್ತಮ ಲಯದಲ್ಲಿರುವ ಯಸ್ತಿಕಾ ಭಾಟಿಯ 26 ಎಸೆತಗಳಿಂದ 36 ರನ್ ಕೊಡುಗೆ ನೀಡಿದರು. ನಾಲ್ಕನೇ ವಿಕೆಟ್‌ಗೆ ಯಸ್ತಿಕಾ ಮತ್ತು ಭಾರ್ತಿ 60 ರನ್ ಕಲೆಹಾಕಿ ಭಾರತ ಉತ್ತಮ ಮೊತ್ತ ಪೇರಿಸಲು ನೆರವಾದರು. ಭಾರತ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 179 ರನ್ ಪೇರಿಸಿತು. ವೆಸ್ಟ್ ಇಂಡೀಸ್ ಪರ ಫ್ಲೆಚರ್ 23ಕ್ಕೆ 4 ವಿಕೆಟ್ ಕಬಳಿಸಿದ್ದರು.

ಶ್ರೇಯಾಂಕಾ, ರಾಧಾ ಸ್ಪಿನ್ ಮೋಡಿ: 180 ರನ್ ಗುರಿ ಬೆನ್ನತ್ತಿದ ವಿಂಡೀಸ್ ಮೊದಲ ವಿಕೆಟ್‌ಗೆ ನಿಧಾನಗತಿಯಲ್ಲಿ 63 ರನ್ ಕಲೆಹಾಕಿತು. ಆರಂಭಿಕರ ಸ್ಕೋರ್ ವಿಂಡೀಸ್ ಪರ ವೈಯಕ್ತಿಕ ಅತ್ಯುತ್ತಮ ಆಗಿದ್ದವು. ಕನ್ನಡತಿ ಶ್ರೇಯಾಂಕಾ ಪಾಟೀಲ್ ಹಾಗೂ ರಾಧಾ ಯಾದವ್ ಅವರ ಸ್ಪಿನ್ ದಾಳಿಗೆ ನಲುಗಿದ ವಿಂಡೀಸ್ 26 ರನ್‌ಗಳ ಸೋಲುಂಡಿತು.

ಪ್ರಜ್ಞಾನಂದಗೆ ತ.ನಾಡು ಸರ್ಕಾರದಿಂದ ₹50 ಲಕ್ಷ

• **ಚೆನ್ನೈ:** ಇತ್ತೀಚೆಗೆ ನಾರ್ವೆ ಚೆಸ್ ಪ್ರಶಸ್ತಿ ಗೆದ್ದ ಭಾರತೀಯ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರನ್ನು ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಸೋಮವಾರ ಸನ್ಮಾನಿಸಿದರು. 20ರ ಹರೆಯದ ಪ್ರಜ್ಞಾನಂದರನ್ನು ಸೋಮವಾರ ತಮ್ಮ ಮುಖ್ಯಮಂತ್ರಿ ಕಚೇರಿಗೆ ಸ್ವಾಗತಿಸಿದ ಸಿಎಂ ವಿಜಯ್ ತಮಿಳುನಾಡು ಸರ್ಕಾರದ ವತಿಯಿಂದ 50 ಲಕ್ಷ ರೂ. ನಗದು ಬಹುಮಾನದ ಚೆಕ್ ನೀಡಿ ಸನ್ಮಾನಿಸಿದರು.

ಇದಲ್ಲದೆ ಆಕಸ್ಮಿಕವಾಗಿ ಪ್ರಜ್ಞಾನಂದ ಅವರೊಂದಿಗೆ ಚೆಸ್ ಆಟವನ್ನು ಆಡಿದರು. ಚೆಕ್‌ಮೇಟ್ ನೀಡುವ ಮೂಲಕ ಮುಖ್ಯಮಂತ್ರಿ ವಿಜಯ್ ಸಹಿತ ಕಚೇರಿಯಲ್ಲಿ ಸೇರಿದ್ದವರನ್ನು ನಿಬ್ಬೆರಗಾಗಿಸಿದರು. ಮುಖ್ಯಮಂತ್ರಿ ಭೇಟಿ ಸಂದರ್ಭ ಪ್ರಜ್ಞಾನಂದ ತಾಯಿ ನಾಗಲಕ್ಷ್ಮಿ ಜೊತೆಗಿದ್ದರು. ಸಾರ್ವಜನಿಕ ಸೇವಾ ಇಲಾಖೆ ಮತ್ತು ಕ್ರೀಡಾ ಸಚಿವ ಆಧವ್ ಅರ್ಜುನ ಸೇರಿ ಹಲವರು ಸ್ಥಳದಲ್ಲಿದ್ದರು.

ಬೋರ್ಡ್ ತರಲು ಹೇಳಿದ್ದ ವಿಜಯ್: ಮುಖ್ಯಮಂತ್ರಿ ಭೇಟಿಯ ಬಳಿಕ ಮಾತನಾಡಿದ ಪ್ರಜ್ಞಾನಂದ, ಮುಖ್ಯಮಂತ್ರಿ ಚೆಸ್ ಆಡುತ್ತಾರೆಂದು ತಿಳಿದಿರಲಿಲ್ಲ, ಚೆಸ್ ಬೋರ್ಡ್ ತರಲು ಹೇಳಿದ್ದರು. ಆದರೆ ಭೇಟಿ ಬಳಿಕ ನಾವು ಆಕಸ್ಮಿಕವಾಗಿ 15 ನಿಮಿಷಗಳ ಕಾಲ ಚೆಸ್ ಆಡಿದೆವು. ಮುಖ್ಯಮಂತ್ರಿ ಚೆಸ್ ಆಟ ನನಗೆ ಅಚ್ಚರಿ ಮೂಡಿಸಿತು ಎಂದು ಹೇಳಿದ್ದಾರೆ. ಸ್ನೇಹಿತರ ಜತೆ ಚೆಸ್ ಆಡುವ ಹವ್ಯಾಸ ಇರುವುದಾಗಿ ಪ್ರಜ್ಞಾನಂದಗೆ ವಿಜಯ್ ಹೇಳಿದ್ದಾರೆ.




ಗ್ರ್ಯಾಂಡ್ ಮಾಸ್ಟರ್ ಜತೆ ಚೆಸ್ ಆಡಿದ ಸಿಎಂ ವಿಜಯ್

ಪದಬಂಧ

» ರಾಜಾ ಸಂಗಮೇಶ ಹಿರೇಮಠ

6009



ಎಡದಿಂದ ಬಲಕ್ಕೆ
1.ಮನಸ್ಸಿನ ಉಮ್ಮಳ-ದುಃಖವಿದು (3)
3.ಹೋರಿ ನಡುವೆ ತಿರುಗಿ ಪಥಿಕನಾದ (4)
5.ಬೇಡತಿ-ಕಿರಾತ ಸ್ತ್ರೀಯಿಕೆ (4)
6.ಮೃತದೇಹಗಳನ್ನಿಡುವ ಸ್ಥಳ (4)
8.ಬಳಿಯ ನಡುವೆ ಬೀಸಿದ ಚಂಡಮಾರುತ (4)
11.ಶುಭಲಕ್ಷಣಗಳಿಂದ ಕೂಡಿದ ಆನೆ (4)
14.ಇದು ನಾಲ್ಕನೆಯ ವೇದ (4)
15.ಸಾ-ಕಸ ಒಳಗೊಂಡ ತಿಕ್ಕಾಟ ತಿರುಗಿದೆ (4)
16.ಕಾಳಗ ನಡೆಯುವ ಬಯಲು (4)
17.ಇದು ತಾಂಬೂಲದ ಎಲೆ (3)

ಮೇಲಿನಿಂದ ಕೆಳಕ್ಕೆ
1.ಕೆಟ್ಟ ಹಂಚಿಕೆಯನ್ನು ಹೀಗೂ ಹೇಳುತ್ತೇವೆ (4)
2.ಮಂದಿರದ ಮಧ್ಯಮಂಟಪ ಕಡೆಯಲ್ಲಿ ದೀರ್ಘವಾಗಿದೆ (4)
3.ನಡತೆಗೆಡು ಎಂಬರ್ಥದ ನುಡಿಗಟ್ಟು (4)
4.ಬಾಳೆಯಗಿಡವನ್ನು ಸೂಚಿಸುವ ಶಬ್ದ (3)
7.ಹಾವಾಡಿಗ-ಐಂದ್ರಜಾಲಿಕ ಎಂಬರ್ಥದ ಶಬ್ದ (4)
9.ಆಕಾಶಮಾರ್ಗವನ್ನು ಹೀಗೂ ಹೇಳಬಹುದು (4)
10.ಊಟ ಅಡುಗೆ ಮಾಡುವವನು (4)
12.ಶಿವನ ಉಗ್ರರೂಪ ತಲೆಕೆಳಗಾಗಿದೆ (4)
13.ಜಯದ ನಡುವೆ ಶಟಾಕವಿದೆ (4)
14. ಅಸಂಖ್ಯಾತ-ಮಿತಿಯಿಲ್ಲದ್ದು (3)

6008 ಉತ್ತರ

ಎಡದಿಂದ ಬಲಕ್ಕೆ:
1.ಅಂಕಣ 4.ನಮೂದು
6.ಕುಕವಿ 8.ನೆಲಹಾಸು
9.ಕಲಸನ್ನ 11.ಅಮೇರಿಕ
13.ಕರಿನೀರು 15.ವಿದುರ
17.ಅಂದಣ 18.ಪಾತಕ

ಮೇಲಿನಿಂದ ಕೆಳಕ್ಕೆ :
2.ಕರವಾಲ 3.ಕಂಟಕ
5.ಮೂಗುಬ್ಬಸ
6.ಕುಸುಮಾಕರ
7.ವಿಕಟಕವಿ 8.ಅರ್ಚನೆ
10.ತಿಮಿರು
12.ಮೇಘನಾದ
14.ಕಲಕಂಠ 16.ದುಪ್ಪಟ್ಟು

ವಿಶ್ವಯೋಗಾಸನ ಚಾಂಪಿಯನ್‌ಶಿಪ್-2026 | 102 ಸ್ವರ್ಣಸಹಿತ ಒಟ್ಟು 114 ಪದಕ ಬಾಚಿಕೊಂಡ ಭಾರತ

ಜಾಗತಿಕ ವೇದಿಕೆಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದ ಭಾರತ

• **ಅಹಮದಾಬಾದ್:** ನಗರದಲ್ಲಿ ನಡೆದ ಉದ್ಘಾಟನಾ ವಿಶ್ವ ಯೋಗಾಸನ ಚಾಂಪಿಯನ್‌ಶಿಪ್‌ನಲ್ಲಿ ಆತಿಥೇಯ ಭಾರತ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. ಸೋಮವಾರ ಮುಕ್ತಾಯಗೊಂಡ ಈ ಕೂಟದಲ್ಲಿ ಭಾರತವು 102 ಚಿನ್ನದ ಪದಕಗಳೊಂದಿಗೆ ಒಟ್ಟು 114 ಪದಕಗಳನ್ನು ಬಾಚಿಕೊಳ್ಳುವ ಮೂಲಕ ಭರ್ಜರಿ ಪ್ರದರ್ಶನ ನೀಡಿದೆ.

ಜಪಾನ್ ಮೂರು ಚಿನ್ನ, ಮೂರು ಬೆಳ್ಳಿ ಮತ್ತು ಐದು ಕಂಚಿನ ಪದಕಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಅರ್ಜೆಂಟೀನಾದ ಕ್ರೀಡಾಪಟು ನಬೀಲಾ ಬರ್ರ್ರಾಜಾ ಅವರು ಎರಡು ಚಿನ್ನ ಮತ್ತು ಮೂರು ಬೆಳ್ಳಿ ಪದಕಗಳನ್ನು ಗೆಲ್ಲುವ ಮೂಲಕ ತಮ್ಮ ದೇಶವನ್ನು ಮೂರನೇ ಸ್ಥಾನದಲ್ಲಿ ನಿಲ್ಲಿಸಿದರು.

52 ಪದಕ ಗೆದ್ದ ನೇಪಾಳ: ಪಕ್ಕದ ರಾಷ್ಟ್ರ ನೇಪಾಳವು ಒಂದು ಚಿನ್ನ, 36 ಬೆಳ್ಳಿ ಮತ್ತು 15 ಕಂಚಿನ ಪದಕಗಳೊಂದಿಗೆ ಒಟ್ಟು 52 ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಐದನೇ ಸ್ಥಾನವನ್ನು ಪಡೆದುಕೊಂಡಿತು. ಉಜ್ಬೇಕಿಸ್ತಾನ್ ಒಂದು ಚಿನ್ನ, 13 ಬೆಳ್ಳಿ ಮತ್ತು 11 ಕಂಚಿನ ಪದಕಗಳೊಂದಿಗೆ ಒಟ್ಟು 25 ಪದಕಗಳನ್ನು ಗಳಿಸಿತು.





522 ಯೋಗಪಟುಗಳು ಭಾಗಿ: ಈ ಚಾಂಪಿಯನ್‌ಶಿಪ್‌ನಲ್ಲಿ 79 ದೇಶಗಳ ಒಟ್ಟು 522 ಕ್ರೀಡಾಪಟುಗಳು ಭಾಗವಹಿಸಿದ್ದರು. ಇವರಲ್ಲಿ 31 ದೇಶಗಳ ಕ್ರೀಡಾಪಟುಗಳು ಪದಕಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರು ಮತ್ತು ಹತ್ತು ದೇಶಗಳು ಕನಿಷ್ಠ ಒಂದು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡವು.

ಕ್ರೀಡಾ ಪ್ರಾಧಿಕಾರಗಳ ಬೆಂಬಲ: 2030ರ ಕಾಮನ್ವೆಲ್ತ್ ಕ್ರೀಡಾಕೂಟದ ಆತಿಥ್ಯ ವಹಿಸಲಿರುವ ಅಹಮದಾಬಾದ್‌ನಲ್ಲಿ ನಡೆದ ಈ ಚಾಂಪಿಯನ್‌ಶಿಪ್, ಪ್ರಾಚೀನ ಭಾರತೀಯ ಕಲೆ ಯೋಗಾಸನವನ್ನು ಜಾಗತಿಕ ಸ್ಪರ್ಧಾತ್ಮಕ ಕ್ರೀಡೆಯಾಗಿ ಪರಿವರ್ತಿಸುವಲ್ಲಿ ಮತ್ತು ಅದನ್ನು ಒಲಿಂಪಿಕ್ ಕ್ರೀಡಾಕೂಟದತ್ತ ಕೊಂಡೊಯ್ಯುವಲ್ಲಿ ಒಂದು ಐತಿಹಾಸಿಕ ಘಟ್ಟವಾಗಿದೆ.

ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಆಯುಷ್ ಸಚಿವಾಲಯ, ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್), ಗುಜರಾತ್ ಕ್ರೀಡಾ ಪ್ರಾಧಿಕಾರ, ಗುಜರಾತ್ ಪ್ರವಾಸೋದ್ಯಮ ಮತ್ತು ಗುಜರಾತ್ ಯೋಗಾಸನ ಕ್ರೀಡಾ ಸಂಘಗಳು ಈ ಚಾಂಪಿಯನ್‌ಶಿಪ್‌ಗೆ ಬೆಂಬಲ ನೀಡಿದ್ದವು.

6 ವಿಭಾಗಗಳಲ್ಲಿ ಸ್ಪರ್ಧೆ: ಆತಿಥೇಯ ಭಾರತವು 122 ಸದಸ್ಯರ ತಂಡವನ್ನು ಕಣಕ್ಕಿಳಿಸಿತ್ತು. ಕ್ರೀಡಾಪಟುಗಳು ಆರು ವಯೋಮಿತಿ ವಿಭಾಗಗಳಲ್ಲಿ ಸ್ಪರ್ಧಿಸಿದರು: ಸಬ್-ಜೂನಿಯರ್ (10-14 ವರ್ಷ), ಜೂನಿಯರ್ (14-18 ವರ್ಷ), ಸೀನಿಯರ್ (18-28 ವರ್ಷ), ಸೀನಿಯರ್ ಎ (28-35 ವರ್ಷ), ಸೀನಿಯರ್ ಬಿ (35-45 ವರ್ಷ) ಮತ್ತು ಸೀನಿಯರ್ ಸಿ (45-55 ವರ್ಷ).

ಶಾಂತಿ, ಮಾನವ ಐಕ್ಯತೆಯ ಮಾರ್ಗ

ವೀಡಿಯೊ ಸಂದೇಶವೊಂದರಲ್ಲಿ ಮಾತನಾಡಿದ ವಿಶ್ವ ಯೋಗಾಸನದ ಅಧ್ಯಕ್ಷ ಯೋಗಋಷಿ ಸ್ವಾಮಿ ರಾಮದೇವ್ ಜಿ ಮಹಾರಾಜ್, ವಿಶ್ವ ಯೋಗಾಸನ ಚಾಂಪಿಯನ್‌ಶಿಪ್ ಕೇವಲ ಒಂದು ಗಮ್ಯಸ್ಥಾನವಲ್ಲ; ಇದು ಜಾಗತಿಕ ಚಳವಳಿಯ ಆರಂಭವಾಗಿದೆ. ಯೋಗವು ಕೇವಲ ಕ್ರೀಡೆಯಲ್ಲ-ಅದು ಜೀವನಶೈಲಿ, ಆರೋಗ್ಯ, ಸಾಮರಸ್ಯ, ಶಾಂತಿ ಮತ್ತು ಮಾನವ ಐಕ್ಯತೆಯ ಮಾರ್ಗ ಎಂದು ತಿಳಿಸಿದರು. ಫಲಿತಾಂಶಗಳ ಪ್ರಕಾರ, ಆರ್ಟಿಸ್ಟಿಕ್ ಪೇರ್ ಸಬ್-ಜೂನಿಯರ್ ಮಹಿಳೆಯರ ವಿಭಾಗದಲ್ಲಿ ಭಾರತದ ಇಶಿಕಾ ಗುಹೈತ್ ಮತ್ತು ಇಶಾನ್ವಿ (90.89) ಚಿನ್ನದ ಪದಕ ಗೆದ್ದರೆ, ಜಾಂಬಿಯಾದ ನಿಯಾ ವಿಜಯ್‌ವರ್ಗೀಯ ಮತ್ತು ಆರೋಹಿ ಲೋಖಂಡೆ (82.38) ಬೆಳ್ಳಿ ಹಾಗೂ ಜಪಾನ್‌ನ ರೆಂಕಾ ಅಯೋಕಿ ಮತ್ತು ಇಚಿಕಾ ಶಿಮಿಜು (60.34) ಕಂಚಿನ ಪದಕ ಪಡೆದರು. ಜೂನಿಯರ್ ಮಹಿಳೆಯರ ವಿಭಾಗದಲ್ಲಿ ಭಾರತದ ದೀಕ್ಷಾ ಲೋಧಿ ಮತ್ತು ಸಿಮಾ ನಿಯೋಹಾನಿ (90.42) ಚಿನ್ನ, ನೇಪಾಳದ ಸ್ವಿಕ್ಷ್ಯ ಥಾಪಾ ಮತ್ತು ಪ್ರಜ್ಞಾ ಗೌತಮ್ (56.39) ಬೆಳ್ಳಿ ಹಾಗೂ ಜಾಂಬಿಯಾದ ಟಸಿಲಾ ಬ್ಲೆಸ್ಸಿಂಗ್ಸ್ ಫಿರಿ ಮತ್ತು ಡೆಬೊರಾ (41.30) ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಕಿರುಸುದ್ದಿ

ಭೂ ಒಡೆತನ ಯೋಜನೆಗೆ ಜಮೀನು ಖರೀದಿ

• **ಚಿತ್ರದುರ್ಗ:** ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ವತಿಯಿಂದ 2026-27ನೇ ಸಾಲಿಗೆ ಭೂ ಒಡೆತನ ಯೋಜನೆಯಡಿ ಆಸಕ್ತ ಭೂ ಮಾಲೀಕರಿಂದ ಜಮೀನು ಖರೀದಿಸಲಾಗುತ್ತಿದೆ. ಯೋಜನೆಯಡಿ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಸರ್ಕಾರದ ವತಿಯಿಂದ ಒಬ್ಬ ಫಲಾನುಭವಿಗೆ ತಲಾ 2 ಎಕರೆಯಂತೆ ಭೂಮಿ ಒದಗಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಿಂದ ಸುಮಾರು 10 ಕಿ.ಮೀ ವಿಸ್ತೀರ್ಣದ ಒಳಗಿರುವ ಜಮೀನನ್ನು ಖರೀದಿಸಲು ಇಲಾಖೆ ಮುಂದಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಹೊರತು ಪಡಿಸಿ, ಇತರೆ ಸಮುದಾಯದ ಯಾರಾದರೂ ಸರ್ಕಾರಕ್ಕೆ 2 ಎಕರೆ ಅಥವಾ 4 ಎಕರೆ ಜಮೀನನ್ನು ಮಾರಾಟ ಮಾಡಲು ಆಸಕ್ತಿ ಹೊಂದಿದ್ದರೆ, ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಎಸ್. ತಿಪ್ಪೇಸ್ವಾಮಿ ಮೊಬೈಲ್ ಸಂಖ್ಯೆ 9902327127 ಕರೆ ಮಾಡಬಹುದು.

ಟ್ರ್ಯಾಕ್ಟರ್ -ಕಾರು ನಡುವೆ ಅಪಘಾತ : ಓರ್ವ ಸಾವು

• **ತ್ಯಾಗರ್ತಿ :** ಸಾಗರ ತಾಲೂಕಿನ ಕಾಸ್ಪಾಡಿ ಸಮೀಪದ ರಾಷ್ಟ್ರೀಯ ಹೆದ್ದಾರಿ 69ನೇ ದರವಳ್ಳಿ ಬಳಿ ಟ್ರ್ಯಾಕ್ಟರ್ ಹಾಗೂ ಕಾರು ನಡುವೆ ಭೀಕರ ಅಪಘಾತ ಸಂಭವಿಸಿದ್ದು ಓರ್ವ ವ್ಯಕ್ತಿ ಸಾವನ್ನಪ್ಪಿದ್ದಾರೆ. ಕಾಸ್ಪಾಡಿಯಿಂದ ಆನಂದಪುರ ಕಡೆ ತೆರಳುತ್ತಿದ್ದ ಟ್ರ್ಯಾಕ್ಟರ್ ಹಾಗೂ ಆನಂದಪುರ ಕಡೆಯಿಂದ ಸಾಗರದ ಕಡೆ ತೆರಳುತ್ತಿದ್ದ ಕಾರಿನ ನಡುವೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ 29 ವರ್ಷದ ಶ್ರೀನಿವಾಸ್ ಸಾವನ್ನಪ್ಪಿದ್ದಾರೆ. ಕಾರಿನಲ್ಲಿದ್ದ ಹಲವರಿಗೆ ತೀವ್ರ ಗಾಯಗಳಾಗಿದ್ದು ಅವರನ್ನು ಸಾಗರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮತ್ತೊಮ್ಮೆ ಚರ್ಚೆಗೆ ಬಂದ ಯೋಜನೆ | ಭೂಸ್ವಾಧೀನ ಪ್ರಕ್ರಿಯೆ ತಿಂಗಳೊಳಗೆ ಪೂರ್ಣಗೊಳಿಸಲು ಸೂಚನೆ

2028ಕ್ಕೆ ಹೇಮಾವತಿ ಲಿಂಕ್ ಕೆನಾಲ್ ಪೂರ್ಣ

▸ ಆನಂದ್ ಬಿಲ್ಲೇಮನೆ ಗುಬ್ಬಿ

• **ತುಮಕೂರು:** ಜಿಲ್ಲೆಯ ನೀರಾವರಿ ಇತಿಹಾಸದಲ್ಲಿ ಹಲವು ವರ್ಷಗಳಿಂದ ವಿವಾದದ ಕೇಂದ್ರಬಿಂದುವಾಗಿರುವ ಹೇಮಾವತಿ ಲಿಂಕ್ ಕೆನಾಲ್ ಯೋಜನೆ ಮತ್ತೊಮ್ಮೆ ಚರ್ಚೆಗೆ ಬಂದಿದೆ. ಜಿಲ್ಲಾ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಮುಖ್ಯಮಂತ್ರಿ ಡಾ.ಜಿ ಪರಮೇಶ್ವರ್ ಭೂಸ್ವಾಧೀನ ಪ್ರಕ್ರಿಯೆಯನ್ನು 30 ದಿನಗಳೊಳಗೆ ಪೂರ್ಣಗೊಳಿಸಿ, 2028ರ ಮಾರ್ಚ್ ವೇಳೆಗೆ ಕಾಮಗಾರಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದು ಜಿಲ್ಲೆಯ ರೈತ ವಲಯದಲ್ಲಿ ಹೊಸ ಆತಂಕಕ್ಕೆ ಕಾರಣವಾಗಿದೆ.

ಏನಿದು ಹೇಮಾವತಿ ಲಿಂಕ್ ಕೆನಾಲ್?: ಹೇಮಾವತಿ ಯೋಜನೆಯ ಕೊನೆಯ ಭಾಗದಲ್ಲಿ ಲಭ್ಯವಾಗುವ ನೀರನ್ನು ಗುಬ್ಬಿ ತಾಲೂಕಿನ ಸುಂಕಾಪುರ ಸಮೀಪದಿಂದ ಪೈಪ್‌ಲೈನ್ ಮೂಲಕ ಕುಣಿಗಲ್ ಭಾಗಕ್ಕೆ ಸಾಗಿಸಿ, ಅಲ್ಲಿಂದ ಕುಣಿಗಲ್, ಮಾಗಡಿ ಹಾಗೂ ರಾಮನಗರ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಗಿದೆ. ಸರ್ಕಾರದ ಪ್ರಕಾರ, ಭವಿಷ್ಯದ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಲು ಮತ್ತು ನೀರಿನ ಕೊರತೆ ಎದುರಿಸುತ್ತಿರುವ ಪ್ರದೇಶಗಳಿಗೆ ಶಾಶ್ವತ ಪರಿಹಾರ ಒದಗಿಸಲು ಈ ಯೋಜನೆ ಅಗತ್ಯವಾಗಿದೆ.

ಹೋರಾಟದ ಕಿಡಿ: 2025ರ ಮೇ ತಿಂಗಳಲ್ಲಿ ಈ ಯೋಜನೆ ವಿರುದ್ಧ ತುಮಕೂರು ಜಿಲ್ಲೆಯಲ್ಲಿ ಭಾರೀ ಪ್ರತಿಭಟನೆ ನಡೆದಿತ್ತು. ರೈತ ಸಂಘಟನೆಗಳು, ವಿವಿಧ ಸಾಮಾಜಿಕ ಸಂಘಟನೆಗಳು ಹಾಗೂ ಮಠಾಧೀಶರು ಪಕ್ಷಾತೀತವಾಗಿ ಒಂದಾಗಿ ಯೋಜನೆ ವಿರೋಧಿಸಿ ಬೀದಿಗಿಳಿದಿದ್ದರು. ಗುಬ್ಬಿ ತಾಲೂಕಿನ ಸುಂಕಾಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು. ಪ್ರತಿಭಟನೆಯ ತೀವ್ರತೆಗೆ ಮಣಿದ ಸರ್ಕಾರ ತಾಂತ್ರಿಕ ಸಲಹಾ ಸಮಿತಿ ರಚಿಸುವ ಭರವಸೆಯೊಂದಿಗೆ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತ್ತು.



ರೈತರ ಆತಂಕ

ಯೋಜನೆಯಿಂದ ತುಮಕೂರು ಜಿಲ್ಲೆಯ ಕೊನೆಯ ಭಾಗದ ರೈತರಿಗೆ ಸಿಗುವ ನೀರಿನ ಪ್ರಮಾಣ ಕಡಿಮೆಯಾಗಬಹುದು. ಹೇಮಾವತಿ ಯೋಜನೆಯ ಮೂಲ ಉದ್ದೇಶ ಮತ್ತು ವಿನ್ಯಾಸಕ್ಕೆ ಧಕ್ಕೆಯಾಗಬಹುದು. ಭವಿಷ್ಯದಲ್ಲಿ ನೀರಿನ ಹಂಚಿಕೆ ಕುರಿತ ಹೊಸ ವಿವಾದಗಳು ಹುಟ್ಟಿಕೊಳ್ಳಬಹುದು. ಈಗಾಗಲೇ ನೀರಿನ ಕೊರತೆಯನ್ನು ಎದುರಿಸುತ್ತಿರುವ ಪ್ರದೇಶಗಳಿಗೆ ಇನ್ನಷ್ಟು ಅನ್ಯಾಯವಾಗಬಹುದು. ಮೊದಲು ಮೂಲ ಯೋಜನೆಯ ವ್ಯಾಪ್ತಿಯ ರೈತರಿಗೆ ಸಂಪೂರ್ಣ ನೀರು ತಲುಪುವಂತೆ ಮಾಡಬೇಕು. ನಂತರವೇ ಬೇರೆ ಪ್ರದೇಶಗಳಿಗೆ ನೀರು ವರ್ಗಾಯಿಸುವ ಬಗ್ಗೆ ಯೋಚಿಸಬೇಕು ಎಂಬುದು ಹೋರಾಟಗಾರರ ಪ್ರಮುಖ ವಾದವಾಗಿದೆ.

ರೈತರ ಆತಂಕಕ್ಕೆ ಕಾರಣವೇನು?: ತುಮಕೂರು ಮತ್ತು ಗುಬ್ಬಿ ಭಾಗದ ರೈತರ ವಾದ ಸರಳವಾಗಿದೆ. ಅವರ ಪ್ರಕಾರ, ಈಗಾಗಲೇ ಹೇಮಾವತಿ ನಾಲೆಯ ಮೂಲಕ ಕುಣಿಗಲ್ ಭಾಗಕ್ಕೆ ನೀರು ಹರಿಸುವ ವ್ಯವಸ್ಥೆ ಇದೆ. ಹೀಗಿರುವಾಗ ಹೊಸ ಲಿಂಕ್ ಕೆನಾಲ್ ನಿರ್ಮಾಣದ ಅಗತ್ಯವಿಲ್ಲ.

ಕುಣಿಗಲ್ ಭಾಗದ ಪ್ರತಿವಾದ: ಆದರೆ ಕುಣಿಗಲ್ ಭಾಗದ ಜನಪ್ರತಿನಿಧಿಗಳು ಹಾಗೂ ರೈತರು ಬೇರೆ ದೃಷ್ಟಿಕೋನ ಹೊಂದಿದ್ದಾರೆ. ಅವರ ಪ್ರಕಾರ, ತೆರೆದ ನಾಲೆಗಳ ಮೂಲಕ ನೀರು ಹರಿಸಿದಾಗ ಮಧ್ಯಂತರ ಪ್ರದೇಶಗಳಲ್ಲೇ ಹೆಚ್ಚಿನ ಪ್ರಮಾಣದ ನೀರು ಬಳಕೆಯಾಗುತ್ತದೆ. ಪರಿಣಾಮವಾಗಿ ಕೊನೆಯ ಭಾಗಗಳಿಗೆ ಸಮರ್ಪಕ ನೀರು ತಲುಪುವುದಿಲ್ಲ.

ಪೈಪ್‌ಲೈನ್ ಮೂಲಕ ನೇರವಾಗಿ ನೀರು ಸಾಗಿಸಿದರೆ ನೀರಿನ ನಷ್ಟ ಕಡಿಮೆಯಾಗುತ್ತದೆ. ಗುರಿ ಪ್ರದೇಶಕ್ಕೆ ನಿಗದಿತ ಪ್ರಮಾಣದ ನೀರು ತಲುಪುತ್ತದೆ. ಕುಡಿಯುವ ನೀರಿನ ಭದ್ರತೆ ಹೆಚ್ಚುತ್ತದೆ. ಇದರಿಂದ ಕುಣಿಗಲ್ ಭಾಗದಲ್ಲಿ ಯೋಜನೆಗೆ ಬೆಂಬಲ ವ್ಯಕ್ತವಾಗುತ್ತಿದೆ.

ರಾಜಕೀಯದ ನೆರಳು: ಈ ಯೋಜನೆಯ ಹಿಂದೆ ಹಲವು ವರ್ಷಗಳ ರಾಜಕೀಯ ಇತಿಹಾಸವಿದೆ. ಈ ಹಿಂದೆ ಡಿ.ಕೆ. ಶಿವಕುಮಾರ್ ಜಲಸಂಪನ್ಮೂಲ ಸಚಿವರಾಗಿದ್ದ ಅವಧಿಯಲ್ಲೇ ಯೋಜನೆಗೆ

ಮುಂದಿನ ಹಾದಿ: ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ವೇಗಗೊಳಿಸಿದರೆ ಯೋಜನೆ ಮತ್ತೆ ಕಾರ್ಯರೂಪಕ್ಕೆ ಬರುವ ಸಾಧ್ಯತೆ ಇದೆ. ಆದರೆ ತುಮಕೂರು ಜಿಲ್ಲೆಯ ರೈತರು ತಮ್ಮ ಪಾಲಿನ ನೀರಿನ ಭದ್ರತೆ ಕುರಿತ ಆತಂಕ ನಿವಾರಣೆಯಾಗದೆ ಯಾವುದೇ ಕಾಮಗಾರಿಗೆ ಅವಕಾಶ ನೀಡುವುದಿಲ್ಲ ಎಂಬ ಸ್ಪಷ್ಟ ಸಂದೇಶ ನೀಡಿದ್ದಾರೆ. ಹೀಗಾಗಿ ಹೇಮಾವತಿ ಲಿಂಕ್ ಕೆನಾಲ್ ವಿವಾದವು ಕೇವಲ ಒಂದು ನೀರಾವರಿ ಯೋಜನೆಯ ವಿಷಯವಲ್ಲ, ಇದು ನೀರಿನ ಹಂಚಿಕೆ, ರೈತರ ಹಕ್ಕು, ಪ್ರಾದೇಶಿಕ ಸಮತೋಲನ, ಕುಡಿಯುವ ನೀರಿನ ಅವಶ್ಯಕತೆ ಹಾಗೂ ರಾಜಕೀಯ ನಿರ್ಧಾರಗಳ ನಡುವೆ ನಡೆಯುತ್ತಿರುವ ಸಂಘರ್ಷದ ಪ್ರತೀಕವಾಗಿದೆ.

> ಮುಂದಿನ ದಿನಗಳಲ್ಲಿ ಸರ್ಕಾರ, ತಾಂತ್ರಿಕ ತಜ್ಞರು ಮತ್ತು ರೈತ ಸಂಘಟನೆಗಳ ನಡುವೆ ನಡೆಯುವ ಮಾತುಕತೆಗಳೇ ಈ ವಿವಾದದ ಭವಿಷ್ಯವನ್ನು ನಿರ್ಧರಿಸಲಿವೆ. ತುಮಕೂರು ಜಿಲ್ಲೆಯ ರೈತರ ಆತಂಕಗಳಿಗೆ ಸಮರ್ಪಕ ಉತ್ತರ ಸಿಗುತ್ತದೆಯೇ ಅಥವಾ ಹೋರಾಟ ಮತ್ತಷ್ಟು ತೀವ್ರಗೊಳ್ಳುತ್ತದೆಯೇ ಎಂಬುದು ಈಗ ಎಲ್ಲರ ಗಮನ ಸೆಳೆದಿರುವ ಪ್ರಶ್ನೆಯಾಗಿದೆ.
>
> ■ **ಲೋಕೇಶ್** , ಪ್ರಧಾನ ಕಾರ್ಯದರ್ಶಿ, ರಾಜ್ಯ ರೈತ ಸಂಘ, ಗುಬ್ಬಿ ತಾಲೂಕು

> ಯೋಜನೆ ಜಾರಿಯಾಗಿದ್ದೇ ಆದರೆ ತುಮಕೂರು ಜಿಲ್ಲೆ ಬರಡು ಭೂಮಿಯಾಗುವುದು ಖಂಡಿತ. ಆದ್ದರಿಂದ ಯಾವುದೇ ಕಾರಣಕ್ಕೂ ಯೋಜನೆ ಜಾರಿಯಾಗಲು ಬಿಡೆವು. ಈ ಹಿಂದೆ ಹೋರಾಟಗಾರರ ಮೇಲೆ ಕೇಸು ಹಾಕಿದ್ದಾರೆ ಇನ್ನೂ ನೂರು ಕೇಸ್ ಹಾಕಿದರೂ ಸರಿಯೇ ಯಾವುದೇ ಕಾರಣಕ್ಕೂ ಹಿಂಜರಿಯುವ ಪ್ರಶ್ನೆಯೇ ಇಲ್ಲ.
>
> ■ **ಬಲರಾಮಯ್ಯ ,** ಗುಬ್ಬಿ ಮಂಡಲ ಬಿಜೆಪಿ ಅಧ್ಯಕ್ಷ

> ಈ ಹಿಂದಿನಿಂದಲೂ ನಾವು ಹಾಗೂ ನಮ್ಮ ಪಕ್ಷ ಲಿಂಕ್ ಕೆನಾಲ್ ಯೋಜನೆಯನ್ನು ವಿರೋಧಿಸಿದೆ ಹಾಗೂ ಸಾಕಷ್ಟು ಹೋರಾಟ ಮಾಡಿದೆ ಮುಂದೆಯೂ ಸಹ ಈ ಅವೈಜ್ಞಾನಿಕ ಯೋಜನೆ ಜಾರಿಯಾಗಲು ಬಿಡುವ ಪ್ರಶ್ನೆಯೇ ಇಲ್ಲ. ಲಿಂಕ್ ಕೆನಾಲ್ ಹೋರಾಟಗಾರರ ಜೊತೆ ಚರ್ಚಿಸಿ ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸುತ್ತೇವೆ. ಜಿಲ್ಲೆಯವರೇ ಆದ ಪರಮೇಶ್ವರ್ ಈ ಯೋಜನೆ ಜಾರಿಗೆ ಮುಂದಾಗಿರುವುದು ಖಂಡಿತಾ ಸರಿಯಲ್ಲ.
>
> ■ **ಚನ್ನಬಸವಣ್ಣ,** ಅಧ್ಯಕ್ಷ, ಚನ್ನಬಸವೇಶ್ವರ ರೈತ ಸಂಘ(ರಿ) ಗುಬ್ಬಿ

ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ: ಆರೋಪಿಗಳ ಪತ್ತೆಗೆ ತಂಡ ರಚನೆ

• **ಭದ್ರಾವತಿ :** ಯುವಕನ ಮೇಲೆ ಮಾರಕಾಸ್ತ್ರಗಳಿಂದ ಭೀಕರವಾಗಿ ಹಲ್ಲೆ ನಡೆಸಿರುವ ಘಟನೆ ಹಳೇನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.

ಹಳೇನಗರ ಶ್ರೀ ಹಳದಮ್ಮ ದೇವಿ ದೇವಸ್ಥಾನ ಸಮೀಪದ ನಿವಾಸಿ, ಸುಮಾರು 35 ವರ್ಷ ವಯಸ್ಸಿನ ವಿಶ್ವ ಅಲಿಯಾಸ್ ಮುದ್ದೆಮೇಲೆ ಅನ್ವರ್ ಕಾಲೋನಿಯಲ್ಲಿ ಹಲ್ಲೆ ನಡೆಸಲಾಗಿದೆ. ಬೇಕರಿಯೊಂದರಲ್ಲಿ ಟೀ ಕುಡಿಯುವಾಗ ಏಕಾಏಕಿ ಹಲ್ಲೆ ನಡೆಸಲಾಗಿದೆ. ಕೈ ಕತ್ತರಿಸಿ ಹೋಗಿದ್ದು, ಕಾಲು ಮತ್ತು ತಲೆಗೆ ತೀವ್ರ ಗಾಯಗಳಾಗಿವೆ. ಹಲ್ಲೆಗೆ ನಿಖರವಾದ ಕಾರಣ ಇನ್ನೂ ತಿಳಿದು ಬಂದಿಲ್ಲ, ಘಟನಾ ಸ್ಥಳಕ್ಕೆ ನಗರ ವೃತ್ತ ನಿರೀಕ್ಷಕಿ ನಾಗಮ್ಮ ಹಾಗೂ ಹಳೇನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಹಲ್ಲೆ ನಡೆಸಿರುವವರು ಪರಾರಿಯಾಗಿದ್ದು, ಪತ್ತೆಗಾಗಿ ವಿಶೇಷ ತಂಡಗಳನ್ನು ರಚಿಸಲಾಗಿದೆ.

ಹೈನುಗಾರಿಕೆಯಲ್ಲಿ ತೊಡಗಿದ್ದ ವಿಶ್ವ : ವಿಶ್ವ ಮೂಲತಃ ಕೃಷಿ ಕುಟುಂಬದ ಯುವಕನಾಗಿದ್ದು, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದ. ಇತ್ತೀಚೆಗೆ ಸುಮಾರು ತಲಾ 11 ಲಕ್ಷ ರೂ. ಮೌಲ್ಯದ 2 ಕೋಣ ಗಳನ್ನು ಖರೀದಿಸಿದ್ದು, ಹಾಲು ಉತ್ಪಾದನೆ ಮಾಡುವ ಮೂಲಕ ಜೀವನ ನಿರ್ವಹಿಸುತ್ತಿದ್ದನು ಎಂದು ತಿಳಿದು ಬಂದಿದೆ. ಈ ನಡುವೆ ವಿಶ್ವನ ವಿರುದ್ಧ ಹಲವು ಪ್ರಕರಣಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದು, ಹಳೇ ವೈಷಮ್ಯದ ಹಿನ್ನಲೆಯಲ್ಲಿ ಈ ಕೃತ್ಯ ನಡೆದಿದೆ ಎನ್ನಲಾಗಿದೆ.

ವಿವಿಧ ಇಲಾಖೆ ವಿರುದ್ಧ 5 ಸುಮೋಟೊ ಪ್ರಕರಣ ದಾಖಲು

• **ಮಂಡ್ಯ:** ಉಪಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ ಅವರು ಕಳೆದ ಮೇ ತಿಂಗಳಲ್ಲಿ ಮಂಡ್ಯ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಸಮಾಜ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಪಂಚಾಯತ್ ಇಲಾಖೆ, ಮಂಡ್ಯ ನಗರಸಭೆ ಮತ್ತು ಇತರರ ವಿರುದ್ಧ ಐದು ಸ್ವಯಂ ಪ್ರೇರಿತ ಸುಮೋಟೊ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉಪಲೋಕಾಯುಕ್ತ ಅವರು ಪಂಚಾಯತ್‌ಗೆ ಅನಿರೀಕ್ಷಿತ ಭೇಟಿ ನೀಡಿದ ಸಮಯದಲ್ಲಿ ಮಾಹಿತಿ ನೀಡದ ಬೇಲೂರು ಮತ್ತು ಬೇವಿನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ದಾಖಲೆಗಳನ್ನು ಪರಿಶೀಲಿಸಲು ವಾರೆಂಟ್‌ಗಳನ್ನು ನೀಡಲಾಗಿದೆ.

ಮಂಡ್ಯ ನಗರ ಬಂದೀಗೌಡ ಬಡಾವಣೆಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ದಿಢೀರ್ ಭೇಟಿ ನೀಡಿದ ಸಂದರ್ಭದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಕೊಠಡಿಗಳ ಕಿಟಕಿಗಳಿಗೆ ಮೆಶ್ ಇರುವುದಿಲ್ಲವೆಂದು ವಿದ್ಯಾರ್ಥಿನಿಯರು ಆಪಾದಿಸಿದ್ದರು.

ಸದರಿ ವಿದ್ಯಾರ್ಥಿ ನಿಲಯದಲ್ಲಿ ನೀಡುವ ಊಟ ಹಾಗೂ ಉಪಹಾರ ರುಚಿಕರವಾಗಿರುವುದಿಲ್ಲ, ಆಗಿಂದಾಗ್ಗೆ ಉಪಾಹಾರಕ್ಕೆ ದೋಸೆ ಹಾಗೂ ಇಡ್ಲಿಯನ್ನು ನೀಡುತ್ತಿದ್ದು, ಸದರಿ ಉಪಾಹಾರದ ಬದಲಾಗಿ ಬೇರೆ ಆಹಾರಗಳನ್ನು ನೀಡುವಂತೆ ವಿದ್ಯಾರ್ಥಿನಿಯರು ಕೋರಲಾಗಿ, ರುಚಿಕರವಾದ, ಶುದ್ಧವಾದ ಹಾಗೂ ಪೌಷ್ಟಿಕಾಂಶ ಹೊಂದಿರುವ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ವಿದ್ಯಾರ್ಥಿನಿಯರಿಗೆ ನೀಡುವಂತೆ ವಾರ್ಡನ್‌ಗೆ ಆದೇಶಿಸಿದ್ದರು.

ವಿದ್ಯಾರ್ಥಿನಿಯರಿಗೆ ನೀಡಿದ್ದ ಹಾಸಿಗೆಗಳು ಕಿತ್ತು ಹೋಗಿದ್ದು, ಅದಕ್ಕೆ ಹೊದಿಕೆ ಇರುವುದಿಲ್ಲ, ತಲೆ ದಿಂಬು ಇರುವುದಿಲ್ಲ ಹಾಗೂ ಬ್ಲಾಂಕೆಟ್ ಇಲ್ಲದೇ ಇರುವುದು ಕಂಡುಬಂದಿತ್ತು. ಪ್ರಥಮ ಚಿಕಿತ್ಸೆ ಕಿಟ್ ಇರುವುದಿಲ್ಲ, ಕಾಲ ಕಾಲಕ್ಕೆ ವೈದ್ಯರು ಭೇಟಿ ನೀಡದೇ ಇರುವುದು ಹಾಗೂ ವಿದ್ಯಾರ್ಥಿನಿಯರು ಅನಾರೋಗ್ಯಕ್ಕೀಡಾದರೆ ಸೂಕ್ತ ಸಮಯದಲ್ಲಿ ಚಿಕಿತ್ಸೆಯನ್ನು ಕೊಡಿಸಲು ಯಾವುದೇ ವ್ಯವಸ್ಥೆಯನ್ನು ಕಲ್ಪಿಸದೇ ಇರುವುದು ಕಂಡುಬಂದಿತ್ತು.

ಕುಡಿಯಲು ಹಾಗೂ ಸ್ನಾನ ಮಾಡಲು ಬಿಸಿ ನೀರಿನ ವ್ಯವಸ್ಥೆ ಇಲ್ಲ, 144 ವಿದ್ಯಾರ್ಥಿನಿಯರಿಗೆ 1000 ಲೀಟರ್ ಸಾಮರ್ಥ್ಯದ ಕೇವಲ ಒಂದೇ ಸೋಲಾರ್ ಇದೆ. ಗ್ರಂಥಾಲಯ ಇಲ್ಲ, ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಅವಶ್ಯಕ ಪುಸ್ತಕಗಳನ್ನು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವಶ್ಯಕವಾಗಿರುವ ಪುಸ್ತಕಗಳನ್ನು ಇಟ್ಟಿರುವುದಿಲ್ಲವೆಂದು ವಿದ್ಯಾರ್ಥಿನಿಯರು ಆಪಾದಿಸಿದ್ದರು.

ಮಹರ್ಷಿ ವಾಲ್ಮೀಕಿ (ಎಸ್ಟಿ) ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ನಿಲಯಪಾಲಕಿ ವೈ.ಡಿ.ನಿರ್ಮಲ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಭೀಮರಾವ್ ವಡ್ಡರ್, ಸಹಾಯಕ ನಿರ್ದೇಶಕ ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ, ತಹಸೀಲ್ದಾರ್, ಉಪ ವಿಭಾಗಾಧಿಕಾರಿಗಳನ್ನು ಎದುರುದಾರರನ್ನಾಗಿ ಮಾಡಲಾಗಿದೆ.

ಮಾರ್ನಿಂಗ್ ಶೋ



ಅಂಬರಗುಡ್ಡದಲ್ಲಿ ದಿಟ್ಟ ಮಕ್ಕಳ ಸಾಹಸ..



ಈ ಹಿಂದೆ ನಾಗರಹೊಳೆ, ಸಿಂಹದ ಮರಿಸೈನ್ಯ, ಪುಟಾಣಿ ಏಜೆಂಟ್ ಹೀಗೆ ಮಕ್ಕಳ ಸಾಹಸಗಾಥೆಯ ಚಿತ್ರಗಳು ಪ್ರೇಕ್ಷಕರ ಗಮನ ಸೆಳೆದಿದ್ದವು, ಇತ್ತೀಚೆಗೆ ಅಂಥಾ ಮಕ್ಕಳ ಸಾಹಸದ ಚಿತ್ರಗಳ ನಿರ್ಮಾಣ ತುಂಬಾ ಕಮ್ಮಿಯಾಗಿದೆ. ಅಪರೂಪಕ್ಕೆ ಎಂಬಂತೆ ಆಗೊಂದು ಈಗೊಂದು ತಯಾರಾಗುತ್ತಿವೆ, ಇದೀಗ ಹೊಸ ತಂಡವೊಂದು ಅಂಥಾ ಸಿನಿಮಾ ಮೂಲಕ ಪ್ರೇಕ್ಷಕರ ಮುಂದೆ ಬರಲು ತಯಾರಾಗಿದೆ, 'ಅಂಬರಗುಡ್ಡ' ಎಂಬ ಟೈಟಲ್ ಇಟ್ಟುಕೊಂಡು ದಟ್ಟ ಕಾಡಿನಲ್ಲಿರೋ ಅಂಬರಗುಡ್ಡ ಎಂಬಲ್ಲಿಗೆ ಹೋಗಲು ದಿಟ್ಟಮಕ್ಕಳು ಮಾಡಿದ ಸಾಹಸದ ಕಥೆಯನ್ನು ಸಿನಿಮಾರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ವಿಷ್ಣು ತೇಜ.

ವಿಷ್ಣುತೇಜ ಅವರು ನಿರ್ದೇಶನದ ಜೊತೆಗೆ ಪ್ರಮುಖ ಪಾತ್ರದಲ್ಲಿ ನಟಿಸಿದ್ದಲ್ಲದೆ, ಶ್ರೀವಿಷ್ಣುತೇಜ ಫಿಲಂಸ್ ಮೂಲಕ ನಿರ್ಮಾಣ ಸಹ ಮಾಡಿದ್ದಾರೆ. ಸಾಕಷ್ಟು ಪ್ರತಿಭಾವಂತ ಮಕ್ಕಳು ಅಂಬರಗುಡ್ಡ ಸಿನಿಮಾದಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು, ಅಂಬರ ಗುಡ್ಡಕ್ಕೆ ಹೋಗುವ ಮಕ್ಕಳು ಅಲ್ಲಿ ಏನೆಲ್ಲ ಸವಾಲುಗಳನ್ನು ಎದುರಿಸುತ್ತಾರೆ, ಹಾಗೂ ಅವರಿಗೆ ಏನೆಲ್ಲ ಕಷ್ಟಗಳು ಎದುರಾಗುತ್ತವೆ ಎಂಬುದನ್ನು ಚಿತ್ರದಲ್ಲಿ ನೋಡಬಹುದು.

ಈ ಚಿತ್ರದಲ್ಲಿ ತನಿಷಾಗೌಡ, ಖುಷಿಗೌಡ, ಗೀತಾ, ಚಂದ್ರು, ಗಣೇಶ ಸೇರಿದಂತೆ ಅನೇಕ ಮಕ್ಕಳು ನಟಿಸಿದ್ದಾರೆ. ನಟಿ ರಿಷಾಂತಿ ಅವರು ಟೀಚರ್ ಪಾತ್ರದಲ್ಲಿ ನಟಿಸಿದ್ದಾರೆ, ಅಂಬರಗುಡ್ಡ ಚಿತ್ರದ ಟ್ರೈಲರ್ ರಿಲೀಸ್ ಮಾಡಿ ಒಬ್ಬರಾಗಿ ಮಾತನಾಡಿದ ಪುಟ್ಟ ಮಕ್ಕಳು, ತಾವು ಮೊದಲಬಾರಿಗೆ ಸಿನಿಮಾದಲ್ಲಿ ನಟಿಸಿರುವ ಖುಷಿ ಹಾಗೂ ಅಲ್ಲಿ ಆದ ಅನುಭವವನ್ನು ಹೇಳಿಕೊಂಡು ಸಂತಸ ವ್ಯಕ್ತಪಡಿಸಿದರು.

ಜೊತೆಗೆ ಕಾಡಿನಲ್ಲಿ ಶೂಟಿಂಗ್ ಮಾಡುವಾಗ ತುಂಬಾ ಕಷ್ಟವಾಗಿತ್ತು, ಮಳೆ ಬೇರೆ ಸಿಕ್ಕಾಪಟ್ಟೆ ಇತ್ತು ಎಂದೂ ಹೇಳಿದರು. ನಿರ್ದೇಶಕ ವಿಷ್ಣು ತೇಜ ಅವರ ಮಗಳು ಕೂಡ ಅಂಬರಗುಡ್ಡ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.



ಈ ವೇಳೆ ನಿರ್ದೇಶಕ ವಿಷ್ಣುತೇಜ ಮಾತನಾಡಿ '30 ವರ್ಷಗಳ ನಂತರ ಇಂಥಾ ಮಕ್ಕಳ ಸಾಹಸದ ಕಥೆ ಬರುತ್ತಿದೆ, ಸಹ್ಯಾದ್ರಿ ಬೆಟ್ಟದ ಸುಳ್ಳಳ್ಳಿ ಎಂಬಲ್ಲಿ ಅಂಬರಗುಡ್ಡವಿದೆ. ಅಲ್ಲಿ ಚಿನ್ನದ ನಿಕ್ಷೇಪವಿದೆ ಎಂಬುದು ದೊಡ್ಡ ಸುದ್ದಿಯಾಗಿತ್ತು, ಅದನ್ನೇ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ, ಮಕ್ಕಳನ್ನೆಲ್ಲ ಒಟ್ಟಿಗೆ ಸೇರಿಸಿ ಶೂಟಿಂಗ್ ಮಾಡುವುದು ನಿಜಕ್ಕೂ ಸಾಹಸವೇ ಆಗಿತ್ತು. ಮಕ್ಕಳಲ್ಲಿ ಒಬ್ಬರದು ಒಂದು ರೀತಿಯ ತರ್ಲೆ, ತುಂಟಾಟ. ಶೂಟಿಂಗ್ ಮಾಡುವಾಗ ಮಗಳಿಗೆ ಹಾವು ಕಚ್ಚಿತ್ತು. ಬಳಿಕ ಚಿಕಿತ್ಸೆ ಕೊಡಿಸಿ ಮತ್ತೆ ಶೂಟಿಂಗ್ ಮಾಡಿದೆವು. ಚಿತ್ರವೀಗ ಬಿಡುಗಡೆಗೆ ಸಿದ್ದವಾಗಿದೆ, ಜೂನ್ 26ಕ್ಕೆ ರಿಲೀಸ್ ಮಾಡಬೇಕೆಂಬ ಪ್ಲಾನಿದೆ ಎಂದರು.

ಅಂಬರಗುಡ್ಡ ಸಿನಿಮಾವನ್ನು ಕೊಲ್ಲೂರು ಮೂಕಾಂಬಿಕೆ ಫಾರೆಸ್ಟ್, ಕುಂದಾಪುರ, ಶಿವಮೊಗ್ಗ, ಕೊಡಚಾದ್ರಿ, ಗೋಕರ್ಣ, ಗೇರುಸೊಪ್ಪೆ ಬಳಿಯ ಸಣ್ಣ ಹಳ್ಳಿಯ ಸುತ್ತಮುತ್ತಲ ಅರಣ್ಯ ಪ್ರದೇಶದಲ್ಲಿ ಚಿತ್ರೀಕರಿಸಲಾಗಿದೆ. ಈ ಸಿನಿಮಾಗೆ ಆಕಾಶ್ ಪರ್ವ ಅವರ ಸಂಗೀತ ಸಂಯೋಜನೆ, ದೀಪಕ್‌ಕುಮಾರ್ ಅವರ ಛಾಯಾಗ್ರಹಣವಿದೆ.

ಪ್ರೇಮದ ಊರಲ್ಲಿ ತಂದೆಯ ಹಾಡು



ಕನ್ನಡ ಚಿತ್ರರಂಗದಲ್ಲಿ ತಾಯಿ ಪ್ರೀತಿಯ ಕುರಿತಂತೆ ಸಾಕಷ್ಟು ಹಾಡುಗಳು ಮೂಡಿಬಂದಿವೆ. ಅದೇರೀತಿ ತಂದೆಯ ಪ್ರೀತಿಯನ್ನು ವ್ಯಕ್ತಪಡಿಸುವ, ಸಂಭ್ರಮಿಸುವ ಹಾಡುಗಳು ಅಪರೂಪ. ಅಂಥ ಮತ್ತೊಂದು ಹಾಡು ಮನೋಜ್‌ಕುಮಾರ್ ಅವರ ನಿರ್ದೇಶನದ ಪ್ರೇಮದ ಊರಲಿ ಸಿನಿಮಾ ತಂಡದಿಂದ ಹೊರಬಂದಿದ್ದು, ಅದೀಗ ಸಂಗೀತ ಪ್ರೇಮಿಗಳನ್ನು ಸೆಳೆಯುತ್ತಿದೆ. ಅದುವೇ ಅಪ್ಪನಂತ ಅಪ್ಪನಿವನು ಎಂಬ ಸಾಹಿತ್ಯ ಇರುವ ಹಾಡು,

ಒಂದು ಮ್ಯೂಸಿಕಲ್ ಲವ್‌ಸ್ಟೋರಿ ಕಥಾಹಂದರ ಹೊಂದಿರುವ ಪ್ರೇಮದ ಊರಲ್ಲಿ, ಚಿತ್ರತಂಡ ಅಪ್ಪನ ಪ್ರೀತಿ, ಪ್ರೇಮದ ಕುರಿತಾದ ಸಾಹಿತ್ಯ ಇರುವ ಚೆಂದದ ಹಾಡನ್ನು ಬಿಡುಗಡೆ ಮಾಡಿದೆ.

ನಿರ್ದೇಶಕ ಮನೋಜ್‌ಕುಮಾರ್ ಅವರು ಕ್ಯಾಚಿ ಮ್ಯಾಚಿ ಪದಗಳನ್ನು ಪೋಣಿಸಿ ಅಪ್ಪನ ಶ್ರಮವನ್ನು ಈ ಹಾಡಲ್ಲಿ ವರ್ಣಿಸಿದ್ದಾರೆ. ಸಿದ್ದಾರ್ಥ್ ಸುಂದರ್ ಅವರು ಆ ಹಾಡಿಗೆ ಧ್ವನಿಯಾಗಿದ್ದು, ಸುನಾದ್ ಗೌತಮ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ.

ಅಪ್ಪನಂತ ಅಪ್ಪನಿವನು ಎಂಬ ಸುಂದರ ಸಾಹಿತ್ಯ ಹೊಂದಿರುವ ಈ ಗೀತೆಯಲ್ಲಿ ತಂದೆಯ ಪಾತ್ರದಲ್ಲಿ ರಂಗಾಯಣ ರಘು ಹಾಗೂ ಮಗನ ಪಾತ್ರದಲ್ಲಿ ಶ್ರೀರಾಮ್ ಅವರು ಅಭಿನಯಿಸಿದ್ದಾರೆ. ರಂಗಾಯಣ ರಘು ಅವರೂ ಸಹ ಈ ಹಾಡಿಗೆ ಹೆಜ್ಜೆ ಹಾಕಿರುವುದು ವಿಶೇಷ.

ಪ್ರೇಮದ ಊರಲ್ಲಿ ಸಿನಿಮಾದಲ್ಲಿ ಶ್ರೀರಾಮ್ ಅವರು ನಾಯಕನಾಗಿ ನಟಿಸಿದ್ದು, ನಟಿಯರಾದ ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ಅವರೂ ಜೊತೆಯಾಗಿದ್ದಾರೆ. ರಂಗಾಯಣ ರಘು ಅವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಈ ಹಿಂದೆ 'ಅಕ್ಷಿ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಮನೋಜ್‌ಕುಮಾರ್ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ವೆನಿಲ್ಲಾ ಎಂಟರ್‌ಟೈನ್ಮೆಂಟ್, ಜಾನಕಮ್ಮ ಪ್ರೊಡಕ್ಷನ್ ಅಡಿ ಮಮತಾ ದೇವೇಂದ್ರ, ಪ್ರಶಾಂತ್ ಹಾಗೂ ರಮೇಶ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸುನಾದ ಗೌತಮ್ ಅವರ ಸಂಗೀತ ನಿರ್ದೇಶನ, ರಾಜ್‌ಕಾಂತ್ ಎಸ್.ಕೆ. ಅವರ ಛಾಯಾಗ್ರಹಣ, ಹರ್ಷಿತ್ ಪ್ರಭು ಅವರ ಸಂಕಲನ ಈ ಚಿತ್ರಕ್ಕಿದೆ.

ನೀ ನಂಗೆ ಅಲ್ಲವಾ ಯುವ ಪ್ರೇಮಕಥೆ



ಸುರಮ್ ಮೂವೀಸ್ ಲಾಂಛನದಲ್ಲಿ ಈ ಹಿಂದೆ ನಿದ್ರಾದೇವಿ ನೆಕ್ಸ್ಟ್‌ಡೋರ್ ಎಂಬ ಚಿತ್ರವನ್ನು ನಿರ್ಮಿಸಿದ್ದ ಜಯರಾಮ್ ದೇವಸಮುದ್ರ ಅವರು ಇದೀಗ ಮತ್ತೊಂದು ಚಿತ್ರ ನಿರ್ಮಾಣಕ್ಕೆ ಕೈಹಾಕಿದ್ದು ಆಗಲೇ ಚಿತ್ರವನ್ನು ಬಿಡುಗಡೆ ಹಂತಕ್ಕೂ ತಂದಿದ್ದಾರೆ, ಈ ಚಿತ್ರಕ್ಕೆ ಮನೋಜ್ ಪಿ. ನಡಲುಮನೆ ಅವರು ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಚಿತ್ರದಲ್ಲಿ ರಾಹುಲ್ ಅರ್ಕಟ್, ಕಾಶಿಮಾ ನಾಯಕ - ನಾಯಕಿಯಾಗಿ ನಟಿಸಿದ್ದಾರೆ. ಇತ್ತೀಚೆಗೆ ನೀ ನಂಗೆ ಅಲ್ಲವಾ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ನೆರವೇರಿತು. ಕ.ರಾ.ವೇ. ಅಧ್ಯಕ್ಷರಾದ ಪ್ರವೀಣ್ ಶೆಟ್ಟಿ ಹಾಗೂ ನಿರ್ದೇಶಕ ಪವನ್ ಒಡೆಯರ್ ಈ ಚಿತ್ರದ ಟೀಸರನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಸರಿಗಮಪ ಯೂ ಟ್ಯೂಬ್ ಚಾನಲ್‌ನಲ್ಲಿ ಈ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ.



ಈ ಸಂದರ್ಭದಲ್ಲಿ ನಿರ್ದೇಶಕ ಮನೋಜ್ ಪಿ ನಡಲುಮನೆ ಮಾತನಾಡುತ್ತ ಆನ ಚಿತ್ರದ ಮೂಲಕ ನನ್ನ ಸಿನಿಮಾಯಾನ ಶುರುವಾಯಿತು. ನೀ ನಂಗೆ ಅಲ್ಲವಾ ನನ್ನ ನಿರ್ದೇಶನದ ಮೂರನೇ ಚಿತ್ರ. ಶೀರ್ಷಿಕೆ ಕೇಳಿದ ಕೂಡಲೇ ಇದೊಂದು ಅಪ್ಪಟ ಪ್ರೇಮಕಥಾನಕ ಎನ್ನುವುದು ತಿಳಿಯುತ್ತದೆ. ಆದರೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ನಿರ್ಮಾಪಕರು ಯಾವುದೇ ಕೊರತೆ ಬಾರದ ಹಾಗೆ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಬೆಂಗಳೂರು, ಮಂಗಳೂರು, ಉಡುಪಿ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ನಾಯಕ ರಾಹುಲ್ ಅರ್ಕಟ್, ನಾಯಕಿ ಕಾಶಿಮಾ ಇಬ್ಬರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ತಂತ್ರಜ್ಞರ ಕೆಲಸವೂ ಚಿತ್ರಕ್ಕೆ ಪೂರಕವಾಗಿದೆ. ಬರುವ ಆಗಸ್ಟ್ ತಿಂಗಳಲ್ಲಿ ನಮ್ಮ ಚಿತ್ರ ತೆರೆಗೆ ಬರಲಿದೆ ಎಂದು ತಿಳಿಸಿದರು.

ನಿರ್ಮಾಪಕ ಜಯರಾಮ್ ದೇವಸಮುದ್ರ ಮಾತನಾಡಿ ನಮ್ಮ ಸುರಮ್ ಮೂವೀಸ್ ಲಾಂಛನದಲ್ಲಿ ನಿರ್ಮಾಣವಾದ ಮೊದಲ ಚಿತ್ರ ನಿದ್ರಾದೇವಿ ನೆಕ್ಸ್ಟ್ ಡೋರ್ ಡೋರ್. ನಿರ್ದೇಶಕರು ಹೇಳಿದ ಈ ಚಿತ್ರದ ಕಥೆ ಬಹಳ ಇಷ್ಟವಾಯಿತು. ಜನರಿಗೂ ನಮ್ಮ ಚಿತ್ರ ಇಷ್ಟವಾಗುವ ಭರವಸೆ ಇದೆ ಎಂದು ಹೇಳಿದರು.

ಚಿತ್ರದ ನಾಯಕನಟ ರಾಹುಲ್ ಅರ್ಕಟ್ ಮಾತನಾಡಿ ನನ್ನ ಪಾತ್ರದ ಹೆಸರು ಲಕ್ಕಿ. ಪಾತ್ರ ಹಾಗೂ ಚಿತ್ರದ ಕಾನ್ಸೆಪ್ಟ್ ಎರಡೂ ಚೆನ್ನಾಗಿದೆ. ನಟ ಶ್ರೀಮುರಳಿ ಅವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ ಎಂದರು, ನಾಯಕಿ ಕಾಶಿಮಾ ಮಾತನಾಡುತ್ತ ಈ ಚಿತ್ರದಲ್ಲಿ ನಾನು ಖುಷಿ ಎಂಬ ಯುವತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇದು ನನ್ನ ಮೊದಲ ಚಿತ್ರ ಎಂದು ಹೇಳಿದರು. ಸಂಗೀತ ನಿರ್ದೇಶಕ ಸೂರಜ್ ಜೋಯಿಸ್ ಮಾತನಾಡಿ ಚಿತ್ರದ ಹಾಡುಗಳ ವಿಶೇಷತೆಯ ಬಗ್ಗೆ ಹೇಳಿದರು, ಉಳಿದಂತೆ ಚಿತ್ರತಂಡದ ಸದಸ್ಯರು ಚಿತ್ರದ ಕುರಿತಂತೆ ಮಾತನಾಡಿದರು. ಉದಯಲೀಲಾ ಅವರ ಛಾಯಾಗ್ರಹಣವಿರುವ ನೀ ನಂಗೆ ಅಲ್ಲವಾ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ವಿಜೇತ ನಾಗೇಂದ್ರ ಉಜ್ಜನಿ ಅವರ ಸಂಕಲನವಿದೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26